ಶಾಸನ ರಚನಾ ಕಾರ್ಯಕಲಾಪಗಳು

''ಕರ್ನಾಟಕ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ ಎರಡನೇ (ತಿದ್ದುಪಡಿ) ವಿಧೇಯಕ, ೧೯೮೬.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು (ಮುಖ್ಯ ಮಂತ್ರಿಗಳ ಪರವಾಗಿ).—

ಮಾನ್ಯ ಅಧ್ಯಕ್ಷರೇ ಕರ್ನಾಟಕ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ '' ಕರ್ನಾಟಕ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವವನ್ನು ಮಂಡಿಸಲಾಯಿತು ಮತ್ತು ಅನುಮತಿಯನ್ನು ನೀಡಲಾಯಿತು

೧೯೮೬ನೇ ಇಸವಿ ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).–ಮಾನ್ಯಅಧ್ಯಕ್ಷರೇ, ಶ್ರೀ ಎಸ್.ಆರ್. ಬೊಮ್ಮಾಯಿ(ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿ) ಅವರ ಪರವಾಗಿ '' ೧೯೮೬ನೇ ಇಸವಿಯ ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕ''ವನ್ನು ಸಭೆಯ ಮಂಡಿಸಲ ತಮ್ಮ ಒಪ್ಪಿಗೆಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೬ನೇ ಇಸವಿಯ ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ೧೯೮೬ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು ನಾಳೆ ತೆಗೆದುಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಬಹುದು.

೧೯೮೬ನೇ ಇಸವಿಯ ಕರ್ನಾಟಕ ನಗರಸಭೆಗಳ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—೧೯೮೬ನೇ ಇಸವಿಯ ಕರ್ನಾಟಕ ನಗರಸಭೆಗಳ (ತಿದ್ದುಪಡಿ) ವಿಧೇಯಕ ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮುಖ್ಯಾಂಶಗಳನ್ನು ಮಾತ್ರ ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಮೊದಲನೆಯದು ಈ ತಿದ್ದು ಪಡಿಯಲ್ಲಿ ಅಡಕವಾಗಿರತಕ್ಕಂಥ ಮೊದಲನೇ ವಿಷಯ. ವಿಧಾನಸಭೆಯಲ್ಲಿ ನಾಮಕರಣ ಮಾಡಿರತಕ್ಕಂಥ ಸದಸ್ಯರು ಬೆಂಗಳೂರಿನವರಾಗಿದ್ದು ಬೆಂಗಳೂರಿನಲ್ಲಿ ಸತತವಾಗಿ ವಾಸಮಾಡುತ್ತಿದ್ದರೆ, ಅವರೂ ಕೂಡ ಇತರ ಶಾಸಕರಂತೆ ಬೆಂಗಳೂರು ನಗರಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ನೀಡತಕ್ಕದ್ದು. ನಮ್ಮಲ್ಲಿ. ಒಬ್ಬರು ಇದ್ದಾರೆ. ನಾಮಕರಣ ಮಾಡಲಾಗಿರುವ ಸದಸ್ಯರಿಗೆ ಈಗ ಅಂತಹ ಅವಕಾಶಇಲ್ಲ. ಬೆಂಗಳೂರು ನಗರಸಭೆಯ ಕಾರ್ಯಕಲಾಪಗಳಲ್ಲಿ ಅವರಿಗೆ ಓಟಿನ ಹಕ್ಕು ಇರುವುದಿಲ್ಲ. ಬೇರೆ ಸದಸ್ಯರಿಗೆ ಇದೆ, ಆದರೆ ನಾಮಕರಣ ಮಾಡಿದ ಸದಸ್ಯರಿಗೆ ಇಲ್ಲ. ಅವರು ಈ ನಗರಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಈ ತಿದ್ದುಪಡಿ ಸಹಾಯಕ ವಾಗುತ್ತದೆ. ಆಮೇಲೆ ಕಾರ್ಪೊರೇಷನ್ ಆಕ್ಟ್ ಪ್ರಕಾರ ಸ್ಥಾಯಿ ಸಮಿತಿಇದೆ. ಬೆಂಗಳೂರಿನ ವಿಷಯವನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ನಗರಸಭೆಯಲ್ಲಿ ಆರು ಸ್ಥಾಯಿ ಸಮಿತಿಗಳು ಇರಬೇಕೆಂದು ಇದರಲ್ಲಿ ಹೆಚ್ಚಿಸಿರತಕ್ಕಂಥ ವಿಷಯ ಪ್ರಸ್ತಾಪವಾಗಿದೆ. ಆಮೇಲೆ, ಈಗಿರತಕ್ಕಂಥ ಕಾನೂನು ಪ್ರಕಾರ ಮೇಯರ್ ಅವರಿಗೆ ಹತ್ತು ಸಾವಿರದವರೆಗೆ ವಾರ್ಷಿಕವಾಗಿ ಖರ್ಚು ಮಾಡಬಹುದು ಎಂದಿದೆ. ಇದು ಹಿಂದೆ ಮಾಡಿದ್ದುದು. ಇವನ್ನು ಹೆಚ್ಚಿಸಬೇಕೆಂದು ಮನವಿಗಳು ಬಂದಿವೆ. ಆದ್ದರಿಂದ ಇದರ ಮೊತ್ತವನ್ನು ಗರಿಷ್ಟ ಪ್ರಮಾಣದಲ್ಲಿ ಅಂದರೆ ೨೫ ಸಾವಿರ ರೂಪಾಯಿಗಳಿಗೆ ವರ್ಷಕ್ಕೆ ಏರಿಸಬೇಕೆಂದು ಇದೆ. ಹಾಗೆಯೇ ಬೇರೆ ಕಾರ್ಪೊರೇಷನ್‌ಗಳಿಗೆ ಯಾವ ಯಾವ ಪ್ರಮಾಣದಲ್ಲಿ ಹೆಚ್ಚಿಸಬಹುದೆಂದು ರೂಲ್ ಮಾಡತಕ್ಕದ್ದು. ಇದನ್ನು ಈ ತಿದ್ದುಪಡಿಯಲ್ಲಿ ಸೇರಿಸಿದ್ದೇವೆ. ನಂತರ, ಈಗ ನಗರಸಭೆಗಳಲ್ಲಿ ಐದುಸಾವಿರ ರೂಪಾಯಿಗಳಿಗೆ ಮೀರಿರ ತಕ್ಕಂಥ ಕಂಟ್ರಾಕ್ಟ್‌ಗಳನ್ನು ಕೊಡಬೇಕಾದರೆ ಟೆಂಡರ್ ಕರೆದು ಕೊಡಬೇಕೆಂದು ಇದೆ. ಇದು ಬಹಳ ಹಿಂದೆ ಮಾಡಿದ್ದುದು. ರೂಪಾಯಿಯ ಮೌಲ್ಯದ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಈ ಮೊತ್ತವನ್ನು ೧೦ ಸಾವಿರ ರೂಪಾಯಿಗಳಿಗೆ ಏರಿಸಬೇಕೆಂದು ಒಂದು ತಿದ್ದುಪಡಿ ಕೂಡ ಇಲ್ಲಿದೆ. ಆಮೇಲೆ, ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತ ಕಟ್ಟಡಗಳು ಮತ್ತು ಇತರೆ ಕಟ್ಟಡಗಳು ಬಂದರೆ, ಅವುಗಳನ್ನು ಕೆಡಹುವುದು ಇಲ್ಲವೇ ತೆಗೆಯತಕ್ಕ ಅಧಿಕಾರವನ್ನು ಕಾರ್ಪೊರೇಷನ್ನಿನ ಕಮಿಷನರ್ ಅವರಿಗೆ ಕೊಡತಕ್ಕ ವಿಷಯವನ್ನು ಸೇರಿಸಲಾಗಿದೆ. ಹಾಗೆಯೇ ಕಾರ್ಪೊರೇಷನ್‌ಗಳ ಮೇಲೆ ಹಾಕತಕ್ಕಥ ಕೇಸ್‌ಗಳಲ್ಲಿ ಇಂಟರಿಮ್ ಆರ್ಡರನ್ನು ಕಾರ್ಪೊರೇಷನ್ ವಿರುದ್ಧವಾಗಿ ಕೊಡತಕ್ಕ ಸಮಯದಲ್ಲಿ, ಈ ರೀತಿಯಾಗಿ ಇಂಟರಿಮ್ ರಿಲೀಫ್ ಆರ್ಡರ್‌ನ್ನು ಕೊಡುವುದಕ್ಕೆ ಮುಂಚೆ ಕಾರ್ಪೊರೇಷನ್ನಿಗೆ ನೋಟೀಸ್ ಕೊಡುವುದು ಮತ್ತು ಕಾರ್ಪೊರೇಷನ್ನಿನ ವಕೀಲರನ್ನು ಕೇಳಿ ನಂತರ ಕೋರ್ಟು ತನ್ನ ಅಧಿಕಾರವನ್ನು ಚಲಾಯಿಸುವುದಕ್ಕೆ ಇದರಲ್ಲಿ ತಿದ್ದುಪಡಿಯನ್ನು ಮಾಡಿದ್ದೇವೆ. ಮಿಕ್ಕ ಎಲ್ಲವು ಸಾಮಾನ್ಯವಾಗಿ ಈ ತಿದ್ದುಪಡಿಯ ಹಿನ್ನೆಲೆಯಲ್ಲಿ ಮಾಡಬಹುದಾದಂಥ ಸಾಮಾನ್ಯವಾದ ತಿದ್ದುಪಡಿಗಳು. ಒಟ್ಟಾರೆ ನಾನು ಹೇಳುವುದಾದರೆ ಇದು ೧೯೭೬ನೇ ಇಸವಿಯಲ್ಲಿ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಆ್ಯಕ್ಟ್ ಏನು ಬಂತು, ಹತ್ತು ವರ್ಷಗಳ ಈ ಹಿನ್ನಡೆಯಿಂದ ಏನೇನು ತಿದ್ದುಪಡಿಗಳು ಬೇಕು ಎಂದು ಯೋಚನೆ ಮಾಡಿ, ಮೇಯರುಗಳ ಸಮ್ಮೇಳನಗಳಲ್ಲಿ ಮತ್ತು ಇತರ ಚುನಾಯಿತ ಪ್ರತಿನಿಧಿಗಳಿಂದ ಬಂದಿರತಕ್ಕ ಹಲವಾರು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕನಿಷ್ಟ ಪ್ರಮಾಣದ ತಿದ್ದುಪಡಿಯನ್ನು ತಂದಿದ್ದೇವೆ. ಇವು ಯೋಗ್ಯವಾದ ತಿದ್ದುಪಡಿಗಳು. ಮಾನ್ಯ ಸಭೆ ಇದಕ್ಕೆ ಸಮ್ಮತಿಯನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

THE KARNATAKA TAX ON ENTRY OF GOODS INTO LOCAL AREAS FOR CONSUMPTION, USE OR SALE THEREIN (THIRD AMENDMENT) BILL, 1986.

(L.A. Bill No. 46 of 1986).

A Bill further to amend the Karnataka Tax on Entry of Goods into Local Areas for Consumption, Use or Sale Therein Act, 1979.

Whereas it is expedient further to amend the Karnataka Tax on Entry of Goods Into Local Areas For Consumption, Use or Sale Therein Act, 1979 (Karnataka Act 27 of 1979) for the purposes hereinafter eppearing;

Be it enacted by the Karnataka State Legislature in the Thirty-seventh Year of the Republic of India as follows:—

1. **Short title and commencement**.—(1) This Act may be called the Karnataka Tax on Entry of Goods into Local Areas For Consumption, Use or Sale Therein (Third Amendment) Act, 1986.

(2) It shall come into force at once.

2. **Amendment of section 15.**—In sub-section (I) of section 15 of the Karnataka Tax on Entry of Goods Into Local Areas for Consumption, Use or Sale Therein Act, 1979 (Karnataka Act 27 of 1979) for the words, "he may after giving the assessee the words, "he may if necessary stay the operation of such order for such period as he deems necessary and after giving the assessee" shall be substituted.

STATEMENT OF OBJECTS AND REASONS

In the principal Act the Commissioner of Commercial Taxes and the Joint Commissioner of Commercial Taxes have been vested with the power of revising the orders passed by their subordinates. It is now proposed to vest with them the power of staying the operation of the orders taken up for **suo moto** revision proceedings, whenever found necessary.

RAMAKRISHNA HEGDE,
Chief Minister.

K. S. SINGRI GOWDA,
Secretary.

ANNEXURE

(Extract from the Karnataka Tax on Entry of Goods Into Local Areas for Consumption, Use or Sale Therein Act, 1979 (Karnataka Act No. 27 of 1979).

*** *** ***

15. **Revision by the Commissioner or the Joint Commissioner of the orders prejudicial to revenue.**—(1) The Commissioner or the Joint Commissioner or any other officer specially empowered by the Commissioner in this behalf may call for and examine the

records of any proeedings under this Act, and if he considers that any order passed therein by any officer is erroneous in so far as it is prejudicial to the interests of the revenue, he may after giving the assessee an opportunity of being heard and after making or causing to be made such inquiry as he deems necessary, pass such order thereon as the circumstances of the case justify, including an order enhancing or modifying the assessment, or cancelling the assessment and directing a fresh assessment.

*** *** ***

(L.A. Bill No. 39 of 1986)

A Bill further to amend the Karnataka Societies Registration Act, 1960.

Whereas it is expedient further to amend the Karnataka Societies Registration Act, 1960 (Karnataka Act 17 of 1960) for the purposes hereinafter appearing ;

Be it enacted by the Karnataka State Legislature in the Thirty-seventh Year of the Republic of India as follows:—

1. *Short title and commencement.*—(1) This Act may be called the Karnataka Societies Registration (Amendment) Act, 1986

(2) It shall come into force at once.

2. *Amendment of section* 27A.—In the paoviso to sub-section (1) of section 27A of the Karnataka Societies Registration Act, 1960 (Karnataka Act 17 of 1960), for the words "extend the said period", the words "extend either respectively or retrospectively, the said period" shall be substituted.

Statement of Objects and Reasons

(As appended to at the time of Introduction of the Bill)

The proviso to section 27A of the Karnataka Societies Registration Act, 1960 provides for extending the period of appointment of the Administrator prospectively. It is considered necessary to empower the Government to extend the period of appointment of the Administrator; retrospectively also.

Hence the Bill.

S. R. BOMMAI,

Minister for Revenue, Planning and Labour.

EXTRACT FROM THE KARNATAKA SOCIETIES REGISTRATION ACT, 1960.

(Karnataka Act 17 of 1960)

XX XX XX

27A. *Appointment of Administrator.*—Notwithstanding anything in this Act.—

(1) (a) where any society on account of the pendency of litigation or otherwise has not held or is unable to hold the annual general meeting; or

(b) where the term of office of the members of the governing body of a society has expired and a new governing body has not for any reason been constituted; or

(c) where on a report made by the Registrar or otherwise, on enquiry the State Government considers ir necessary in public interest so to do, the State Government may, by order published in the Official Gazette, appoint an Administrator for such society for such period, not exceeding six months, as may be specified in the order, to manage the affairs of the Society,

Provided that for reasons to be recorded in writing, the State Government may, by like order, extend the said period by any further periods not exceeding six months at a time, so however subject to the provisions of clause (5), the aggregate period shall not extend beyond four years.

† ಶ್ರೀ ಧರ್ಮಸಿಂಗ್(ಜೇವರ್ಗಿ).—ಮಾನ್ಯ ಅಧ್ಯಕ್ಷರೇ, ಇವತ್ತು ಕಾರ್ಪೊರೇಷನ್ ಆಕ್ಟ್‌ನಲ್ಲಿ ಕೆಲವು ತಿದ್ದುಪಡಿಗಳನ್ನು ಮಾನ್ಯ ಮಂತ್ರಿಗಳು ಇಲ್ಲಿ ತಂದಿದ್ದಾರೆ ಇದರ ಹಿನ್ನೆಲೆಯಲ್ಲಿ ಕೂಡ ಕೆಲವು ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಈಗ ಮೇಯರ್ ಅವರಿಗೆ ಹತ್ತು ಸಾವಿರ ರೂಪಾಯಿಗಳಿಂದ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ಕೊಡತಕ್ಕ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಇವೊತ್ತಿನ ದಿವಸ, ತಾವು ಸೋಷಿಯಲ್ ಜಸ್ಟೀಸ್ ಕಮಿಟಿಯಲ್ಲಿ ಮತ್ತು ಬೇರೆ ವಿಧಾನಸಭೆ ಮತ್ತು ವಿಧಾನಪರಿಷತ್ತಿಗೆ ಪ್ರಾತಿನಿಧ್ಯ ಕೊಡತಕ್ಕ ಬಗ್ಗೆ ಹೇಳಿದ್ದೀರಿ. ಈ ಮೊದಲು ಕೂಡ ಈ ಒಂದು ಕಾರ್ಪೊರೇಷನ್‌ನಲ್ಲಿ ಸ್ಟಾಂಡಿಂಗ್ ಕಮಿಟಿ, ಹೆಲ್ತ್ ಕಮಿಟಿ, ಸೋಷಿಯಲ್ ಜಸ್ಟೀಸ್ ಕಮಿಟಿ ಇರಬೇಕೆಂದು ಹೇಳಿದ್ದೆವು. ಕಾರ್ಪೊರೇಷನ್‌ದಾಗಲೀ, ಮುನಿಸಿಪಾಲಿಟಿಯದ್ದಾಗಲೀ, ಟೋಟಲ್ ಬಡ್ಜೆಟ್ ಎಷ್ಟು ಇರುತ್ತದೆ, ಅದರಲ್ಲಿ ಕೂಡ ಇವೊತ್ತು ಯಾರು ಹರಿಜನ ಗಿರಿಜನರ ಮೇಲೆ ಯಾವ ರೀತಿ ಖರ್ಚು ಮಾಡುತ್ತಾರೆ, ಇದನ್ನು ಕೂಡ ಒಂದು ಮೇಲ್ವಿಚಾರಣೆ ಮಾಡಬೇಕೆಂದು ಮಾಡಿತ್ತು. ಕೊನೆಯದಾಗಿ ಬಹಳ ಹಗುರವಾಗಿ ಮಾನ್ಯ ಲಕ್ಷ್ಮೀಸಾಗರ್ ಅವರು ಕೆಲವು ಮಾತುಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿಯೂ ಕೂಡ ಕಾರ್ಪೊರೇಷನ್‌ನಲ್ಲಿ, ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ವಿಚಾರ ಬಂದಾಗ ನೋಟೀಸ್ ಇಲ್ಲದೆ ಅದನ್ನು ಕೆಡವತಕ್ಕ ಅಧಿಕಾರವನ್ನು ಕಮೀಷನರ್ ಅವರಿಗೆ ಕೊಟ್ಟಿದ್ದಾರೆ. ನಾನು ಕೇಳುತ್ತಿದ್ದೇನೆ, ಇವರು ಎಮರ್ಜೆನ್ಸಿ, ಜನತಾ ಸರ್ಕಾರ, ಪ್ರಜಾಪ್ರಭುತ್ವ ಹಾಗೆ ಹೀಗೆ ಎನ್ನುವ ವಾದವನ್ನು ಮಂಡಿಸು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತ್ತಿದ್ದಾರೆ. ಇವರೂ ಕೂಡ ಪ್ರೊಫೆಸರ್ ಆಗಿದ್ದಾರೆ, ಜೊತೆಗೆ ಕಾನೂನು ಮಂತ್ರಿಗಳು ಕೂಡ ಇದ್ದಾರೆ ಈಗ ತಂದಿರುವ ತಿದ್ದುಪಡಿ ನ್ಯಾಚ್ಯುರಲ್ ಜಸ್ಟೀಸ್ ಬಗ್ಗೆ ಎಂದು ಅವರೇ ಹೇಳಲಿ ಗಂಗಾರಾವ್‌ರ ಕಟ್ಟಡಗಳಿಗೆ ಇದು ಅನ್ವಯ ಆಗುವುದಿಲ್ಲ. ಹೈರೈಸ್ಡ್ ಬಿಲ್ಡಿಂಗ್‌ಗಳ ಜನರ ಮೇಲೆ ಇದು ಆಗುವುದಿಲ್ಲ. ಪಾಪ, ಯಾರು ನಿರ್ಗತಿಕರಾಗಿದ್ದಾರೆ, ಸ್ಲಮ್‌ಗಳಲ್ಲಿ ಇರತಕ್ಕಂಥ ಜನರು ಇದ್ದಾರೆ ಅವರಿಗೆ ಅನ್ವಯವಾಗುತ್ತದೆ. ಈ ಸರ್ಕಾರಕ್ಕೆ ಬುಲ್‌ಡೋಜರ್ ಸರ್ಕಾರ ಎಂದು ಈಗಾಗಲೇ ಹೆಸರು ಬಂದಿದೆ. ಹೋದಸಲ ಇಲ್ಲಿ ಶ್ರೀ ರಾಜುಗೌಡರು ಒಂದು ಪ್ರಶ್ನೆಯನ್ನು ಕೇಳಿದರು. ಕೊಳಚೆ ಪ್ರದೇಶದಲ್ಲಿರತಕ್ಕಂಥ ಜನರು ಯಾರು ಕೆಲಸಕ್ಕಾಗಿ ಬೇರೆ ಊರುಗಳಿಂದ ಪಟ್ಟಣಕ್ಕೆ ಬಂದು ಸೇರುತ್ತಾರೆ. ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಇಂಥಾದ್ದೆಲ್ಲಾ ಆಗುತ್ತದೆ ಎಂದು ಅದಕ್ಕೆ ಇವೊತ್ತು ಬಿ. ಡಿ. ಎ. ಆಗಲಿ, ಕಾರ್ಪೊರೇಷನ್ ಆಗಲಿ, ಮುನಿಸಿಪಾಲಿಟಿಯಾಗಲೀ ಯಾರು ಅನಧಿಕೃತವಾಗಿ ಗುಡಿಸಲುಗಳನ್ನು ಹಾಕಿಕೊಳ್ಳುತ್ತಾರೆ, ಅಂತಹವರ ಬಗ್ಗೆ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡದೆ ವಿತ್‌ಔಟ್ ನೋಟೀಸ್ ಅವುಗಳನ್ನು ಕೆಡವಲಿಕ್ಕೆ ಪ್ರಯತ್ನ ಮಾಡಿದರೆ ಹೇಗೆ ?

ಶ್ರೀ ಎ. ಲಕ್ಷ್ಮೀಸಾಗರ್,—ಅವಸರದಲ್ಲಿ ಏನೋ ಮಾತನಾಡುವುದು ಬೇಡ.

ಶ್ರೀ ಎಂ. ಎಸ್. ಕೃಷ್ಣನ್.—ನಾವೆಲ್ಲಾ ಮಾತಾನಾಡೋಣ. ನಾವು ಮಾತನಾಡಿದ ಮೇಲೆ ಮಾನ್ಯ ಮಂತ್ರಿಗಳು ಮಾತನಾಡಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಲ್ಪ ಇರಿ ಸ್ವಾಮಿ. ನಾನು ಹೇಳುತ್ತೇನೆ ಕೇಳಿ. I am not taking away our right. I Can't take away. What I want to submit is, that is not what has been done. Unauthorised constructions on what ? Please see page four. The provision reads.

> "...upon any public street or open or over any open channel, well or tank in any street so as to from an obstruction to, or an encroachment upon or a projuction over, or to occupy any, portion of such street, channel. drain, well or tank".

ಇದಕ್ಕೆ ಮಾತ್ರ ಅಷ್ಟೇ, ಎಲ್ಲಾ ತೆಗೆದುಕೊಳ್ಳುವುದಕ್ಕೆ ಅಲ್ಲ,

ಶ್ರೀ ಧರ್ಮಸಿಂಗ್.—ಈ ಬಗ್ಗೆ ನಾನು ಏನು ಹೇಳುತ್ತಿದ್ದೇನೆಂದರೆ. ಬಡವರು ಕಟ್ಟಿದ ಮನೆಗಳನ್ನು ನೋಟೀಸ್ ಕೊಡದೆ ಕೆಡವಿ ಹಾಕುವುದು ಸರಿಯಲ್ಲ. ನೋಟೀಸ್ ಕೊಡದಿದ್ದರೆ ನೀವು ಬಡವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಟ್ಟಂತೆ ಆಗುವುದಿಲ್ಲ. ಒಂದು ಕಡೆ ನೋಟೀಸ್ ಕೊಡದೆ ಮನೆಗಳನ್ನು ಕೆಡವಬಹುದೆಂದು ಹೇಳಿದ್ದೀರಿ ಮತ್ತೊಂದು ಕಡೆ, ಯಾರಾದರೂ ಕೋರ್ಟಿಗೆ ಹೋದರೆ, ಕೋರ್ಟಿನವರು ಕಾರ್ಪೋರೇಷನ್ ಅವರನ್ನು ಕೇಳದೆ ಸ್ಟೇ ಕೊಡಬಾರದೆಂದು ಹೇಳುತ್ತಿದ್ದೀರಿ. ಇದು ಒಂದು ರೀತಿಯಲ್ಲಿ ಎಮರ್ಜೆನ್ಸಿ ಪವರ್ ತರಹ ಇದೆ. ಇದು ಸೂಕ್ತವಲ್ಲ. ಬಡವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವ ರೀತಿಯಲ್ಲಿ ತಿದ್ದುಪಡಿಯನ್ನು ತರಬೇಕು. ಬಡವರು ನಾಲೆ ಮೇಲೆ ಇಲ್ಲವೇ ಫುಟ್‌ಪಾತ್ ಮೇಲೆ ಇಲ್ಲವೇ ಮತ್ತೊಂದು ಕಡೆ ಮನೆಗಳನ್ನು ಕಟ್ಟಿಕೊಂಡರೆ ನೋಟೀಸ್ ಕೊಡದೆ ಆ ಮನೆಗಳನ್ನು ಕೆಡವಿ ಹಾಕುವುದು ಸರಿಯಲ್ಲ. ಇದರಿಂದ ಬಡವರಿಗೆ ತೊಂದರೆ ಯಾಗುತ್ತದೆಯೇ ಹೊರತು ಶ್ರೀಮಂತರಿಗೆ ತೊಂದರೆ ಆಗುವುದಿಲ್ಲ. ಆದ್ದರಿಂದ ಬಡವರ ಬಗ್ಗೆ ಕಳಕಳಿಯಿಂದ ವಿಚಾರ ಮಾಡುವುದು ಒಳ್ಳೆಯದು. ಅವರು ಬೇರೆ ಕಡೆ ಹೋಗಿ ನೆಲೆಸಲು ಅವಕಾಶ ಮಾಡಿ ಕೊಡದೆ ಮನೆಗಳನ್ನು ಕೆಡವಿಹಾಕುವುದು ಒಳ್ಳೆಯದಲ್ಲ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಪುನಃ ಯೋಚನೆ ಮಾಡಬೇಕು. ಇಲ್ಲದಿದ್ದರೆ ಇದರಿಂದ ಸಾರ್ವಜನಿಕರಿಗೆ ಅದರಲ್ಲಿಯೂ ಬಡಜನರಿಗೆ ಬಹಳ ತೊಂದರೆಯಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕರ್ನಾಟಕ ನಗರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಏನು ತಂದಿದ್ದಾರೆ, ಇದನ್ನು ನೋಡಿ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನನಗಂತೂ ಸಂತೋಷವಾಯಿತು. ಇದಕ್ಕೆ ಕಾರಣವೇನೆಂದರೆ, ನಾನು ಸಿಟಿಯಲ್ಲಿ ವಾಸವಾಗಿದ್ದೇನೆ, ಮಾನ್ಯ ಮಂತ್ರಿಗಳು ಸಹ ಸಿಟಿಯಲ್ಲಿ ವಾಸವಾಗಿದ್ದಾರೆ. ಇವೊತ್ತು ಬೆಂಗಳೂರು ನಗರ ಕಾರ್ಪೋರೇಷನ್ ವ್ಯವಹಾರ ಯಾವ ರೀತಿ ನಡೆಯುತ್ತಿದೆ ಎಂದರೆ, ಸರ್ಕಾರದವರು ಕಾರ್ಪೋರೇಷನ್‌ಗೆ ಕೊಡುವಂತಹ ನಿರ್ದೇಶನಗಳು ಅಲ್ಲಿಗೆ ಹೋಗಿ ಮುಟ್ಟುವುದಿಲ್ಲ ಮತ್ತು ಅವರು ಕೈಕೊಳ್ಳುವಂತಹ ತೀರ್ಮಾನಗಳು ಸರ್ಕಾರಕ್ಕೆ ಬಂದು ಮುಟ್ಟುವುದಿಲ್ಲ. ಈ ರೀತಿಯಲ್ಲಿ ಅಲ್ಲಿನ ವ್ಯವಹಾರ ನಡೆಯುತ್ತಿದೆ. ಮಾನ್ಯ ಲಕ್ಷ್ಮೀಸಾಗರ್ ಅವರು ಬ್ರಹ್ಮಚಾರಿಗಳಾಗಿದ್ದಾರೆ. ಈ ಹಿಂದೆ ಇವರು ನಗರಾಭಿವೃದ್ಧಿ ಇಲಾಖೆಯ ಮಂತ್ರಿಗಳಾಗಿದ್ದರು. ಇವರು ಸರಿಯಾದ ರೀತಿಯಲ್ಲಿ ಕೆಲಸ ಮಾಡಿಕೊಂಡು ಹೋಗುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಇವರ ಶೂರತ್ವವೆಲ್ಲಾ ಬರೀ ಅಸೆಂಬ್ಲಿಯಲ್ಲಿ ಹಾಗೂ ಹೊರಗಡೆ ಎಲ್ಲಿಯಾದರೂ ಭಾಷಣ ಮಾಡುವಾಗ ಇವರ ಶೂರತ್ವವನ್ನು ತೋರಿಸುತ್ತಾರೆಯೇ ಹೊರತು, ಯಾವುದೂ ಕಾರ್ಯಗತವಾಗುತ್ತಿಲ್ಲ. ಇವರು ಸರಿಯಿಲ್ಲ ಎಂದು ನಾನು ಹೇಳುವುದಿಲ್ಲ. ಕಾನೂನು ಪ್ರಕಾರವೇ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲವೆಂಬುದನ್ನು ಸಹ ನಾನು ಒಪ್ಪುತ್ತೇನೆ. ಆದರೆ ಈಗಿರುವ ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ಮಾಡಿದ ಮೇಲೆ, ಅದರ ಪ್ರಕಾರ ಕೆಲಸ ಆಗುತ್ತಿದೆಯೇ ಎಂಬುದನ್ನು ಸಹ ನೋಡಬೇಕಾಗುತ್ತದೆ. ಕಾನೂನಿಗೆ ವಿರುದ್ಧವಾಗಿ ಕೆಲವರು ಯಾವ ರೀತಿ ನಡೆದುಕೊಳ್ಳುತ್ತಾರೆಂಬುದಕ್ಕೆ ನನ್ನ ಅನುಭವಕ್ಕೆ ಬಂದಂಥ ಒಂದು ನಿದರ್ಶನವನ್ನು ಹೇಳುತ್ತೇನೆ. ಬೆಂಗಳೂರಿನ ಚಿಕ್ಕಪೇಟೆಯಲ್ಲಿ ಒಬ್ಬ ಮಾರ್ವಾಡಿ ಒಂದು ಕಟ್ಟಡವನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದಾಗ ಅದಕ್ಕೆ ಕೆಲವರಿಂದ ಅಡ್ಡಿ ಬಂತು. ಆಗ ಕಾರ್ಪೋರೇಷನ್‌ನಲ್ಲಿರುವ ಸಂಬಂಧಪಟ್ಟ ಇಂಜಿನಿಯರ್‌ಗಳು ಮತ್ತು ಟೌನ್ ಪ್ಲಾನಿಂಗ್‌ನಲ್ಲಿ ಕೆಲಸ ಮಾಡುತ್ತಿರುವ ಇಂಜಿನಿಯರ್‌ಗಳು ಸೇರಿಕೊಂಡು ಆ ಕಟ್ಟಡದ ಕೆಲಸ ಕಾನೂನಿಗೆ ಅನುಗುಣವಾಗಿ ನಡೆಯುತ್ತಿದೆ ಎಂದು ತೋರಿಸಲು ಬೇಕಾದಂಥ ಕಾಗದಪತ್ರಗಳನ್ನೆಲ್ಲಾ ತಯಾರಿಸಿಕೊಟ್ಟರು. ಕಟ್ಟಡ ಕಟ್ಟಿಸಲು ಬೇಕಾದಂಥ ಎಂಡಾರ್ಸ್‌ಮೆಂಟ್‌ಗಳನ್ನು ಹಿಂದಿನ ತಾರೀಖುಗಳನ್ನು ಹಾಕಿ ಒದಗಿಸಿಕೊಟ್ಟರು. ಇದು ಸರ್ಕಾರದ ಗಮನಕ್ಕೆ ಬಂದಾಗ, ಕಾರ್ಪೊರೇಷನ್ ಕಮೀಷನರ್ ಹಾಗೂ ಇಂಜಿನಿಯರ್‌ಗಳು ಹೋಗಿ ಸ್ಥಳ ಪರೀಕ್ಷೆ ಮಾಡಬೇಕೆಂದು ಸರ್ಕಾರದಿಂದ ಆದೇಶ ಹೋಯಿತು. ಈ ಆದೇಶದಂತೆ ಅಲ್ಲಿನ ಅಧಿಕಾರಿಗಳು ಆ ಸ್ಥಳಕ್ಕೆ ಹೋದ ಹಾಗೆ ಮಾಡಿದರು. ಮತ್ತು ಸೂಕ್ತ ಆದೇಶ ಕೊಟ್ಟಿದ್ದೇವೆಂದು ಹೇಳಿದರು. ಇದಾದ ನಂತರ ಆ ಮಾರ್ವಾಡಿ ಕೋರ್ಟಿಗೆ ಹೋಗಿ ಸ್ಟೇ ತರಲು ಏನೇನು ಕಾಗದಪತ್ರಗಳು ಬೇಕೋ ಅದನ್ನೆಲ್ಲಾ ಮಾಡಿಕೊಟ್ಟರು. ಈ ಕಾಗದ ಪತ್ರಗಳ ಆಧಾರದ ಮೇಲೆ ಆ ಮಾರ್ವಾಡಿ ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತೆಗೆದುಕೊಂಡು ಬಂದ. ತಡೆಯಾಜ್ಞೆಯನ್ನು ತಂದಮೇಲೆ ಕಟ್ಟಡದ ಕೆಲಸವನ್ನು ಮುಂದುವರೆಸಿದ. ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಮಾರ್ವಾಡಿ ಪರವಾಗಿ ಆರ್ಡರ್ ಆಯಿತು. ಅದು ಯಾವ ರೀತಿ ಆಯಿತು ಎಂಬುದು ಇಲ್ಲಿ ಬೇಕಾಗಿಲ್ಲ. ಈ ಮೊದಲು ನಾನು ಕೋರ್ಟಿನಲ್ಲಿ ವ್ಯವಹಾರಗಳು ಬಹಳ ಚೆನ್ನಾಗಿ ನಡೆಯುತ್ತವೆ, ಕೋರ್ಟಿನ ವ್ಯವಹಾರಗಳೆಲ್ಲಾ ಸೀಜರ್‌ನ ಹೆಂಡತಿ ತರಹ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಅಲ್ಲಿನ ಕೆಲವು ಆರ್ಡರ್‌ಗಳನ್ನು ನೋಡಿದಾಗ, ಅಲ್ಲಿನ ವ್ಯವಹಾರ ಡೊಂಕುಡೊಂಕಾಗಿ ನಡೆಯುತ್ತಿದೆ ಎಂದು ಭಾಸವಾಗುತ್ತದೆ. ಈ ಮಾತನ್ನು ಹೇಳುವಾಗ ನಾನು ಕೋರ್ಟಿನ ಆರ್ಡರ್‌ಗೆ ವಿರುದ್ಧವಾಗಿ ಮಾತನಾಡುತ್ತಿದ್ದೇನೆಂದು ತಾವು ಯಾರೂ ತಿಳಿಯಬಾರದು, ಅಲ್ಲಿ ಒಳ್ಳೆಯವರೂ ಇದ್ದಾರೆ. ಇಂತಹವರು ಸರಿಯಾದ ನ್ಯಾಯವನ್ನು ದೊರಕಿಸಿಕೊಡುತ್ತಾರೆಂದು ತಿಳಿದುಕೊಳ್ಳೋಣ. ಕೋರ್ಟ್ ವ್ಯವಹಾರದ ಬಗ್ಗೆ ಮಾನ್ಯ ರಾಮಕೃಷ್ಣ ಹೆಗಡೆಯವರು ಒಳ್ಳೆಯ ಅದ್ಭುತವಾದ ಭಾಷಣ ಮಾಡುತ್ತಾರೆ. ಉದಾತ್ತವಾದಂಥ ಭಾಷಣ ಮಾಡುತ್ತಾರೆ. ನನ್ನ ಸ್ವಂತ ಅನುಭವಕ್ಕೆ ಬಂದಿರುವುದನ್ನು ಹಾಗೂ ನನಗೆ ಆಗಿರುವಂತಹ ಕಹಿ ಅನುಭವದ ಹಿನ್ನೆಲೆಯಲ್ಲಿ ಹೇಳಬೇಕೆಂದರೆ, ಯಾವ ಕೋರ್ಟಿನಿಂದ ಯಾವ ಆರ್ಡರ್ಸ್ ಬೇಕಾದರೂ ತಂದುಕೊಡುತ್ತೇನೆ. ಪರವಾಗಿ ಇಲ್ಲವೇ ವಿರುದ್ಧವಾಗಿ. ಈ ಕೇಸ್ ನಂತರ ಹೈಕೋರ್ಟಿಗೆ ಹೋಯಿತು. ಹೈಕೋರ್ಟಿನಲ್ಲಿ ಈ ಕೇಸ್‌ಗೆ ಸಂಬಂಧಪಟ್ಟಂತೆ ಕಾರ್ಪೋರೇಷನ್ ಅವರು ಏನು ಹೇಳಿದರೋ ಗೊತ್ತಿಲ್ಲ, ಆದರೆ ಅಲ್ಲಿಯೂ ಸಹ ಡಿಸ್ಟ್ರಿಕ್ಟ್ ಕೋರ್ಟಿನ ಆರ್ಡರ್‌ನ್ನು ಎತ್ತಿಹಿಡಿದರು. ನಂತರ ಆ ಮಾರ್ವಾಡಿ ಆ ಕಟ್ಟಡದ ಕೆಲಸವನ್ನು ಪೂರ್ತಿ ಮಾಡಿದ. ಈ ಒಂದು ನಿದರ್ಶನವನ್ನು ನೋಡಿದಾಗ ಮಾನ್ಯ ಲಕ್ಷ್ಮೀಸಾಗರ್ ಅವರ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಬಹುದು. ಈ ಕೇಸ್‌ಗೆ ಸಂಬಂಧಪಟ್ಟಂತೆ ನಾನು ಮಾನ್ಯ ಲಕ್ಷ್ಮೀಸಾಗರ್ ಅವರನ್ನು ಕೇಳಿದೆ, ಏನು ಲಕ್ಷ್ಮೀಸಾಗರ್ ಅವರೇ, ತಾವು ಮಂತ್ರಿಗಳಾಗಿ, ಸರ್ಕಾರ ಇಟ್ಟುಕೊಂಡು, ಒಬ್ಬ ವ್ಯಕ್ತಿ ಕಾನೂನಿಗೆ ವಿರುದ್ಧವಾಗಿ ಹಾಗೂ ಕಾರ್ಪೋರೇಷನ್ ಲೈಸನ್‌ನ

ರೂಲ್ಸ್‌ಗೆ ವಿರುದ್ಧವಾಗಿ ಕಟ್ಟಡ ಕಟ್ಟಿಸಿದ್ದಾನೆ, ಯಾರನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಕಟ್ಟಿಸಿದ್ದಾನೆ ಎಂದು ಕೇಳಿದಾಗ, ಅವರು ಏನು ಮಾಡಲಿ, ಕೋರ್ಟಿನ ಈ ರೀತಿ ಆರ್ಡರ್ ಕೊಡುತ್ತದೆ ಎಂದು ಹೇಳಿದರು. ಈ ವಿಚಾರದಲ್ಲಿ ಅವರು ನಿಸ್ಸಹಾಯಕರಾಗಿದ್ದರು. ಕೋರ್ಟಿನ ಆರ್ಡರ್ ಮೇಲೆ ಆತ ಕಟ್ಟಡ ಕಟ್ಟಿ ಮುಗಿಸಿದ. ಈಗ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಯಾರಾದರೂ ಕಾನೂನಿಗೆ ವಿರುದ್ಧವಾಗಿ ಮನೆ ಕಟ್ಟಿಸಿದಾಗ, ನೋಟೀಸ್ ಕೊಡದೆ ಅದನ್ನು ಕೆಡವಿ ಹಾಕುವ ಅಧಿಕಾರ ಸರ್ಕಾರಕ್ಕೆ ಇಲ್ಲದೆ ಹೋದರೆ, ಕಾರ್ಪೋರೇಷನ್ ವ್ಯಾಪ್ತಿಯಲ್ಲಿ ಯಾರೂ ಸಹ ಸರಿಯಾಗಿ ಕಟ್ಟಡಗಳನ್ನು ಕಟ್ಟಿಸುವುದಿಲ್ಲ. ಕಾನೂನಿನ ಚೌಕಟ್ಟಿನಲ್ಲಿಯೇ ಎಲ್ಲರೂ ಮನೆಗಳನ್ನು ಕಟ್ಟಿಸಬೇಕಾಗುತ್ತದೆ. ಇವೊತ್ತು ನಾನು ಬೆಳಿಗ್ಗೆ ಬಿ.ಡಿ.ಎ. ಬಗ್ಗೆ ಒಂದು ಪ್ರಶ್ನೆ ಕೇಳಿದ್ದೆ, ಅದಕ್ಕೆ ಉತ್ತರ ಬರಲಿಲ್ಲ. ಅನೇಕ ಜನರು ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಗಳನ್ನು ಮಾಡಿಕೊಂಡಿದ್ದಾರೆ. ಇದು ಕೆಲವರಿಗೆ ಒಂದು ವ್ಯಾಪಾರವಾಗಿದೆ. ಪೇಪರ್‌ಗಳಲ್ಲಿ ಈ ಬಗ್ಗೆ ಭಟ್ ಎಂಬುವರ ಹೆಸರಿನಲ್ಲಿ ದಿನವೂ ಪ್ರಕಟಣೆಗಳು ಬರುತ್ತಿವೆ. ಆತ ಬೆಂಗಳೂರು ನಗರದಲ್ಲಿ ಅನೇಕ ದೊಡ್ಡ ಎಸ್ಟೇಟ್‌ಗಳನ್ನು ಮಾಡಿಕೊಂಡಿದ್ದಾನೆ. ಇವೊತ್ತಿನ ದಿವಸ ಬೆಂಗಳೂರು ನಗರದಲ್ಲಿ ೩೦೦-೪೦೦ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಗಳಿಗೆ ಅನುಮತಿ ಕೊಟ್ಟಿದ್ದೀರಿ. ಈ ಸೊಸೈಟಿಗಳಿಂದ ಸೈಟ್‌ಗಳನ್ನು ಪಡೆದವರು ಬಿ.ಡಿ.ಎ. ನಿಯಮಗಳಿಗನುಸಾರವಾಗಿ ಮನೆಗಳನ್ನು ಕಟ್ಟುತ್ತಾರೆಂದು ಇವರು ಹೇಳುತ್ತಾರೆ. ಆದರೆ ಆ ರೀತಿ ನಡೆಯುತ್ತಿಲ್ಲ. ಸರ್ಕಾರದವರು ಇಷ್ಟೊಂದು ಸೊಸೈಟಿಗಳಿಗೆ ಅನುಮತಿ ಕೊಟ್ಟಿರುವುದರಿಂದ, ಅಲ್ಲಿ ಸೈಟ್ ಪಡೆದವರು ತಮಗಿಷ್ಟ ಬಂದ ರೀತಿಯಲ್ಲಿ ಹಾಗೂ ಕಾನೂನಿಗೆ ವಿರುದ್ಧವಾಗಿ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ಬೆಂಗಳೂರು ನಗರ ಒಂದು ವ್ಯವಸ್ಥಿತ ರೀತಿಯಲ್ಲಿ ಬೆಳೆಯದೆ ಸ್ವೇಚ್ಛಾ ರೀತಿಯಿಂದ ಬೆಳೆಯಲು ಅವಕಾಶವಾಗುತ್ತದೆ. ಇವೊತ್ತು ಬಿ.ಡಿ.ಎ. ಇದೆ, ಕಾರ್ಪೋರೇಷನ್ ಇದೆ, ಇವುಗಳ ಕೆಲಸವಾದರೂ ಏನು ? ಬಿ.ಡಿ.ಎ.ನವರು ಜಮೀನನ್ನು ಅಕ್ವೈರ್ ಮಾಡುತ್ತಾರೆ ಮತ್ತು ರೀ-ಕನ್ವೆ ಮಾಡುತ್ತಾರೆ. ಇದರ ಬಗ್ಗೆ ಹೆಚ್ಚಿನ ವಿವರಗಳನ್ನು ಬಿ.ಡಿ.ಎ. ತಿದ್ದುಪಡಿ ವಿಧೇಯಕ ಬಂದಾಗ ಹೇಳುತ್ತೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ನಿಷ್ಠೂರವಾದಿಗಳಾಗಬೇಕೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ನ ಉದ್ಘಾಟನೆಯ ಸಮಯದಲ್ಲಿ ಹೊಸದಾಗಿ ಕೊಳಚೆ ಪ್ರದೇಶಗಳು ಬರಲು ಬಿಡುವುದಿಲ್ಲ, ಅದಕ್ಕೆ ತಡೆ ಹಾಕುತ್ತೇವೆಂದು ಹೇಳಿದ್ದನ್ನು ಕೇಳಿ ನನಗೆ ಆನಂದ ಆಯಿತು. ಇವೊತ್ತು ಬೆಂಗಳೂರು ನಗರದಲ್ಲಿ ಹಳೆಯ ಕೊಳಚೆ ಪ್ರದೇಶಗಳಿವೆ. ಅವುಗಳ ಜೊತೆಗೆ ಹೊಸದಾಗಿ ಕೊಳಚೆ ಪ್ರದೇಶಗಳು ಬರುವುದಕ್ಕೆ ತಾವು ಅವಕಾಶ ಕೊಡಬೇಡಿ. ಈ ಬಗ್ಗೆ ಬೆಂಗಳೂರು ನಗರ ಕಾರ್ಪೋರೇಷನ್ ಕಮೀಷನರ್ ಅವರು ನಿಷ್ಠೂರವಾಗಿ ಕೆಲಸ ಮಾಡಬೇಕು. ಬೀದಿ ಬೀದಿಗಳಲ್ಲಿ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ. ಫುಟ್‌ಪಾತ್‌ಗಳಲ್ಲಿ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ. ಯಾರು ಯಾವ ಜಾಗವನ್ನು ಉಪಯೋಗಿಸಿಕೊಂಡರೂ ಯಾರೂ ಕೇಳುವ ಹಾಗೆ ಇಲ್ಲ. ಈ ಕಾರ್ಪೋರೇಷನ್‌ನಲ್ಲಿ ಅಸಿಸ್ಟೆಂಟ್ ಇಂಜಿನೀಯರುಗಳು ಇದ್ದಾರೆ. ಎಕ್ಸಿಕ್ಯೂಟೀವ್ ಇಂಜಿನೀಯರುಗಳು ಇದ್ದಾರೆ. ಜೂನಿಯರ್ ಇಂಜಿನಿಯರ್‌ಗಳು ಇದ್ದಾರೆ. ಇವರೆಲ್ಲರೂ ಸಹ ಒಂದೊಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಆಸ್ತಿಪಾಸ್ತಿಯನ್ನು ಮಾಡಿಕೊಂಡಿದ್ದಾರೆ, ನಿಮ್ಮ ದೃಷ್ಟಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದ್ದರೂ ಇರಬಹುದು. ಆದರೆ ಹಣವನ್ನು ಮಾತ್ರ ಲೂಟಿ ಮಾಡಿ ಕೊಂಡಿದ್ದಾರೆ. ಆ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಎಂದು ನಾನು ಅನೇಕ ಸಾರಿ ಹೇಳಿದರೂ ಸಹ ಅವರನ್ನು ತಾವು ವರ್ಗಾವಣೆ ಮಾಡುವುದಕ್ಕೆ ಆಗಲಿಲ್ಲ. ಅವರನ್ನು ಏನಾದರೂ ವರ್ಗಾವಣೆ ಮಾಡುವುದಕ್ಕೆ ಹೊರಟರೇ ಅವರೆಲ್ಲಾ ಒಂದಾಗಿ ಕಾರ್ಪೋರೇಷನ್‌ನಲ್ಲಿಯೇ ಇರುವುದಕ್ಕೆ ಪ್ರಯತ್ನಪಡುತ್ತಾರೆ. ನಾನು ಮಾನ್ಯ ಮುಖ್ಯ ಮಂತ್ರಿಗಳಾದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಹೇಳುತ್ತೇನೆ ಎಲ್ಲೆಲ್ಲಿ ಅವ್ಯವಹಾರ ನಡೆಯುತ್ತಿದೆ ಎಲ್ಲೆಲ್ಲಿ ಏನೇನು ನಡೆಯುತ್ತಿದೆ ಎಂದು ಹೇಳಿದರೆ ತಾವು ಕ್ರಮ ತೆಗೆದುಕೊಳ್ಳುತ್ತೀರೇನು? ಆ ಅಧಿಕಾರಿಗಳು ಯಾರು ಯಾರು ಎಂದೂ ಸಹ ನನಗೆ ಗೊತ್ತು. ಆದರೆ ನಾನು ಹೇಳಿದರೂ ಸಹ ತಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ತಾವು ಕ್ರಮ ತೆಗೆದುಕೊಂಡು ವರ್ಗಾವಣೆ ಮಾಡುತ್ತೇವೆಂದು ಹೇಳಿದರೆ ಖಂಡಿತವಾಗಿಯೂ ಕೂಡ ನಾನು ಹೇಳುತ್ತೇನೆ. ಪ್ರತಿ ೩-೪ ವರ್ಷಗಳಿಗೆ ಒಂದು ಸಾರಿ ಎಲ್ಲರನ್ನು ಕಾರ್ಪೋರೇಷನ್‌ನಿಂದ ಹೊರಗಡೆ ವರ್ಗಾವಣೆ ಮಾಡಬೇಕು. ಇಲ್ಲದಿದ್ದರೆ ತಾವು ಯಾವುದೇ ಕಾನೂನುಗಳನ್ನು ತಂದರೂ ಸಹ ಕಾರ್ಪೋರೇಷನ್‌ನ್ನು ಉದ್ಧಾರ ಮಾಡುವುದಕ್ಕೆ ಆಗುವುದಿಲ್ಲ. ಈ ಮಾತನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈಗ ತಾವೇನು ಈ ತಿದ್ದುಪಡಿಗಳನ್ನು ತಂದಿದ್ದೀರಿ ಈ ತಿದ್ದುಪಡಿಗಳಿಗೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ನಮ್ಮ ಸಿಟಿಗಳಲ್ಲಿ ಚುನಾಯಿತ ಪ್ರತಿನಿಧಿ

ಗಳಾದಂಥ ಎಂ.ಎಲ್.ಎ.ಗಳು ಇರುತ್ತಾರೆ ಅವರು ಕಾರ್ಪೊರೇಷನ್‌ಗೆ ಹೋಗಿ ಸಲಹೆಗಳನ್ನು ಕೊಡುವುದಕ್ಕಾದರೂ ಒಂದು ಅವಕಾಶ ಇರಬೇಕು. ಇದರ ಜೊತೆಗೆ ಕಾರ್ಪೊರೇಷನ್‌ನಲ್ಲಿ ಚುನಾಯಿತ ಕಾರ್ಪೊರೇಟರ್‍ಸ್ ಸಹ ಇರುತ್ತಾರೆ. ಆದ್ದರಿಂದ ಈಗ ತಾವು ತಂದಿರತಕ್ಕಂಥ ತಿದ್ದುಪಡಿ ಬಹಳ ಸ್ವಾಗತಾರ್ಹವಾದುದು ಎಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ತಂದಿದ್ದಾರೆ. ಈ ತಿದ್ದುಪಡಿಯಲ್ಲಿ ಅನೇಕ ಅಂಶಗಳು ಅಡಕವಾಗಿವೆ. ಕೆಲವು ಅಂಶಗಳ ಬಗ್ಗೆ ನನ್ನದೇನು ಭಿನ್ನಾಭಿಪ್ರಾಯವಿಲ್ಲ. ಉದಾಹರಣೆಗೆ ಹೇಳುವುದಾದರೆ ವಿಧಾನ ಪರಿಷತ್ತಿಗೆ ನಾಮಿನೇಷನ್ ಆಗಿರುವಂತಹ ಸದಸ್ಯರಿಗೆ ಕಾರ್ಪೊರೇಷನ್‌ಗೆ ಹೋಗಿ ಅಲ್ಲಿ ತಮ್ಮ ಸಲಹೆ ಮತ್ತು ಸೂಚನೆಗಳು ಏನಾದರೂ ಇದ್ದರೆ ಅವುಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಪ್ರಜಾಪ್ರಭುತ್ವದ ಪದ್ಧತಿಗೆ ಅನುಗುಣವಾಗಿ ಇದು ಒಳ್ಳೆಯದು. ಕೆಲವರು ಇದು ಸರಿ ಇಲ್ಲವೆಂದು ಹೇಳಬಹುದು. ಕಾರಣವೇನೆಂದರೆ ಅವರು ಚುನಾಯಿತ ಪ್ರತಿನಿಧಿಗಳಲ್ಲ. ಆದರೂ ಸಹ ಅವರಿಗೇತಕ್ಕೆ ಈ ಅವಕಾಶ ವೆಂದು ಕೇಳಬಹುದು. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಅವರಿಗೂ ಕೂಡ ಆ ಅಧಿಕಾರ ಇದ್ದರೆ ಒಳ್ಳೆಯದು, ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಕೆಲವೊಂದು ಸಾರಿ ಸ್ವಲ್ಪ ಡೀವಿಯೇಷನ್ ಮಾಡ ಬೇಕಾಗುತ್ತದೆ. ಅದೇನೂ ತಪ್ಪಾಗುವುದಿಲ್ಲ. ಅದೇ ರೀತಿಯಲ್ಲಿ ಕಮಿಟಿಯನ್ನು ನೇಮಕ ಮಾಡ ಬೇಕೆಂದು ಹೇಳಿದ್ದಾರೆ. ಅದು ಕೂಡ ಸ್ವಾಗತಾರ್ಹವಾದುದು. ಪ್ರಾಕ್ಟಿಕಲ್ ಆಗಿ ಅಲ್ಲಿಗೆ ಒಂದು ಕಮಿಟಿ ಬೇಕಾಗುತ್ತದೆ. ಅಲ್ಲಿ ಕೆಲವೊಂದು ಸಾರಿ ನಡೆಯುತಕ್ಕಂಥ ವಿಫಲತೆಗಳನ್ನು ನೋಡಿಕೊಳ್ಳು ವುದಕ್ಕೆ ಇಂತಹ ಕಮಿಟಿಗಳು ಬೇಕಾಗುತ್ತವೆ. ಅನೇಕ ಸಂದರ್ಭಗಳಲ್ಲಿ ಇಂತಹ ವಿಫಲತೆಗಳು ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ನಡೆಯುತ್ತಿರುತ್ತವೆ. ಆದರೆ ಬೇರೆ ಕಾರ್ಪೊರೇಷನ್‌ಗಳಲ್ಲಿ ಯಾವ ರೀತಿ ಇದೆಯೋ ಅದು ನನಗೆ ಗೊತ್ತಿಲ್ಲ. ಕಾರ್ಪೊರೇಷನ್‌ನಲ್ಲಿ ಅನೇಕ ಜನ ಕಾರ್ಪೊರೇಟರ್‍ಸ್ ಇರುತ್ತಾರೆ. ಅವರು ಈ ಕಮಿಟಿಯ ಸದಸ್ಯರಾದರೆ ಅವರು ಕೆಲವೊಂದು ವಿಚಾರಗಳ ಬಗ್ಗೆ ಚರ್ಚೆ ಮಾಡಬಹುದು. ಇದರಿಂದ ಅವರಿಗೂ ಒಂದು ರೀತಿಯ ತರಬೇತಿಯನ್ನು ಕೊಟ್ಟಂತೆ ಆಗುತ್ತದೆ. ಈ ದೃಷ್ಟಿಯಿಂದ ಕೂಡ ನಾನು ಇದನ್ನು ಸ್ವಾಗತ ಮಾಡುತ್ತೇನೆ. ಅದೇ ರೀತಿಯಲ್ಲಿ ಅಮೆಂಡ್‌ಮೆಂಟ್ ೧೩ (ಎ)ಯಲ್ಲಿ ಹೇಳಿರುವ ಹಾಗೆ ಎಸ್.ಸಿ. ಮತ್ತು ಎಸ್.ಟಿ. ಗಳಿಗೆ ಸೋಷಿಯಲ್ ಜಸ್ಟೀಸ್ ಕಮಿಟಿಎಂದು ಮಾಡಿದ್ದೀರಿ. ಈ ಕಮಿಟಿಯಲ್ಲಿ ಮೇಯರ್‌ರವರು ಮತ್ತು ೬ ಜನ ಸದಸ್ಯರು ಇರಬೇಕೆಂದು ಹೇಳಿದ್ದೀರಿ. ಈ ೬ ಜನಸದಸ್ಯರು ಎಲ್ಲಾ ಕೌನ್ಸಿಲರ್‍ಸ್ ಎಸ್.ಸಿ. ಮತ್ತು ಎಸ್.ಟಿ. ಗಳೇ ಇರಬೇಕೇ ಅಥವಾ ಬೇರೆಯವರು ಇರಬೇಕೆ? ಈ ಕ್ಲಾಜ್‌ನಲ್ಲಿ ಏನು ಹೇಳಿದ್ದೀರಿ, ಎಂದರೆ:

"(1) In addition to the standing committees specified in Section 11, there shall be a Social Justice Committee for the corporation consisting of the Mayor and six other Scheduled Castes and Scheduled Tribes and the women Councillors from among themselves in accordance with the system of proportional representation by means of the single transferable vote."

ಎಂದು ಇದೆ. ನನಗನಿಸಿದ ಮಟ್ಟಿಗೆ ಇದು ಸ್ವಲ್ಪ ನ್ಯಾಯವಾಗಿ ಇಲ್ಲ. ಇವರಲ್ಲಿರುವ ಪ್ರಕಾರ ಏನು ಅಭಿಪ್ರಾಯ ಬರುತ್ತದೆ ಎಂದರೆ ಇದರಿಂದ ಈ ಜನರಿಗೆ ಸಾಮಾಜಿಕ ನ್ಯಾಯ ಸಿಗುತ್ತದೆಯೋ ಅಥವಾ ಇಲ್ಲವೋ ಎನ್ನುವ ಅನುಮಾನ ಇದೆ. ಇದರಲ್ಲಿ ಬಹಳ ಮುಖ್ಯವಾಗಿ ಎಸ್.ಸಿ. ಮತ್ತು ಎಸ್.ಟಿ.ಯವರಿಗೇ ಕೊಡಬೇಕೇ ? ಅಥವಾ ಮಹಿಳೆಯರಿಗೆ ಕೊಡಬೇಕೆ ? ಇವರಿಬ್ಬರಲ್ಲಿ ಯಾರಿಗಾದರೂ ಒಬ್ಬರಿಗೇ ಕೊಟ್ಟರೆ ಇದರಿಂದ ಸಾಮಾಜಿಕ ನ್ಯಾಯ ಸಿಕ್ಕಂತೆ ಆಗುವುದಿಲ್ಲ. ಇದರ ಅರ್ಥವೇನಾಗುತ್ತದೆ ಎಂದರೆ ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ ಎಂದು ನಾವು ಅಭಿಪ್ರಾಯ ಪಡುವುದಕ್ಕೆ ಒಂದು ಅವಕಾಶ ಇದೆ. ಪ್ರತಿಯೊಬ್ಬರಿಗೂ ಸಾಮಾಜಿಕ ನ್ಯಾಯ ಸಿಗಬೇಕು. ಅದು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆ ಪಕ್ಷ ಈ ಪಕ್ಷ ಎಂದು ಹೇಳುವುದು ಸರಿಯಾಗುವುದಿಲ್ಲ. ಎಲ್ಲರಿಗೂ ಒಂದೇ ನ್ಯಾಯ ಸಿಗಬೇಕು. ಈ ಕಮಿಟಿಯ ಸದಸ್ಯತ್ವವನ್ನು ಎಸ್.ಸಿ. ಮತ್ತು ಎಸ್.ಟಿ.ಯವರಿಗೇ ಇಂತಿಷ್ಟು ಕೊಡಿ ಇಲ್ಲ ಮಹಿಳೆಯರಿಗೇ ಇಂತಿಷ್ಟು ಕೊಡಿ. ಆಗ ಸ್ವಲ್ಪ ಮಟ್ಟಿಗೆ ಇದಕ್ಕೆ ತೂಕ ಬರುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ತಾವು ವ್ಯತ್ಯಾಸ ಮಾಡಿದಂತೆ ಆಗುತ್ತದೆ. ತಾವು ಬೇಕಾದರೆ ಈ ಸಮಿತಿಯ ಸದಸ್ಯರ ಸಂಖ್ಯೆಯನ್ನು ೯ ಬೇಕಾದರೂ ಮಾಡಿಕೊಳ್ಳಿ ಪರವಾಗಿಲ್ಲ. ಆದರೆ ಎಸ್.ಸಿ. ಮತ್ತು ಎಸ್.ಟಿ.ಯವರಿಗೆ ಇಂತಿಷ್ಟು ಮಹಿಳೆಯರಿಗೆ ಇಂತಿಷ್ಟು ಎಂದಾದರೂ ಮಾಡಿ. ಆಮೇಲೆ ಅಮೆಂಡ್‌ಮೆಂಟ್ ೧೩(ಎ)ನಲ್ಲಿ ೨೮೮(ಎ) ಮತ್ತು ೨೮೮(ಬಿ) ೨೮೮(ಸಿ) ಈ ಮೂರು ಕ್ಲಾಜ್‌ಗಳು ಬಹಳ ಮುಖ್ಯವಾದವುಗಳು. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಸವಲಿಂಗಪ್ಪನವರು ಮಾತನಾಡುತ್ತಾ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ ಇದರಿಂದ ಏನಾಗುತ್ತದೆ ಎಂದರೆ ಬೀದಿಯ ಅಕ್ಕಪಕ್ಕದಲ್ಲಿ, ರಸ್ತೆಗಳಲ್ಲಿ ಗೋಡೆಗಳನ್ನು ಕಟ್ಟಿಕೊಂಡರೆ ರಸ್ತೆಯ ಪಕ್ಕದಲ್ಲಿ ಬೇಲಿಗಳನ್ನು ಹಾಕಿ ಕೊಂಡರೆ ಅಥವಾ ಬೀದಿಗಳಲ್ಲಿ ಸ್ಟೆಪ್ಸ್ ಕಟ್ಟಿಕೊಂಡರೆ ಅದು ಸರಿ ಎಂದು ನಾವು ಯಾರೂ ಹೇಳುವುದಿಲ್ಲ. ಆದರೆ ಈ ಮೂರು ಕ್ಲಾಜ್‌ಗಳಿಂದ ದೊಡ್ಡ ದೊಡ್ಡ ಶ್ರೀಮಂತರಿಗೆ ಯಾವ ತೊಂದರೆಯೂ ಆಗುವುದಿಲ್ಲ. ನಾವು ಕಣ್ಣಾರೆ ಕಂಡಹಾಗೆ ಬಡ ಜನರ ಮೇಲೆ ಇದರ ಪರಿಣಾಮ ಬೀರುತ್ತದೆ, ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ನಗರದಲ್ಲಿ ಬೇರೆ ಜಾಗವಿಲ್ಲ. ಯಾವುದೋ ಒಂದು ಜಾಗದಲ್ಲಿ ಒಬ್ಬ ಬಡವ ಹೋಗಿ ಗುಡಿಸಲನ್ನು ಕಟ್ಟಿಕೊಂಡಿರುತ್ತಾನೆ. ಆತ ಅಲ್ಲಿ ಮನೆಯನ್ನು ಕಟ್ಟಿಕೊಂಡಿರುವುದಕ್ಕೆ ಲೈಸೆನ್ಸ್ ಅಥವಾ ಪರ್ಮಿಷನ್ ಕೊಟ್ಟಿರುವುದಿಲ್ಲ. ಇಂತಹ ಮನೆಗಳನ್ನು ತಾವು ಹೋಗಿ ಒಡೆದು ಹಾಕಿದರೆ ಆ ಬಡವ ಪಾಪ ಎಲ್ಲಿ ಹೋಗಬೇಕು? ಆ ಬಡವನಿಗೆ ಬೇರೆ ಸೈಟ್ ಆದರೂ ಕೊಟ್ಟು ಅವನಿಗೆ ಆಲ್ಟರ್‌ನೆಟೀವ್ ವ್ಯವಸ್ಥೆ ಮಾಡಿಕೊಟ್ಟರೆ ಪರವಾಗಿಲ್ಲ. ಅದು ಮಾಡದಿದ್ದರೆ ಹೇಗೆ? ತಾವು ಒಂದೇ ಸಾರಿಗೆ ಬುಲ್ಡೋಜರ್ ತೆಗೆದುಕೊಂಡು ಹೋಗಿ ಒಡೆದು ಹಾಕಿದರೆ ಹೇಗೆ? ಇದರಿಂದ ಮಿಸ್ ಯೂಜ್ ಆಫ್ ಪವರ್ ಆಗುವಂತಹ ಸಾಧ್ಯತೆಗಳು ಸಹ ಇವೆ. It will be a misuse of power. Though well intentioned, misuse of power is there and it goes against the very poorer sections of the people in our state. ಈಗಾಗಲೇ ನಾವು ನೋಡಿರುವಂತಹ ವಿಚಾರಗಳು ಇವು. ಬಡವರು ಬೇರೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಶಕ್ತಿ ಇರುವುದಿಲ್ಲ. ಈ ತಿದ್ದುಪಡಿಯಿಂದ ಬಡವರಿಗೆ ತೊಂದರೆಯಾಗುತ್ತದೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

> ''288C—Licences for sale in public places:—Except under and in conformity with the terms and provisions of a licence granted by the Commissioner in this behalf. no person shall hawk or expose for sale in any public place or in any public street any article whatsoever whether it be for humen consumption or not.''

ಈ ತಿದ್ದುಪಡಿಯನ್ನು ತಂದಿರುವುದು ಬೆಂಗಳೂರು ನಗರಕ್ಕೆಂದು ನಾವು ತಿಳಿದುಕೊಂಡರೂ ಸಹ ಬೆಂಗಳೂರು ನಗರವನ್ನು ಸುಂದರವಾಗಿಡುವುದಕ್ಕೆ ಇದು ಸಹಕಾರಿಯಾಗಬೇಕು. ಈ ನಗರವನ್ನು ಉದ್ಯಾನವನಗಳ ನಗರವನ್ನಾಗಿ ಮಾಡಬೇಕೆಂದು ಅಂದುಕೊಂಡರೂ ಸಹ ಇದರಿಂದ ಪೆಟ್ಟು ಬೀಳುವುದು ರಸ್ತೆಗಳಲ್ಲಿ ತಳ್ಳಿಕೊಂಡು ಹೋಗುವ ಗಾಡಿಗಳ ಮೇಲೆ ಪಾನ್‌ಬೀಡಾ ಅಂಗಡಿಗಳ ಮೇಲೆ ಅಲ್ಲದೆ ಮತ್ಯಾವುದರ ಮೇಲೂ ಅಲ್ಲ. ಈ ತಿದ್ದುಪಡಿ ಜಾರಿಗೆ ಬಂದರೆ ಅವರು ಬೀದಿಗಳಲ್ಲಿ ಗಾಡಿಗಳನ್ನು ತಳ್ಳಿಕೊಂಡು ವ್ಯಾಪಾರ ಮಾಡುವಂತೆ ಇಲ್ಲ. ಇವತ್ತು ಬೆಂಗಳೂರು ನಗರದ ಅನೇಕ ಕಡೆಗಳಲ್ಲಿ ಬೇಲ್‌ಪುರಿ ಗಾಡಿಗಳಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ. ನಮ್ಮ ಕಬ್ಬನ್‌ಪಾರ್ಕಿಗೆ ಕೂಡ ಬೇಲ್‌ಪುರಿ ಗಾಡಿಗಳು ಬರುತ್ತವೆ. ಕಬ್ಬನ್ ಪಾರ್ಕ್‌ನಲ್ಲಿ ಒಂದು ರೆಸ್ಟೋರೆಂಟ್ ಇದೆ. ಅಲ್ಲಿ ಬಡವರು ಯಾರೂ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಬೇಲ್‌ಪುರಿ ಅಲ್ಲಿ ಕೊಡುವುದಿಲ್ಲ. ಹೆಚ್ಚು ಗಾಡಿಯಲ್ಲಿಯೇ ಇದನ್ನು ಮಾರುತ್ತಾರೆ. ಬಡವರು, ಮಧ್ಯಮವರ್ಗದವರು ಇದನ್ನು ತೆಗೆದುಕೊಂಡು ತಿನ್ನುತ್ತಾರೆ. ಕೆಲವು ಸಾಹುಕಾರರು ತಿನ್ನುತ್ತಾರೆ. ಆದ್ದರಿಂದ ಅವನಿಗೆ ಈ ರೀತಿ ಮಾಡುವುದು ಸರಿಯಾದುದಲ್ಲ ನೀವು ಅವನನ್ನು ಕ್ಲೀನಾಗಿ ಇರುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ಅವಕಾಶವನ್ನು ಅವನು ದುರುಪಯೋಗ ಮಾಡಿಕೊಂಡರೆ, ಆಗ ಅವನ ಮೇಲೆ ತಾವು ಕ್ರಮ ತೆಗೆದುಕೊಳ್ಳಿ. ದುರುಪಯೋಗ ಆಗದ್ದೆ ನಡೆದುಕೊಂಡು ಹೋಗುತ್ತಿದ್ದರೆ, ನೀವು ಈ ಒಂದು ಕಾನೂನನ್ನು ತೆಗೆದುಕೊಂಡು ಬಂದರೆ ಯಾರಾ

ದರೂ ತೀರಾ ಬಡವರು ಇದ್ದರೆ ಅವರಿಗೆ ತೊಂದರೆಯಾಗುತ್ತದೆ. ಏಕೆಂದರೆ ಇವತ್ತು ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಂ ಮಾಡಿಕೊಂಡು ಜೀವನ ಮಾಡುವವರು ಬಹಳ ಜನ ಇದ್ದಾರೆ. ಸಣ್ಣ ಸಣ್ಣ ವೃತ್ತಿ ಮಾಡಿಕೊಂಡಿರುವವರೂ ಇದ್ದಾರೆ. ಇಂತಹವರು ಸಾವಿರಾರು ಜನ ಇದ್ದಾರೆ. ಅವರೆಲ್ಲರಿಗೂ ಭಾರಿ ದೊಡ್ಡ ಏಟು ಬೀಳುತ್ತದೆ. ಇವತ್ತೂ ಬೀಳುತ್ತದೆ, ಮುಂದೆಯೂ ಬೀಳುತ್ತದೆ. ನೀಟಾಗಿ ಇರುವುದಿಲ್ಲ, ಆದ್ದರಿಂದ ಇದನ್ನು ತಂದಿದ್ದಿರೆಂದು ಕಾಣುತ್ತದೆ. ಆದರೆ ಅದು ಸರಿಯಾಗಿರುವುದಿಲ್ಲವೆಂದು ನನಗೆ ಕಾಣುತ್ತದೆ. ಮಾನ್ಯ ಅಧ್ಯಕ್ಷರೇ, ಅಮೆಂಡ್‌ಮೆಂಟ್ ಸೆಕ್ಷನ್ ೩೦೧ರಲ್ಲಿ ಏನಿದೆ ಎಂದರೆ,

" If the Commissioner has not within the said period of thirty days passed any order, the applicant may address a letter to the Commissioner by name, requsting him to pass necessary orders on his application, and the Commissioner shall, within a a further period of 30 days from the date of receipt of such letter by written order, either grant such p rmission or refuse on one or more of the grounds mentioned in section 303 or section 304, to grant it. " ನಾನು ಲೈಸೆನ್ಸ್ ಬಗ್ಗೆ ಮಾತನಾಡುತ್ತಿದ್ದೆ. ಕಾರ್ಪೋರೇಷನ್ ಆಕ್ಟ್‌ನಲ್ಲಿ ಈ ಬಗ್ಗೆ ಪವರ್ಸ್ ಇದೆ. ಅನೇಕರು ಪವರ್ ಇಟ್ಟುಕೊಂಡಿದ್ದಾರೆ. ಇದು ಇರಬೇಕಾದರೆ ಫ್ರೆಷ್ ಪವರ್ ಮತ್ತೆ ಬೇಕಾಗಿರಲಿಲ್ಲ. ಸೆಕ್ಷನ್ ೩೦೧ರ ಬಗ್ಗೆ, ಇದರಲ್ಲಿ ಏನು ಅರ್ಥವಾಗುತ್ತದೆ ಎಂದರೆ, ಪರ್ಮಿಷನ್ ಕೊಡುವುದು, ಬಿಡುವುದು ಕಮಿಷನರ್ ಅವರಿಗೆ ಇದೆ. ೩೦ ದಿವಸದಲ್ಲಿ ಕೊಡದೇ ಹೋದರೆ, ಯಾರು ಪರ್ಮಿಷನ್‌ಗೆ ಅಪ್ಲೈ ಮಾಡಿಕೊಂಡಿದ್ದಾರೆ ಅವರಿಗೆ ಮತ್ತೆ ಇನ್ನೊಂದು ೩೦ ದಿನ ಕೊಡಬಹುದು. The Commissioner can sleep for 30 days and for another 30 days he must get up on the basis of another letter. ಇದು ಏನು ಸ್ವಾಮಿ, ಎಂತಹ ನ್ಯಾಯ, ಎಂತಹ ಪರ್ಮಿಷನ್ ಎನ್ನುವುದು ನನಗೆ ಗೊತ್ತಿಲ್ಲ. Are you making them more and more inefficient ? You are actually making them inefficient. the Commissioner has got to reply within 30 days. I don't know the reason why he can't give the reply within 30 days. ಸುಮ್ಮನೆ ಕೊಡುವುದಿಲ್ಲವೆಂದು ಹೇಳಿ, ಇನ್ನೊಂದು ೩೦ ದಿವಸ ಕೊಡಬೇಕೆಂದು ಕೇಳಿದರೆ, ಜನರು ಸಫರ್ ಮಾಡಿಕೊಳ್ಳುತ್ತಾರೆ. ಎರಡು ತಿಂಗಳ ಕಾಲ ಬಿಟ್ಟು ಕೊಡಬೇಕಾಗುತ್ತದೆ. ಇಲ್ಲಿ ಪ್ರಶ್ನೆ ಏನು ಬರುತ್ತದೆ ಎಂದರೆ, ಬ್ಯೂರೋಕ್ರಸಿಗೆ, strength ಕೊಡುವುದಕ್ಕೆ ಅವಕಾಶ ಮಾಡಿರುತ್ತೀರಿ. ಆಡಳಿತ ಸ್ಟ್ರೀಮ್‌ಲೈನ್ ಆಗಬೇಕೆಂಬ ಮನೋಭಾವ ಈ ಬಿಲ್ಲಿನಲ್ಲಿ ಇಲ್ಲ, ಈ ಸರ್ಕಾರಕ್ಕೂ ಇಲ್ಲವೆಂದು ಹೇಳಬೇಕಾಗುತ್ತದೆ. ೬೦ ದಿನ ಕೊಡುತ್ತೀರಿ. ೩೦ ದಿನ ಮೊದಲು, ಅನಂತರ ೩೦ ದಿನ. ಅಲ್ಲಿಗೂ ಪರ್ಮಿಷನ್ ಕೊಡದೇ ಹೋದರೆ ಮುಂದೆ ಏನು ಎಂಬುದನ್ನು ಇಲ್ಲಿ ಏನೂ ಹೇಳಿಲ್ಲ. What is the position then ? Should it not it not be deemed that permission has been granted ? This is my question. It should be deemed as having granted the permission because it is the fault of the bureaucracy, fault of the Commissioner. ೩೦ ದಿನ ಆಯಿತು, ಇನ್ನೊಂದು ದಿನ ಆಯಿತು. ಏನೂ ಪತ್ರ ಬರುವುದಿಲ್ಲ. For the fault of the bureaucracy why should I suffer ? ಬೇರೆ ದೇಶಗಳಲ್ಲಿ ಈ ತರಹ ಪರಿಸ್ಥಿತಿ ಬಂದರೆ, the concerned organisations or persons file a suit for damages. ಮದ್ರಾಸ್‌ನಲ್ಲಿ ಒಂದು ಪ್ರಕರಣ ಇದೆ. ಅಲ್ಲಿ ನೀರು ಕೊಡಲಿಲ್ಲ ಎಂದು ಹೇಳಿ, ಯಾರೋ ಒಬ್ಬರು ಕೋರ್ಟಿಗೆ ಹೋದರು. ಅಲ್ಲಿ ಆ ರೀತಿ ಕೋರ್ಟಿಗೆ ಹೋಗಿರಬೇಕಾದರೆ, ಇಲ್ಲಿ, ನಮ್ಮಲ್ಲಿ ಯಾರೂ ಆ ರೀತಿ ಮಾಡಿಲ್ಲ. ಇಲ್ಲಿ ಎಲ್ಲರೂ ಬಡವರು, ಮಧ್ಯಮವರ್ಗದವರು. ಅಲ್ಲದೆ ಅಂತಹ ಒಂದು ಪ್ರಜ್ಞೆಯೂ ಸಹ ಬಂದಿಲ್ಲ. ಆ ಒಂದು ಪ್ರಜ್ಞೆ ಬಂದರೆ ಒಳ್ಳೆಯದು. ಈ ತರಹ ಅವಕಾಶ ಮಾಡಿಕೊಟ್ಟರೆ, ಮತ್ತೆ ಪುನಃ it goes in favour of the department and not in favour of the people. This amendment will strengthen the bureaucracy. It doesn't help an ordinary man. ಮಾನ್ಯ ಅಧ್ಯಕ್ಷರೇ, ಇದೇ ರೀತಿ ಇನ್ನೊಂದು ಇದೆ. ಬಹಳ ತಮಾಷೆಯಾಗಿದೆ. ಅಮೆಂಡ್‌ಮೆಂಟ್ ಸೆಕ್ಷನ್ ೩೧೦ ರಲ್ಲಿ ಏನಾಗಿದೆ ಎಂದರೆ, ಮೂಲಭೂತವಾಗಿ ಇರುವಂಥ ಅಂಶಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾರಾದರೂ ಒಂದು ಮಹಡಿ ಜಾಸ್ತಿ ಕಟ್ಟಬೇಕಾಗಿ ಬಂದರೆ, ಅಂತಹವರಿಗೆ

ಪರ್ಮಿಷನ್ ಕೊಟ್ಟಿದ್ದರೆ, ಪೂರ್ಣವಾಗಿ ಆದ ಒಂದು ತಿಂಗಳೊಳಗಾಗಿ ಸರ್ಟಿಫಿಕೇಟ್ ಪಡೆಯಬೇಕು, ಪೂರ್ಣ ಮಾಡಿದ್ದಕ್ಕೆ ನೋಟೀಸ್ ಕೊಡಬೇಕು. ಅಲ್ಲಿಯತನಕ ಸರಿಯಾಗಿದೆ. ಏಕೆಂದರೆ ಇದು ಗಂಗಾರಾಂ ಬಿಲ್ಡಿಂಗ್ ಆಗಕೂಡದೆಂದು ಯೋಚನೆ ಮಾಡಿ ಮಾಡಿದ್ದಾರೆ. ಗಂಗಾರಾಂ ಕಟ್ಟಡದಲ್ಲಿ ಯಾವರೀತಿ ಕಾರ್ಪೊರೇಷನ್ ಅಧಿಕಾರಿಗಳು ದಕ್ಷತೆ ತೋರಿಸಿದ್ದಾರೆಂದು ಗೊತ್ತು. ಈ ಸೂಚನೆ ಒಳ್ಳೆಯದು. ಆದರೆ ಕಡೆಯಲ್ಲಿ ಏನು ಹೇಳಿದ್ದಾರೆ ಎಂದರೆ,

"(1A) Notwithstanding anything contained in sub-section (1), where permission is granted to any person for erection of a building having more than one floor, such person shall, within one month after completion of execution of any of the floors of such building, deliver or send or cause to be delivered or sent to the Commissioner at his office, a notice in writing of such comple- form tion accompanied by a certificate in the prescribed in the byelaws, signed and subscribed in the manner prescribed and shall give to the Commissioner all necessary facilities for inspection of such floor of the building and may apply for permission to occupy such floor of the building."

(ಉಪಾಧ್ಯಕ್ಷರು, ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈಗ ಪರ್ಮಿಷನ್‌ಗೆ ಅಪ್ಲೈ ಮಾಡಿರುತ್ತಾರೆ. ನೀವು ಪರ್ಮಿಷನ್ ಕೊಟ್ಟಿರುತ್ತೀರಿ. ನೀವು ಪರ್ಮಿಷನ್ ಕೊಟ್ಟಮೇಲೆ, ಒಂದು ಮಹಡಿ ಜಾಸ್ತಿಯಾದರೆ ಬರೆದು ಕೊಳ್ಳುತ್ತಾರೆ. ಅವರು ಬರೆದುಕೊಂಡರು ಎಂದು, ನೀವು ಇನ್‌ಸ್ಪೆಕ್ಟ್ ಮಾಡಿ, ಆ ರೀತಿ ಇನ್‌ಸ್ಪೆಕ್ಟ್ ಮಾಡಿದ ಮೇಲೆ, ಸರ್ಟಿಫಿಕೇಟ್ ಕೊಡುವ ಜವಾಬ್ದಾರಿ ಅಥವಾ ಸರ್ಟಿಫಿಕೇಟ್ ತಿರಸ್ಕಾರ ಮಾಡುವ ಜವಾಬ್ದಾರಿ, ಅದು ಯಾರದು ? ಕಾರ್ಪೊರೇಷನ್ ಅವರದು. ಕಾರ್ಪೊರೇಷನ್‌ನವರು ಕೊಟ್ಟಮೇಲೆ ಮತ್ತೆ, where is necessity to apply for permission to occupy such floor of the building ? I don't think that the last aspect is necessary. When once I get the certificate, why I should apply for permission to occupy the building ? What is the implication? You must have another look at this. ಎಂದು ನನಗನ್ನಿಸುತ್ತದೆ. ಇನ್ನೊಂದು ಮಾನ್ಯ ಅಧ್ಯಕ್ಷರೇ, ೪೮೨ಕ್ಕೆ ತಿದ್ದುಪಡಿ ತಂದಿದ್ದೀರಿ. ಈಗ ಇರುವ ಸೆಕ್ಷನ್ ೪೮೨ ಏನು ಹೇಳುತ್ತಿದೆ ಎಂದರೆ

"No suit for damage or compensation shall be instituted against the corporation or any municipal authority, corporation officer or servant, or any person acting under the direction of the same, in respect of any act done in pursuance or in execution, or intended execution of this Act or any rule, bye-law, regulation or order made under it or in respect of any alleged neglect or default in the execution of this Act or any rule, bye-law, regulation or order made under it until the expiration of one month after a notice has been delivered or left..."

ಇದರಲ್ಲಿ ಏನು ಮಾಡಿದ್ದಾರೆ ಎಂದರೆ, ಡ್ಯಾಮೇಜ್, ಕಂಪೆನ್‌ಸೇಷನ್ ಬಿಟ್ಟುಬಿಡಬೇಕೆಂದು ಹೇಳುತ್ತಿದ್ದಾರೆ. ಡ್ಯಾಮೇಜ್ ಬಿಟ್ಟುಬಿಟ್ಟರೆ, no suit can be filed. ಡ್ಯಾಮೇಜ್‌ಗೆ ಸೂಟ್ ಮಾಡುವ ಹಾಗೆ ಇಲ್ಲ, ಏನೂ ಮಾಡುವ ಹಾಗೆ ಇಲ್ಲ, ಯಾವ ಮುನಿಸಿಪಲ್ ಅಥಾರಿಟಿಯ ಮೇಲೂ

ಮಾಡುವ ಹಾಗೆ ಇಲ್ಲ ಎನ್ನುವ ಅಭಿಪ್ರಾಯ ಬರುವುದಕ್ಕೆ ಅವಕಾಶ ಇದೆ. I think it is a very wide power given to the Corporation. I don't know why such power is given to the Corporation authorities in regard to execution. ಏಕೆಂದರೆ ಇದರ ಅರ್ಥ ಏನಾಗುತ್ತದೆ, ಇದರ ಇಂಪ್ಲಿಕೇಷನ್ ಏನಾಗುತ್ತದೆ, ಎಂದರೆ ಕಾರ್ಪೊರೇಷನ್‌ನವರು ಇವತ್ತು ಮಾಡುವುದೆಲ್ಲಾ ಸರಿಯಾಗಿ ಮಾಡುತ್ತಾರೆ, ಒಳ್ಳೆಯ ಉದ್ದೇಶದಿಂದ ಮಾಡುತ್ತಾರೆ, ನ್ಯಾಯವಾಗಿ ಮಾಡುತ್ತಾರೆ, ಅವರದ್ದು ಯಾವುದೇ ತಪ್ಪೂ ಇಲ್ಲ ಎಂಬ ಅಭಿಪ್ರಾಯ ಬರುವುದಕ್ಕೆ ಅವಕಾಶವಾಗಿದೆ. ಇದರಿಂದ ಅವರ ಮೇಲೆ ಯಾರೂ ಚಕಾರ ಎತ್ತುವ ಹಾಗೆ ಇಲ್ಲ. ಯಾವ ಸೂಟ್ ಹಾಕುವ ಹಾಗೆ ಇಲ್ಲ. That is the wide power given to the Corporation authorities and the Corporation itself. ಎಂದು ನನಗನ್ನಿಸುತ್ತದೆ. ಮೊದಲು ಕೊಟ್ಟಿರುವುದೇ ಬಹಳ ಜಾಸ್ತಿ ಆಯಿತು. ಇವತ್ತು ಇದನ್ನೂ ಇಟ್ಟುಕೊಂಡು ಏನಾಗುತ್ತದೆ ಎಂದರೆ, ಒಂದು ಕಡೆ ಜನಗಳು ಯಾರೂ ಇನ್ನೊಂದು ಕಡೆ ಕಾರ್ಪೊರೇಷನ್ ಆಡಳಿತ ಇನ್‌ಕಾಂಪಟೆಂಟ್ ಇರುತ್ತದೆ. ಬೇಕಾದಷ್ಟು ಕೇಸ್‌ಗಳು ಇರುತ್ತವೆ. ಬೇಕಾದಷ್ಟು ಜನ ಸ್ಟೇ ಆರ್ಡರ್ ತೆಗೆದುಕೊಂಡು ಬರುತ್ತಾರೆ. ಅದನ್ನು ನೋಡುವವರೇ ಇರುವುದಿಲ್ಲ. ಎಷ್ಟೋ ಕೇಸ್‌ಗಳನ್ನು ನೋಡುವವರೇ ಅಲ್ಲಿ ಇರುವುದಿಲ್ಲ. ಕೆಲವು ಕಡೆ ಫೈಲ್‌ಗಳೇ ಇರುವುದಿಲ್ಲ. ಕೆಲವು ಕಡೆ ಕಾರ್ಪೊರೇಷನ್ ಅಧಿಕಾರಿಗಳು ಕೆಲವು ಪರ್ಸೊನಾಲಿಟೀಸ್ ಜೊತೆ ಕೊಲೂಷನ್ ಆಗಿ ಅವರಿಂದ ದುಡ್ಡು ತೆಗೆದುಕೊಂಡು ಅವರೇ ಸ್ಟೇ ತೆಗೆಸಿಕೊಂಡು ಬಂದು ಬಿಡುತ್ತಾರೆ, ಈ ತರಹವೂ ನಡೆದಿದೆ. ನನ್ನ ರಾಜಾಜಿನಗರ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಒಂದು ಪ್ರದೇಶ ಇದೆ. ಅದು ಸುಮಾರು ಒಂದೂವರೆ ಎರಡು ಎಕರೆ ಇರಬಹುದು, ಅದು ಕಾರ್ಪೊರೇಷನ್‌ಗೆ ಸೇರಿದೆ. ಒಂದು ಕಡೆ ನೀರಿನ ಟ್ಯಾಂಕ್ ಇದೆ ಇನ್ನೊಂದು ಕಡೆ ಖಾಲಿ ಲ್ಯಾಂಡ್ ಇದೆ. ಅದು ಮೂರು ನಾಲ್ಕು ಎಕರೆ ಇರಬಹುದು. ಈ ಜಾಗ ಕಾರ್ಪೊರೇಷನ್‌ಗೆ ಸೇರಿದೆ, ನೀವು ಅದನ್ನು ಪ್ರೊಟೆಕ್ಟ್ ಮಾಡಿ ಎಂದು ಹೇಳಿದೆ. ಅದಕ್ಕೆ ಫೆನ್ಸಿಂಗ್ ಮಾಡಿ, ಫ್ಲೇಗ್ರೌಂಡ್ ಮಾಡಿ, ಏನಾದರೂ ಕಟ್ಟಿಸಿ ಎಂದು ಹತ್ತು ವರ್ಷದಿಂದ ಕೇಳುತ್ತಾ ಬಂದಿದ್ದೇನೆ ಆದರೆ ಏನೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಕಾರ್ಪೊರೇಷನ್ ಕಮಿಷನರ್‌ರವರು ಬಂದು ಇನ್‌ಸ್ಪೆಕ್ಟ್ ಮಾಡಿದ್ದಾರೆ. ಕಾರ್ಪೊರೇಷನ್ ಅಧಿಕಾರಿಗಳು ಬಂದು ನೋಡಿದ್ದಾರೆ. ಎಲ್ಲರೂ ಹೋಗಿ ನೋಡಿದ್ದಾರೆ. ಹಿಂದೆ ಇದ್ದವರು, ಈಗ ಬಂದವರು ಎಲ್ಲರೂ ಹೋಗಿ ನೋಡಿದ್ದಾರೆ. ಮಾನ್ಯ ಮಂತ್ರಿಗಳೂ ಬಂದು ನೋಡಿಕೊಂಡು ಹೋಗಿದ್ದಾರೆ. ಮಾನ್ಯ ಚಂದ್ರಶೇಖರ್‌ರವರು ಮಾನ್ಯ ಸಿಂಧ್ಯರವರು ಎಲ್ಲರೂ ಬಂದು ನೋಡಿದರು. ಕೊನೆಗೆ ಏನಾಯಿತು ಎಂದರೆ, ಏಕಾ ಏಕಿ ಫೆನ್ಸಿಂಗ್ ಹಾಕುವುದಕ್ಕೆ ಪ್ರಯತ್ನ ಪಟ್ಟರು. ಕೊನೆಗೆ ತಕ್ಷಣ ಯಾರೋ ಹೋಗಿ ಸ್ಟೇ ಆರ್ಡರ್ ತೆಗೆದುಕೊಂಡು ಬಂದಿದ್ದಾರೆ. ಆ ಸ್ಟೇ ಆರ್ಡರ್ ವೆಕೇಟ್ ಮಾಡಿಸುವುದಕ್ಕೆ ಇವರಿಗೆ ಇನ್ನೂ ಸಾಧ್ಯವಾಗಿಲ್ಲ. ತಮ್ಮ ಲ್ಯಾಂಡನ್ನು ತಾವೇ ಕಾಪಾಡಿಕೊಳ್ಳುವುದಕ್ಕೆ ಆಗಿಲ್ಲ ಇಂತಹ ಪರಿಸ್ಥಿತಿ ಬಂದಿದೆ. ಕಾರ್ಪೊರೇಷನ್‌ಗೂ ಬಂದಿದೆ, ಬಿ.ಡಿ.ಎ.ಗೂ ಇಂತಹ ಪರಿಸ್ಥಿತಿ ಬಂದಿದೆ. ಇಂತಹ ಪರಿಸ್ಥಿತಿ ಇರಬೇಕಾದರೆ ಈಗ ನೀವು ಕಾನೂನು ಮಾಡಿ ಬೇಕಾಬಿಟ್ಟಿಯಾಗಿ ಮಾಡಿಕೊಂಡು ಹೋಗಿ ಎಂದು ಕಾರ್ಪೊರೇಷನ್ ಅಧಿಕಾರಿಗಳಿಗೆ ಕೊಟ್ಟುಬಿಟ್ಟರೆ ಇದು ಅಕ್ಷಮ್ಯ ಅಪರಾಧವಾಗುತ್ತದೆ ಎಂದು ನನ್ನ ಅಭಿಪ್ರಾಯ. ಇದರ ಬಗ್ಗೆ ತಾವು ಗಮನ ಹರಿಸಿದಂತೆ ಕಾಣುವುದಿಲ್ಲ ಹಾಗೂ ಯಾವ ರೀತಿಯ ಅಭಿಪ್ರಾಯವನ್ನು ಹೇಳಿಲ್ಲ. ಒಟ್ಟಾರೆ ನನಗನ್ನಿಸುತ್ತದೆ, ಈ ತಿದ್ದುಪಡಿಗಳನ್ನು ತೆಗೆದುಕೊಂಡು ಬಂದಿರುವುದು, ಈ ಸ್ಟ್ಯಾಂಡಿಂಗ್ ಕಮಿಟಿಗಳು, ಸೋಷಿಯಲ್ ಜಸ್ಟೀಸ್ ಕಮಿಟಿಗಳು ಇವುಗಳ ಬಗ್ಗೆ ಒಳ್ಳೆಯದಾದರೂ ಮಿಕ್ಕ ಎಲ್ಲಾ ವಿಷಯಗಳಲ್ಲೂ ಸಹ ಇದು ತೀರಾ ಅಸಮರ್ಪಕವಾದ ಅಸಮಾಧಾನಕರವಾದ ತಿದ್ದುಪಡಿಯಾಗಿದೆ. ಇದರ ಬಗ್ಗೆ ಇನ್ನೊಂದು ಸಲ ಯೋಚನೆ ಮಾಡಿ ಸೂಕ್ತವಾದ ತಿದ್ದುಪಡಿ ತರಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಹಾಗೂ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್).—ಮಾನ್ಯ ಉಪಾಧ್ಯಕ್ಷರೇ, ಇವತ್ತು ಮಾನ್ಯ ಲಕ್ಷ್ಮೀಸಾಗರ್‌ರವರು ತಂದಿರತಕ್ಕಂಥ ತಿದ್ದುಪಡಿಗಳು ಅಷ್ಟು ಸಮಂಜಸವಾಗಿಲ್ಲ. ಕಾರಣ ಏನೆಂದರೆ, ಈಗಾಗಲೇ ಮಾನ್ಯ ಕೃಷ್ಣನ್‌ರವರು ಮಾತನಾಡುತ್ತಾ ಒಂದು ಕಡೆ ಹೇಳಿದರು. ನಾಮಿನೇಟೆಡ್ ಅಸೆಂಬ್ಲಿ ಮೆಂಬರ್ ಹಾಗೂ ಅಸೆಂಬ್ಲಿ ಸದಸ್ಯರು ಕಾರ್ಪೊರೇಷನ್ ಸದಸ್ಯರಾಗಿರತಕ್ಕಂಥಾದ್ದು ಪ್ರಜಾಪ್ರಭುತ್ವಕ್ಕೆ ವಿರುದ್ಧ ಎಂದು ಹೇಳತಕ್ಕಂಥ ಮಾತನ್ನು ಹೇಳಿದರು. ಆ ರೀತಿ ಇರುವುದೂ ಕೂಡಾ ಪರವಾಗಿಲ್ಲ ಎಂಬ ಮಾತನ್ನೂ ಹೇಳಿದರು. ಆದರೆ ನಾನು ಇವತ್ತು ನಮ್ಮ ಮಂತ್ರಿಗಳನ್ನು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೇಳಬಯಸುತ್ತೇನೆ, ತಾವು ತಮ್ಮ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಏನು ಹೇಳಿದ್ದೀರಿ ಎಂದರೆ

"Provisions are made that in addition to a member of the State Legislative Assembly representing a part or whole of the city, a nominated member of the Legislative Assembly who is an ordinary resident of the city should also be entitled to participate in the meetings of the Corporation or the Standing committee"

ಈ ರೀತಿ ಹೇಳಿದ್ದೀರಿ. ಯಾವಾಗ ನೀವು ಅಸೆಂಬ್ಲಿ ಮೆಂಬರ್ಸ್‌ಗೆ ಮತ್ತು ಈ ಬಿಲ್ ಮೂಲಕ ನಾಮಿನೇಟೆಡ್ ಅಸೆಂಬ್ಲಿ ಮೆಂಬರ್‌ಗೆ ಕಾರ್ಪೊರೇಷನ್ ಚರ್ಚೆಯಲ್ಲಿ, ಅಲ್ಲಿನ ಕೆಲಸ ಕಾರ್ಯಗಳಲ್ಲಿ ಭಾಗವಹಿಸುವುದಕ್ಕೆ ಅನುಮತಿ ಕೊಡುತ್ತೀರಿ, ಅದೇ ರೀತಿಯಾಗಿ ಜನತೆಯಿಂದ ಎಲೆಕ್ಟ್ ಆಗಿ ಹೋಗುವಂತಹ ಪಾರ್ಲಿಮೆಂಟ್ ಸದಸ್ಯರಿಗೆ ಏತಕ್ಕೆ ಕೊಟ್ಟಿಲ್ಲ? ಇವರೂ ಸಹ ಜನರಿಂದ ನೇರವಾಗಿ ಎಲೆಕ್ಟ್ ಆಗಿ ಬಂದಿರುತ್ತಾರೆ. ಬೆಂಗಳೂರು ನಗರದಲ್ಲಿ ಎರಡು ಪಾರ್ಲಿಮೆಂಟ್ ಸೀಟ್ ಇದೆ. ಇವರೂ ಸಹ ನೇರವಾಗಿ ಜನರ ಕಷ್ಟಸುಖಗಳಲ್ಲಿ ಭಾಗಿಯಾಗತಕ್ಕಂಥ ಜನರಾಗಿರುತ್ತಾರೆ. ಅವರನ್ನು ಬಿಟ್ಟು ಕೇವಲ ಅಸೆಂಬ್ಲಿ ಮೆಂಬರ್ಸ್‌ಗೆ ಹಾಗೂ ನಾಮಿನೇಟೆಡ್ ಅಸೆಂಬ್ಲಿ ಮೆಂಬರ್ಸ್‌ಗೆ ಕಾರ್ಪೊರೇಷನ್‌ನ ನಾಮಿನೇಟೆಡ್ ಮೆಂಬರ್ಸ್ ಎಂದು ಮಾಡಿರುತ್ತೀರಿ. ಈ ನಾಮಿನೇಟೆಡ್ ಅಸೆಂಬ್ಲಿ ಮೆಂಬರ್ಸ್ ಯಾರು? ಇಡೀ ರಾಜ್ಯದಲ್ಲಿ ಕೆಲವರೂ ಸಿಗುವುದಿಲ್ಲ. ಅಸೆಂಬ್ಲಿಯಲ್ಲಾದರೆ ಅವರ ಒಂದು ಇಂಟರೆಸ್ಟನ್ನು ಕಾಪಾಡಬೇಕೆಂಬ ದೃಷ್ಟಿಯಿಂದ ನಾಮಿನೇಟ್ ಮಾಡುತ್ತಿದ್ದೀರಿ. ಅದೂ ಒಬ್ಬರೇ ಒಬ್ಬರು ಆಂಗ್ಲೋ ಇಂಡಿಯನ್ ಕಮ್ಯುನಿಟಿ ಮೆಂಬರ್ ಇದ್ದಾರೆ. ಅವರನ್ನು ಸೇರಿಸಬಾರದು ಎಂದು ನಾನು ಹೇಳುತ್ತಿಲ್ಲ. ಆದರೆ ಜನರಿಂದ ನೇರವಾಗಿ ಎಲೆಕ್ಟ್ ಆಗಿ ಬಂದಂಥ ಪಾರ್ಲಿಮೆಂಟ್ ಸದಸ್ಯರು ಏನು ಇರುತ್ತಾರೆ, ಅವರಿಗೆ ಬಿಟ್ಟ ಕಾರಣ ಏನು? ಅವರನ್ನು ಏತಕ್ಕೆ ನಾಮಿನೇಟ್ ಮಾಡಲಿಲ್ಲ, ಅವರನ್ನು ಏತಕ್ಕೆ ಸೇರಿಸಲಿಲ್ಲ? ನೀವು ನಾಮಿನೇಟ್ ಮಾಡಿದ ಅಸೆಂಬ್ಲಿ ಮೆಂಬರ್‌ಗೆ ಅಲ್ಲಿ ಅಕಾಮಡೇಟ್ ಮಾಡಬೇಕೆಂಬ ದೃಷ್ಟಿಯಿಂದ ಅಥವಾ ಅವರೂ ಇರಲಿ ಎಂಬ ದೃಷ್ಟಿಯಿಂದ ಸೇರಿಸಿದ್ದೀರಿಯೇ ಹೊರತು ಬೇರೆ ಅವರಿಂದ ಯಾವ ಸೇವೆ ಆಗುತ್ತದೆ ಎಂಬಂದನ್ನು ತಾವು ಯೋಚನೆ ಮಾಡಬೇಕು. ಇದರಲ್ಲಿ ಎಲ್ಲ ರೆಪ್ರೆಸೆಂಟೆಟೀವ್ಸ್ ಇರಬೇಕೆಂದು ಹೇಳಿದರೆ, ಪಾರ್ಲಿಮೆಂಟ್ ಮೆಂಬರ್ಸ್‌ನ್ನೂ ಸೇರಿಸಿ, ಇಲ್ಲ ಎಂದರೆ ಈ ಅಮೆಂಡ್‌ಮೆಂಟ್ ಅನಾವಶ್ಯಕ ಎಂಬ ಮಾತನ್ನು ಸ್ಪಷ್ಟವಾಗಿ ನಾನು ಹೇಳುತ್ತೇನೆ.

ಎರಡನೆಯದಾಗಿ ಇವತ್ತು ಸಂಪ್‌ಚ್ಯುಯರಿ ಅಲೋಯನ್ಸ್ ೧೦ ಸಾವಿರ ಇದ್ದುದನ್ನು ೨೫ ಸಾವಿರ ರೂಪಾಯಿಗಳಾಗಿ ಮಾಡಿದ್ದೀರಿ. ಇದಕ್ಕೆ ನಮ್ಮ ಅಭ್ಯಂತರ ಇಲ್ಲ. ಎಲ್ಲಾ ಕಾಸ್ಟ್ ಜಾಸ್ತಿಯಾಗಿದೆ, ಆದುದರಿಂದ ಮೇಯರ್‌ರವರ ಅಲೋಯನ್ಸ್ ಹೆಚ್ಚು ಮಾಡುವುದಕ್ಕೆ ತಿದ್ದುಪಡಿ ತಂದಿದ್ದೀರಿ. ಇದರ ಬಗ್ಗೆ ನಾನು ಏನೂ ಹೇಳುವುದಿಲ್ಲ.

ಇನ್ನು ೨೮೮ (ಎ), ೨೮೮(ಬಿ) ಮತ್ತು ೨೮೮(ಸಿ) ಈ ಅಮೆಂಡ್‌ಮೆಂಟ್‌ಗಳನ್ನು ಏನು ತಂದಿದ್ದೀರಿ ಇವುಗಳ ಬಗ್ಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನೀವು ಎಷ್ಟೇ ಒಳ್ಳೆಯ ಉದ್ದೇಶದಿಂದ ಕಾನೂನು ಮಾಡಿದರೂ ಕೂಡಾ ಇವುಗಳ ಹೊಡೆತ ಯಾರ ಮೇಲೆ ಬೀಳುತ್ತದೆ ಎಂದರೆ ನಿಮ್ಮ ಆಫೀಸರ್ಸ್ ತೊಂದರೆ ಕೊಡುವುದು ಯಾರಿಗೆ ಎಂದರೆ, ಬಡವರಿಗೆ. ಬಡವರಿಗೇ ತೊಂದರೆ ಆಗುತ್ತದೆ. ಇವತ್ತು ಯಾರು ಸಣ್ಣಪುಟ್ಟ ಅಂಗಡಿಗಳನ್ನು ಇಟ್ಟುಕೊಂಡಿರುತ್ತಾರೆ ಅವರಿಗೆ, ಯಾರೋ ಒಬ್ಬ ಚಪ್ಪಲಿ ಅಂಗಡಿ ಇಟ್ಟುಕೊಂಡು ರಿಪೇರಿ ಮಾಡಿಕೊಳ್ಳುತ್ತಾ ಕುಳಿತುಕೊಂಡಿರುತ್ತಾರೆ ಯಾರು ಫ್ರೂಟ್ಸ್, ಕಾಯಿಪಲ್ಯೆ ಮಾರಾಟ ಮಾಡಿಕೊಂಡು ಕುಳಿತಿರುತ್ತಾರೆ ಅವರಿಗೆ ಈ ಕಾನೂನನ್ನು ಬಳಸಿಕೊಂಡು ತೊಂದರೆ ಕೊಡುವುದರ ಹೊರತು, ಬೇರೆ ದೊಡ್ಡ ದೊಡ್ಡ ಜನ ಯಾರಿದ್ದಾರೆ ಅವರಿಗೆ ತೊಂದರೆ ಆಗುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ, ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಕಟ್ಟಿಕೊಂಡು ಎನ್‌ಕ್ರೋಚ್‌ಮೆಂಟ್ ಮಾಡಿದವರಿಗೆ ದೊಡ್ಡ ದೊಡ್ಡ ದುಖಾನುಗಳನ್ನು ಇಟ್ಟುಕೊಂಡಿರುವವರಿಗೆ ಏನೂ ಮಾಡುವುದಿಲ್ಲ. ಒಂದು ಸಣ್ಣ ಚಪ್ಪಲಿ ಅಂಗಡಿ ಇಟ್ಟುಕೊಂಡಿರುವವರು, ಫ್ರೂಟ್ಸ್ ಕಾಯಿಪಲ್ಯೆ ಮಾರುವವರಿಗೆ ತೊಂದರೆ ಕೊಡುತ್ತಾರೆಯೋ ಹೊರತಾಗಿ ಬೇರೆಯವರಿಗೆ ಅನುಕೂಲ ಆಗುತ್ತದೆ. ಅವರಿಗೆ ಏನೂ ಆಗುವುದಿಲ್ಲ. ಇದರಿಂದ ಬಡಜನಗಳ ಹೆರ್ಯಾಸ್‌ಮೆಂಟ್ ಹೆಚ್ಚಾಗುತ್ತದೆ. ಆದಕಾರಣ ದಯವಿಟ್ಟು ತಾವು ಈ ಅಮೆಂಡ್‌ಮೆಂಟ್ ತರಬಾರದು. ಇದನ್ನು ತೆಗೆಯಬಹುದು ಎಂದು ಹೇಳುತ್ತೇನೆ. ಒಂದು ಕಡೆ ಸೋಷಿಯಲ್ ಜಸ್ಟೀಸ್ ಕೊಡುತ್ತೇವೆ

ಅಪೋರ್ಚ್ಯುನಿಟಿ ಕೊಡುತ್ತೇವೆ ಎಂಬ ಕಾರಣ ಕೊಡುತ್ತೀರಿ, ಇನ್ನೊಂದು ಕಡೆ ಇದನ್ನು ತಂದಿದ್ದೀರಿ, ಆದುದರಿಂದ ಇವತ್ತಿನ ದಿವಸ ಇದನ್ನು ತೆಗೆಯಬೇಕೆಂದು ಹೇಳುತ್ತೇನೆ. ಯಾವ ಕಾರಣ ಇರಲಾರದೆ, ಯಾವ ನೋಟೀಸ್ ಇರಲಾರದೆ ಈ ರೀತಿ ತೆಗೆದು ಹಾಕಿದರೆ ಅದರಿಂದ ಎಷ್ಟು ಬಡಜನರಿಗೆ ತೊಂದರೆ ಆಗುತ್ತದೆ, ಅನ್ಯಾಯ ಆಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇದು ಹೆಚ್ಚಾಗಿ ಕಾರ್ಪೊರೇಷನ್ ಏರಿಯಾದಲ್ಲೇ ಆಗತಕ್ಕಂಥಾದ್ದು ಬೆಂಗಳೂರು ಇರಬಹುದು, ಮೈಸೂರು ಇರಬಹುದು, ಮಂಗಳೂರು, ಹುಬ್ಬಳ್ಳಿ, ಧಾರವಾಡ ಇರಬಹುದು, ಗುಲಬರ್ಗಾ ಇರಬಹುದು, ಅಲ್ಲಿ ಬಿಟ್ಟರೆ ಬೇರೆ ಕಡೆಗೆ ಈ ಕಾನೂನು ಅನ್ವಯಿಸುವುದಿಲ್ಲ. ಅಲ್ಲಿರತಕ್ಕಂಥ ಬಡವರಿಗೆ ತೊಂದರೆಯಾಗುತ್ತದೆ. ಆದ ಕಾರಣ ಕನಿಷ್ಠಪಕ್ಷ ಅವರಿಗೆ ಒಂದು ನೋಟೀಸ್ ಕೊಡತಕ್ಕಂಥ ವ್ಯವಸ್ಥೆಯನ್ನಾದರೂ ಮಾಡಿದರೆ ಒಳ್ಳೆಯದಾಗುತ್ತದೆ. ಇಲ್ಲದೇ ಹೋದರೆ ಈ ಕಾನೂನನ್ನು ನಿಮ್ಮ ಅಧಿಕಾರಿಗಳು ಕೈಯಲ್ಲಿ ತೆಗೆದು ಕೊಂಡು ಬಡವರಿಗೆ ತೊಂದರೆ ಕೊಡುತ್ತಾರೆ, ಬಡವರ ಹತ್ತಿರ ವಸೂಲಿ ಮಾಡುತ್ತಾರೆಯೇ ಹೊರತಾಗಿ ನಿಮ್ಮ ಎನ್‌ಕ್ರೋಚ್‌ಮೆಂಟ್ ಏನೂ ಹೋಗುವುದಿಲ್ಲ. ಇದು ವಸೂಲಿಗೆ ಒಂದು ಹಾದಿ ಮಾಡಿಕೊಟ್ಟ ಹಾಗೆ ಈ ಕಾನೂನು ತರುವುದರಿಂದ ಸಿಟಿ ಏನೂ ಕ್ಲೀನ್ ಆಗುವುದಿಲ್ಲ. ಇದರಿಂದ ಎಕ್ಸ್‌ಪ್ಲಾಯಿಟೇಷನ್ ಪ್ರಾರಂಭವಾಗುತ್ತದೆ. ನಿಮ್ಮ ಅಧಿಕಾರಿಗಳು ಪಬ್ಲಿಕ್ ಜೊತೆ ಸೇರಿಕೊಂಡು ಇಂಥಹ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್‌ಗಳು ಆಗುವುದಕ್ಕೆ ಪ್ರೋತ್ಸಾಹ ಕೊಡುತ್ತಾರೆ. ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಆಗದೇ ಇರುವುದಕ್ಕೆ ಒಂದು ಕಾನೂನನ್ನು ಮಾಡಬೇಕು. ಮೊದಲೇ ಇದನ್ನು ಮಾಡಿದ್ದಿದ್ದರೆ ಇವತ್ತು ಈ ಪ್ರಶ್ನೆ ಬರುತ್ತಿರಲಿಲ್ಲ. ನಿಮ್ಮ ಅಧಿಕಾರಿಗಳು ಅಲರ್ಟ್ ಆಗಿ ಕೆಲಸ ಮಾಡಿದರೆ ಯಾವ ಅನಾಹುತವೂ ಆಗುವುದಿಲ್ಲ. ಸಂಬಂಧಪಟ್ಟ ರೆವಿನ್ಯೂ ಡಿವಿಜನ್‌ನಲ್ಲಿರತಕ್ಕಂಥ ಎಲ್ಲಾ ಅಧಿಕಾರಿಗಳು ಅಲರ್ಟ್ ಆಗಿ ಕೆಲಸ ಮಾಡಿದರೆ ಇಂತಹ ಅಮೆಂಡ್‌ಮೆಂಟ್‌ಗಳನ್ನು ತರಬೇಕಾದಂಥ ಅವಶ್ಯಕತೆ ಇರಲಿಲ್ಲ. ಇನ್ ಎಫಿಶಿಯಂಟ್ ಅಧಿಕಾರಿಗಳಿಂದ ಆಗುವ ತೊಂದರೆಗೆ ಈ ಒಂದು ಅಮೆಂಡ್‌ಮೆಂಟನ್ನು ತರುವ ಅವಶ್ಯಕತೆ ಇರಲಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇನ್ನೂ ಒಂದು ವಿಷಯವನ್ನು ಮಾನ್ಯ ಸಚಿವರು ಹೇಳಿದರು. ಕಾರ್ಪೋರೇಷನ್‌ನಲ್ಲಿ ಸ್ಟ್ಯಾಂಡಿಂಗ್ ಕಮಿಟಿಯನ್ನು ೩ ರಿಂದ ೬ಕ್ಕೆ ಏರಿಸುತ್ತೇವೆಂದು. ಕಾರ್ಪೋರೇಷನ್‌ನಲ್ಲಿ ೧೦೧ ಸದಸ್ಯರು ಇದ್ದಾರೆ. ೧೦೧ ಸದಸ್ಯರು ಇರುವುದರಿಂದ ೩ ಸ್ಟ್ಯಾಂಡಿಂಗ್ ಕಮಿಟಿ ಸಾಲುವುದಿಲ್ಲವಾದ್ದರಿಂದ ೬ ಸ್ಟ್ಯಾಂಡಿಂಗ್ ಕಮಿಟಿಯನ್ನು ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ. ಬರೀ ಸೈಸ್ ದೊಡ್ಡದು ಆಯಿತು ಎನ್ನುವ ಉದ್ದೇಶದಿಂದ ಸ್ಟ್ಯಾಂಡಿಂಗ್ ಕಮಿಟಿಯನ್ನು ಮಾಡುವುದು ಸರಿಯಲ್ಲ. ಈಗಿರುವ ೩ ಸ್ಟ್ಯಾಂಡಿಂಗ್ ಕಮಿಟಿಗಳೇ ಸಾಕಾಗಿತ್ತು. ಇನ್ನು ಮುಂದೆ ೨೦೦ ಸದಸ್ಯರಾದರೆ ಇನ್ನೂ ಹೆಚ್ಚಿಗೆ ಸ್ಟ್ಯಾಂಡಿಂಗ್ ಕಮಿಟಿ ಮಾಡಬೇಕೆಂದು ಸೂಚಿಸದಂತಾಗುವುದಿಲ್ಲವೆ ? ಸ್ಟ್ಯಾಂಡಿಂಗ್ ಕಮಿಟಿಯ ಪರ್‌ಪಸ್ ಏನು, ಅದರ ಆಬ್ಜೆಕ್ಟ್ಸ್ ಏನು ? ಕೇವಲ ಸದಸ್ಯರು ಜಾಸ್ತಿ ಇದ್ದಾರೆ ಎನ್ನುವ ಉದ್ದೇಶದಿಂದ ಕಮಿಟಿಗಳನ್ನು ಹೆಚ್ಚು ಮಾಡುವುದು ಸರಿಯಲ್ಲ. ಕಾರಣ ಇಲ್ಲದೇ ಈ ರೀತಿ ಕಮಿಟಿಗಳನ್ನು ಹೆಚ್ಚಿಸುತ್ತಾ ಹೋಗುವುದರಿಂದ ಅನಾವಶ್ಯಕ ಖರ್ಚು ಕಾರ್ಪೋರೇಷನ್‌ಗೆ ಬರುತ್ತದೆ. ಅದರಲ್ಲೂ ಪ್ರೊಫೆಸರ್ ಲಕ್ಷ್ಮಿಸಾಗರ್‌ರವರು ಬಹಳ ಅನುಭವಸ್ಥರು. ಅವರಿಗೆ ಇದರಲ್ಲಿ ಅಪಾರ ಅನುಭವ ಇದೆ. ಕಾನೂನಿನಲ್ಲಿ ನುರಿತಂಥವರು, ಇಂತಹವರು ಯಾವುದೇ ಸರಿಯಾದ ಕಾರಣ ಕೊಡದೇ ಸ್ಟ್ಯಾಂಡಿಂಗ್ ಕಮಿಟಿಯನ್ನು ೩ ರಿಂದ ೬ ಮಾಡುತ್ತೇವೆ ಎಂದು ಹೇಳಿದರೆ ಅದು ತಪ್ಪಾಗುತ್ತದೆ. ನೀವು ನಮಗೆ ಸಕಾರಣಗಳನ್ನು ಕೊಟ್ಟು, ಇಂಥಿಂಥ ಕಾರಣಕ್ಕೆ ಇಂಥಿಂಥ ಕೆಲಸವಾಗುವುದಕ್ಕೆ ನಾವು ಕಮಿಟಿಗಳನ್ನು ಮಾಡುತ್ತೇವೆಂದು ಹೇಳಿದ್ದರೆ ಸರಿಯಿತ್ತು. ಈಗಾಗಲೇ ಮುನಿಸಿಪಾಲಿಟಿಗಳಲ್ಲಿ ಹಾಗೂ ಕಾರ್ಪೋರೇಷನ್‌ಗಳಲ್ಲಿ ಹಣ ಇಲ್ಲವೆಂದು ಗೋಳಾಡುತ್ತಿದ್ದಾರೆ. ಅಂಥದ್ದರಲ್ಲಿ ನೀವು ಕಮಿಟಿಗಳನ್ನು ಜಾಸ್ತಿ ಮಾಡಿದರೆ, ಕಮಿಟಿಗೆ ಬೇಕಾಗುವ ಸ್ಟಾಫು, ಟೆಲಿಫೋನು ಮುಂತಾದುವುಗಳಿಗೆಲ್ಲಾ ಇನ್ನೂ ಹೆಚ್ಚಿನ ಖರ್ಚಾಗುತ್ತದೆ. ಅದಕ್ಕಾಗಿ ದಯವಿಟ್ಟು ಇದರ ಬಗ್ಗೆ ಪುನಃ ಪರಿಶೀಲಿಸುತ್ತೀರೆಂದು ತಿಳಿದುಕೊಂಡಿದ್ದೇನೆ. ಇನ್ನೂ ಒಂದು ವಿಷಯ ಏನೆಂದರೆ ಸೆಕ್ಷನ್ ೪೮೨ನ್ನು ಅಮೆಂಡ್ ತರುತ್ತಿರುವುದು ಸಹ ಅಷ್ಟು ಸಮಂಜಸವಲ್ಲ. ತಾವು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ. ವಿರೋಧ ಪಕ್ಷದವರು ಯಾವಾಗಲೂ ಇದೇ ರೀತಿ ಮಾತನಾಡುತ್ತಾರೆಂದು ತಾವು ಅಲಕ್ಷ ಮಾಡತಕ್ಕ ಪ್ರಶ್ನೆ ಇದಲ್ಲ. ಇದರಿಂದ ಬಹಳ ತೊಂದರೆಯಾಗುತ್ತದೆ. ಈ ತಿದ್ದುಪಡಿಯನ್ನು ತರುವುದೇ ಬಹಳ ಅನ್ಯಾಯವಾಗುತ್ತದೆ. ತಾವು ಇದರ ಕಡೆ ಗಮನ ಕೊಟ್ಟು ಕೆಲಸ ಮಾಡಬೇಕೆಂದು ಪುನಃ ಸಲಹೆ ಕೊಡುತ್ತೇನೆ. ಆಮೇಲೆ ಪಾರ್ಲಿಮೆಂಟಿನ ಸದಸ್ಯರುಗಳೂ ಸಹ ನೇರವಾಗಿ ಎಲೆಕ್ಟ್ ಆಗಿ ಬರತಕ್ಕಂಥ ರೆಪ್ರೆಸೆಂಟೆಟೀವ್‌ಗಳಾಗಿರುತ್ತಾರೆ. ಅವರಿಗೂ ಕೂಡ ಇದರಲ್ಲಿ ಸ್ಥಾನ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಆ್ಯಕ್ಟ್‌ಗೆ ಏನು ತಿದ್ದುಪಡಿ ತಂದಿದ್ದಾರೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಒಂದು ಸೂಕ್ತವಾದಂಥ ಸಂದರ್ಭದಲ್ಲಿ ಈ ತಿದ್ದುಪಡಿಯನ್ನು ತಂದಿದ್ದಾರೆಂದು ನಾನು ಭಾವಿಸುತ್ತೇನೆ. ಇದರ ಜೊತೆ ಜೊತೆಯಲ್ಲೇ ಅದಷ್ಟು ಜಾಗ್ರತೆ ನಗರಸಭೆ ಹಾಗೂ ಪುರಸಭೆಗಳಿಗೂ ಸಹ ಈ ರೀತಿ ಅನುಕೂಲತೆಯನ್ನು ಮಾಡಬೇಕೆಂದು ಈ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತಾ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಸೆಕ್ಷನ್ ೨೮೮ (ಎ) (ಬಿ) (ಸಿ) ನಲ್ಲಿ ರಸ್ತೆಗಳಲ್ಲಿ ಜನಗೆಗೆ ತೊಂದರೆಯಾಗುವಂಥ ಸಣ್ಣ ಪುಟ್ಟ ಅಂಗಡಿಗಳನ್ನು ಹಾಕಿಕೊಳ್ಳುವಂಥಹವರು ಸಣ್ಣ ಪುಟ್ಟ ಗೋಡೆಗಳನ್ನು ಹಾಕಿಕೊಳ್ಳುವಂಥಹವರು ಮೊದಲು ಪರ್‌ಮಿಷನ್ ತೆಗೆದುಕೊಳ್ಳಬೇಕೆಂಬ ಮಾತಿನಲ್ಲಿ ಹೇಳಿದ್ದೀರಿ. ನಾನು ಸರ್ಕಾರದಲ್ಲಿ ಕೇಳುವುದಕ್ಕೆ ಇಚ್ಛೆಪಡುವುದೇನೆಂದರೆ, ಸರ್ಕಾರದಲ್ಲಿ ಈಗಿರುವಂಥ ಕಾನೂನಿನಲ್ಲಿ ಯಾರು ತಮ್ಮ ಖುಷಿ ಬಂದಂತೆ ಜನತೆಗೆ ತೊಂದರೆಯಾಗುವಂಥ ಸ್ಥಳದಲ್ಲಿ ಅಂಗಡಿಗಳನ್ನು ಹಾಕುತ್ತಾರೋ ಅಂಥವುಗಳನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲವೇ ? ಎಲ್ಲೆಂದರಲ್ಲಿ ಅಂಗಡಿಗಳನ್ನು ಮಳಿಗೆಗಳನ್ನು ಕಟ್ಟುವುದಕ್ಕೆ ಎಲ್ಲಿ ಅವಕಾಶ ಇದೆ ? ಕಾನೂನು ಯಾವಾಗ ಮಾಡಬೇಕೆಂದರೆ. ಈಗಿರುವಂಥ ಕಾನೂನಿನಲ್ಲಿ ಇಂತಹ ಅನ್ ಆಥರೈಸ್ಡ್ ಕಟ್ಟಡಗಳನ್ನು ನಿಲ್ಲಿಸಲು ಸಾಧ್ಯವಾಗದೇ ಇದ್ದರೆ ಹೊಸ ಕಾನೂನನ್ನು ಮಾಡಬಹುದಾಗಿತ್ತು. ಈಗಾಗಲೇ ಅಂಥ ಕಾನೂನು ಸರ್ಕಾರದಲ್ಲಿ ಜಾರಿಯಲ್ಲಿದ್ದರೂ ಸಹ ಈ ತಿದ್ದುಪಡಿಯನ್ನು ತರುವ ಅವಶ್ಯಕತೆ ಇರಲಿಲ್ಲವೆಂದು ನಾನು ಭಾವಿಸುತ್ತೇನೆ. ಇಂತಹ ಅಂಗಡಿ ಮುಗ್ಗಟ್ಟುಗಳು ಬೆಳೆಯುವವರೆಗೂ ನಾವೇ ಸುಮ್ಮನೆ ಇದ್ದು, ಅವು ಹೆಚ್ಚು ಅಂಗಡಿಗಳಾಗಿ ಜನರಿಗೆ ತೊಂದರೆಯಾಗುವಾಗ ಅವುಗಳನ್ನು ಕಿತ್ತುಹಾಕುವ ಬಗ್ಗೆ ಯೋಚನೆಮಾಡುತ್ತೇವೆ. ಇಂತಹ ಅಂಗಡಿಗಳನ್ನು ಪ್ರಾರಂಭದಲ್ಲೇ ಇಡದಂತೆ ನೋಡಿ ಕೊಳ್ಳುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಕಲ್ಕತ್ತ, ಡೆಲ್ಲಿಗೆ ಬೆಂಗಳೂರನ್ನು ಹೋಲಿಸಿದರೆ ಆ ನಗರಗಳಿಗಿಂತ ಬೆಂಗಳೂರೇ ಎಷ್ಟೋ ಉತ್ತಮವಾಗಿದೆಯೆಂದು ಹೇಳಬಹುದು. ಮೆಜೆಸ್ಟಿಕ್‌ನಲ್ಲಿ ಅನ್ ಆಥರೈಸ್ಡ್ ಆಗಿ ಅನೇಕ ಅಂಗಡಿಗಳು ಪ್ರಾರಂಭವಾಗಿ ಜನತೆಗೆ ಬಹಳ ತೊಂದರೆಯಾಗುತ್ತಿದ್ದನ್ನು ಕಂಡು ಸರ್ಕಾರವು ಪ್ರಾಮಾಣಿಕವಾಗಿ ಅವುಗಳನ್ನು ಕಿತ್ತುಹಾಕಿತು. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ಮತ್ತೆ ಅಂಥ ಅಂಗಡಿಗಳನ್ನು ಹಾಕಿಕೊಳ್ಳತಕ್ಕವರು ಮೊದಲು ಕಾರ್ಪೋರೇಷನ್ ಕಮಿಷನರ್‌ರವರಿಂದ ಪರ್ಮಿಷನ್‌ನ್ನು ಪಡೆದಿರಬೇಕೆಂದು ಹೇಳುತ್ತಿದ್ದೀರಿ ಇದು ಸರಿಯಲ್ಲ ಕಾರ್ಪೋರೇಷನ್ ಸಭೆಗಳಲ್ಲಿ ಇಂತಹ ತೀರ್ಮಾನಗಳಾಗುವುದು ಸರಿ. ಕಮಿಷನರ್‌ವರಿಗೆ ಈ ಅಧಿಕಾರವನ್ನು ಕೊಡುವುದು ಸರಿಯಲ್ಲ. ಅಂಗಡಿಗಳನ್ನು ಹಾಕಿಕೊಳ್ಳುವವರು ಕಾರ್ಪೋರೇಷನ್ ಕಮಿಷನರ್‌ರವರ ಪರ್‌ಮಿಷನ್ ತೆಗೆದುಕೊಳ್ಳಬೇಕೆಂಬ ವಿಷಯವನ್ನು ತೆಗೆದುಹಾಕಬೇಕು. ಇನ್ನೂ ಒಂದು ಉತ್ತಮ ಸಲಹೆ ಏನೆಂದರೆ, ಕಾರ್ಪೋರೇಷನ್ ತನ್ನ ಹಣದಲ್ಲೇ ಕಾರ್ಪೊರೇಷನ್‌ಗೆ ಸಂಬಂಧಪಟ್ಟ ಜಾಗಗಳಲ್ಲಿ ಅಂಗಡಿಗಳನ್ನು ಕಟ್ಟಿಸಿ ಸಣ್ಣ ಸಣ್ಣ ವ್ಯವಹಾರಸ್ಥರಿಗೆ ಕೊಡುವುದು ಒಳ್ಳೆಯದು. ಆಗ ಮಾತ್ರ ಇಂತಹ ಅವ್ಯವಸ್ಥೆಗಳು ನಿಲ್ಲುತ್ತವೆ. ಇಲ್ಲದಿದ್ದರೆ ರಾತ್ರೋ ರಾತ್ರಿ ಅಂಗಡಿಗಳನ್ನು ಹಾಕಿಕೊಂಡು ಬಿಡುತ್ತಾರೆ. ಅವರುಗಳನ್ನು ಓಡಿಸಬೇಕಾದರೆ ಬಹಳ ಕಷ್ಟವಾಗುತ್ತದೆ. ಮೆಜೆಸ್ಟಿಕ್ ಸರ್ಕಲ್‌ನಲ್ಲಿ ಸಾಯಂಕಾಲದ ಹೊತ್ತು ಹೋಗಿ ನೋಡಿದರೆ, ಬಹಳ ಜನ ಫುಟ್‌ಪಾತ್‌ಗಳ ಮೇಲೆ ಖರ್ಚೀಫ್ ಮುಂತಾದ ಸಾಮಾನುಗಳನ್ನು ಮಾರುತ್ತಿರುತ್ತಾರೆ. ಪೋಲೀಸಿನವರು ಬಂದರೆ ದಡ ದಡ ಓಡಿಹೋಗುತ್ತಾರೆ. ಪೋಲೀಸಿನವರು ಅತ್ತ ಹೋದ ಮೇಲೆ ಪುನಃ ತಮ್ಮ ವ್ಯಾಪಾರವನ್ನು ಪ್ರಾರಂಭಿಸುತ್ತಾರೆ. ಕೆಲವು ಅಂಗಡಿಗಳವರು ಪೋಲೀಸಿನವರಿಗೆ ೧೫–೨೦–೨೫ ರೂಪಾಯಿಗಳನ್ನು ಕೊಟ್ಟು ಸರಿಮಾಡಿಕೊಂಡಿರುತ್ತಾರೆ. ಇಂತಹ ವ್ಯಾಪಾರಗಳನ್ನು ಕಡಿಮೆ ಮಾಡಿ ಫುಟ್‌ಪಾತ್‌ನಲ್ಲಿ ಓಡಾಡುವ ಜನರಿಗೆ ಅನುಕೂಲ ಮಾಡಿಕೊಡಬೇಕೆಂದರೆ ಕಾರ್ಪೊರೇಷನ್‌ನವರೇ ಅಂಗಡಿಗಳನ್ನು ಕಟ್ಟಿಸಿ ಸಣ್ಣ ಸಣ್ಣ ವ್ಯಾಪಾರಸ್ಥರಿಗೆ ಕೊಡಬೇಕು. ಆದ್ದರಿಂದ ಅಂಗಡಿಗಳ ಲೈಸೆನ್ಸ್‌ಗಳನ್ನು ಕೊಡುವ ಅಧಿಕಾರವನ್ನು ಕಾರ್ಪೊರೇಷನ್ ಕಮಿಷರ್ ರವರಿಗೆ ಕೊಡುವ ಅಗತ್ಯ ಇಲ್ಲ. ನಾನು ಹೇಳುವ ರೀತಿಯಲ್ಲಿ ಅಂಗಡಿ ಮಳಿಗೆಗಳನ್ನು ಕಟ್ಟಿಸಬೇಕು ಮತ್ತು ಆ ಅಂಗಡಿಗಳನ್ನು ಕಾರ್ಪೋರೇಷನ್ ಸಭೆಗಳಲ್ಲಿ ಯಾರಿಗೆ ಕೊಡಬೇಕೆಂದು ತೀರ್ಮಾನ ಮಾಡಿ ಕೊಡಬೇಕು. ಆಗ ಮಾತ್ರ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರ ಸರಿಯಾದ ರೀತಿಯಲ್ಲಿ ಗಮನ ಕೊಟ್ಟು ತಿದ್ದುಪಡಿಯನ್ನು ತರಬೇಕು. ಈ ತಿದ್ದುಪಡಿಯಿಂದ ಏನಾಗುತ್ತದೆ ಎಂದರೆ ಅಧಿಕಾರಿಗಳು ಅಂಗಡಿಗಳವರನ್ನು ಬೆದರಿಸಿ ದುಡ್ಡು ಮಾಡುತ್ತಾರೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಬಿ. ಎಸ್ ಯಡಿಯೂರಪ್ಪ.—ಒಬ್ಬ ಅಂಗಡಿಯನ್ನು ತೆಗೆದರೆ ಆ ಜಾಗಕ್ಕೆ ಇನ್ನೊಬ್ಬ ಬರುತ್ತಾನೆ. ಇದಕ್ಕೆ ಒಂದು ರೀತಿಯ ಪರಿಹಾರ ಮಾಡಬೇಕು ಈಗ ಅಲ್ಲಿರುವ ಎಂದರೆ, ಒಂದು ಕಡೆಯಲ್ಲಿ ಇರುವ ಅಂಗಡಿಗಳನ್ನು ತೆಗೆಯಬೇಕು ಅಂದರೆ, ಅವರಿಗೆ ಬೇರೆ ಏನಾದರೂ ಒಂದು ವ್ಯವಸ್ಥೆಗೊಳಿಸುವ ಯೋಜನೆಯು ಇದೆಯೇ ? ಒಂದು ಸುವ್ಯವಸ್ಥೆಯನ್ನು ಆ ಜನರಿಗೆ ಬೇರೆ ಕಡೆಗಳಲ್ಲಿ ಮಾಡಿ ಕೊಟ್ಟಲ್ಲಿ, ಪ್ರತಿನಿತ್ಯವೂ ಕಿರುಕುಳ ಪ್ರಾರಂಭವಾಗಿ ಜನರಿಗೆ ತೊಂದರೆಯಾಗತಕ್ಕಂತಹ ಪರಿಸ್ಥಿತಿ ಉದ್ಭವವಾಗುವುದಿಲ್ಲ. ಎಲ್ಲವೂ ಕಾನೂನಿನ ಚೌಕಟ್ಟಿನಲ್ಲಿ ಇದ್ದರೂ ಸಹ ಸಂಬಂಧಪಟ್ಟ ಪ್ರಾಮಾಣಿಕ ಅಧಿಕಾರಿಯಾಗಲೀ, ಅಲ್ಲಿರತಕ್ಕಂತಹ ಚುನಾಯಿತ ಪ್ರತಿನಿಧಿಯಾಗಲಿ ಸರಿಯಾಗಿ ಕೆಲಸ ಮಾಡದಿದ್ದ ಕಾರಣದಿಂದಾಗಿ ಇದು ಪ್ರಾರಂಭವಾಗಿದೆ. ೨೮೮ ಎ.ಬಿ.ಸಿ.ಗೆ ಅಮೆಂಡ್‌ಮೆಂಟ್ ತರುವ ಅಗತ್ಯ ಇಲ್ಲ. ಇದು ಕಾನೂನಿನ ಚೌಕಟ್ಟಿನಲ್ಲಿ ಇದೆ. ಸಂಬಂಧಪಟ್ಟವರು ಹೇಳಬಹುದು ಕೋರ್ಟಿಗೆ ಹೋಗುತ್ತೇವೆ ಎಂದು. ಹಾಗೇನೂ ಆಗುವುದಿಲ್ಲ. ನನಗೆ ಗೊತ್ತಿರುವ ಹಾಗೆ ಅಲ್ಲಿರುವ ಅಧಿಕಾರಿಗಳೇ ಕೋರ್ಟಿಗೆ ಹೋಗುವಂತೆ ಅಂತಹವರಿಗೆ ಪ್ರಚೋದಿಸುವುದು. ಈಗ ಕಾನೂನಿಗೆ ಒಂದು ಬಿಗಿ ಬಂದಿದೆ. ಇನ್ನು ಬೆಂಗಳೂರಿನ ಮುಖ್ಯ ರಸ್ತೆಗಳಲ್ಲಿ ಹೋದರೆ ಅಲ್ಲಿನ ಕಾರ್ಯವೈಖರಿಯ ಅರ್ಥ ವಾಗುತ್ತದೆ. ಬೆಂಗಳೂರಿನ ಇತ್ತೀಚಿನ ಒಂದು ನೈರ್ಮಲ್ಯವಾಗಲೀ, ಮತ್ತಿತರ ಯಾವುದೇ ವಿಚಾರದಲ್ಲಿ ಆಗಲಿ ಒಂದು ತೃಪ್ತಿಕರವಾದ ಕೆಲಸಕಾರ್ಯಗಳು ಆಗುತ್ತಿಲ್ಲ. ಈ ಕುರಿತಾಗಿ ಮಾನ್ಯ ಮುಖ್ಯ ಮಂತ್ರಿಯವರು ಬೆಂಗಳೂರು ನಗರ ಯಾವ ರೀತಿಯಾಗಿ ಹಾಳಾಗಿ ಹೋಗುತ್ತಾ ಇದೆ ಎಂದು ಒಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ, ಅವರ ಒಂದು ತೀವ್ರ ಸಂತಾಪದ ಮಾತನ್ನು ಹೇಳಿದ್ದಾರೆ. ಅದಕ್ಕೆ ಕಾರ್ಪೊರೇಷನ್‌ನವರು ಯಾವ ರೀತಿಯ ಪ್ರತಿಸ್ಪಂದಿಸುತ್ತಾರೆ ಎನ್ನುವುದನ್ನು ನೋಡಬೇಕು. ಹಾಗೆಯೇ ಕಾರ್ಪೊರೇಷನ್‌ನವರು ಯಾವುದೇ ಕಾರ್ಯಗಳನ್ನು ಮಾಡುವಂತಹ ಸಂದರ್ಭದಲ್ಲಿ ಅವರಿಗೆ ಸೂಕ್ತವಾದ ಸಲಹೆಗಳನ್ನು ಕೊಟ್ಟು ಲೋಪದೋಷಗಳನ್ನು ಇಲ್ಲದ ರೀತಿಯಲ್ಲಿ ನೋಡಿಕೊಳ್ಳಬೇಕು. ಲೈಸನ್ಸ್ ಇತ್ಯಾದಿಗಳನ್ನು ಕೊಡುವ ಸಂದರ್ಭಗಳಲ್ಲಿ ಒಂದು ಕಟ್ಟುನಿಟ್ಟು ಧೋರಣೆಯನ್ನು ಅನುಸರಿಸಬೇಕು, ಯಾವುದೇ ರೀತಿಯಲ್ಲಿ ದುರುಪಯೋಗ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಈ ಒಂದು ತಿದ್ದುಪಡಿಯನ್ನು ತಂದುದಕ್ಕೆ ಒಂದು ಸಾರ್ಥಕತೆಯನ್ನು ಪಡೆದು ಕೊಳ್ಳುವಂತಾಗಬೇಕು, ಈ ಒಂದು ಉತ್ತಮ ತಿದ್ದುಪಡಿಯ ಕಾನವಾನನ್ನು ಸರಿಯಾದ ಕಾರ್ಯಾ ಚರಣೆಯ ಮೂಲಕ ತಂದು ಅದರ ಉಪಯೋಗ ಆಗುವಂತೆ ನೋಡಿಕೊಳ್ಳಬೇಕು. ಅಂತೆಯೇ ಪುರಸಭೆಗಳಿಗೂ ಇಂತಹ ಒಂದು ಕಾನೂನಿನ ಲಭ್ಯವನ್ನು ಮಾಡಿಕೊಡಬೇಕೆಂದು ವಿನಂತಿಸಿ, ತಿದ್ದುಪಡಿ ಯನ್ನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಈ ಒಂದು ಅಮೆಂಡ್ ಮೆಂಟ್‌ನ್ನು ತಂದಾಗ ನಾನು ಅಂದುಕೊಂಡಿದ್ದೆ, ಹತ್ತು ವರ್ಷಗಳಿಂದ ಮುನ್ಸಿಪಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೆಚ್ಚಿಗೆ ಕಾಳಜಿ ವಹಿಸಿ ಮಾನ್ಯ ಸಚಿವರು ಒಂದು ಒಳ್ಳೆಯ ತಿದ್ದುಪಡಿಯನ್ನು ತಂದಿದ್ದಾರೆ ಎಂದು. ಆದರೆ ನನ್ನ ಊಹೆ ಸರಿಯಾಗಿಲ್ಲ ಎಂದು ಅನ್ನಿಸುತ್ತದೆ. ಮಾನ್ಯ ವಿ. ಎಲ್. ಪಾಟೀಲ್ ರವರು ಇದನ್ನು ತಂದಿದ್ದರೆ ಒಪ್ಪಿಕೊಳ್ಳ ಬಹುದಾಗಿತ್ತು. ಆದರೆ ಮಾನ್ಯ ಲಕ್ಷ್ಮೀಸಾಗರ್‌ರವರು ಈ ತಿದ್ದುಪಡಿಯನು ತಂದಿರುವುದರಿಂದ ಅವರು ತಮಗೆ ಇರುವ ಬುದ್ಧಿಯನ್ನು ಸರಿಯಾಗಿ ಉಪಯೋಗಿಸಿದ್ದಾರೋ ಇಲ್ಲವೋ ಎಂಬ ಅನುಮಾನ ಬರುತ್ತಿದೆ. ಸೆಕ್ಷನ್ ೫೦೦-೫೦೧ ಮಾಡಿರು ವುದು ಸ್ವಾಗತಾರ್ಹ. ಹಳ್ಳಿಗಳನ್ನು ಅಬ್‌ಸಾರ್ಬ್ ಮಾಡಬೇಕೆಂದು ಡಿಮಾಂಡ್ ಇತ್ತು. ಈಗ ಅದನ್ನು ಮಾಡಿದ್ದಾರೆ. ಇನ್ನು ೨೮೮ ಎ. ಬಿ. ಸಿ. ಮಾಡಿದ್ದೀರಿ. ಸೆಕ್ಷನ್ ೧೭ಕ್ಕೆ ಒಂದು ಅಮೆಂಡ್ ಮೆಂಟನ್ನು ತಂದಿದ್ದೀರಿ. ಹಾಗೆಯೇ ಅದರಲ್ಲಿ ಮೇಯರ್‌ರವರಿಗೆ ಇದ್ದ ಸಮ್‌ಚ್ಯುವರಿ ಅಲೋಯೆನ್ಸ್ ೧೦ ಸಾವಿರ ರೂಪಾಯಿಗಳನ್ನು ೨೦ ಸಾವಿರ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಮಾಡಿದ್ದೀರಿ. ನಾನು ಅಂದುಕೊಂಡಿರುವುದು, ಮೇಯರ್‌ರವರಿಗೆ ಇದಲ್ಲದೇ ಕಾರ್ಪೊರೇಷನ್‌ನವರು ಬೇಕಾದಷ್ಟು ಖರ್ಚು ಮಾಡುತ್ತಾ ಇದ್ದಾರೆ. ಆದುದರಿಂದ ಅವರಿಗೆ ಇನ್ನೂ ಹತ್ತು ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಮಾಡಬಾರದಿತ್ತು. ಕಾರ್ಪೊರೇಷನ್ ಬಜೆಟ್‌ನಲ್ಲಿ ಇದು ಯಾವ ಲೆಕ್ಕಕ್ಕೂ ಇಲ್ಲ ಎಂದು ತಿಳಿದುಕೊಳ್ಳಬಾರದು. ಅಲ್ಲಿ ಹಣದ ದುರುಪಯೋಗ ಬಹಳವಾಗಿ ಆಗುತ್ತದೆ. ೨೮೮ ಎ.ಬಿ.ಸಿ. ಯಲ್ಲಿ ಒಂದು ಕಂಟ್ರೋಲ್ ತಂದಿದ್ದೀರಿ. ಬಡ ಜನರಿಗೆ ಹಿಂದಿನ ಕಾಂಗ್ರೆಸ್ ಸರಕಾರದವರೂ ಒಂದು ಉಪಕಾರವನ್ನು ಮಾಡಲಿಲ್ಲ, ನೀವೂ ಕೂಡ ಈ ಜನರಿಗೆ ಒಂದು ಉಪಕಾರ ಮಾಡಬಹುದಾಗಿತ್ತು. ಕೋಟಿಗಟ್ಟಲೆಯಷ್ಟು ಹಣವನ್ನು ಸಂಪಾದಿಸಿ, ಬಿ.ಡಿ.ಎ.ಗೆ ಕಾರ್ಪೊರೇಷನ್‌ಗೆ ಪ್ಯಾರಲಲ್ ಆಗಿ ಇರುವಂತಹ ಸಿ.ವಿ.ಎಲ್, ಶಾಸ್ತ್ರಿ, ಕೃಷ್ಣಭಟ್ ಮುಂತಾದ ವರನ್ನು ನೀವುಗಳು ಮುಟ್ಟುವುದಕ್ಕೆ ಹೋಗುವುದಿಲ್ಲ. ಅವರುಗಳು ತಮ್ಮ ದರ್ಬಾರನ್ನು ಮಾಡುತ್ತಾ ಇದ್ದಾರೆ. ಅವರಿಗೆ ಯಾವ ಭೀತಿಯೂ ಇಲ್ಲ. ಅಂತಹವರನ್ನು ಬಿಟ್ಟು ಈ

ಹಾಕರ್ಸ್‌ನ್ನು ನೀವುಗಳು ಹಿಡಿದಿಟ್ಟಿದ್ದೀರಿ. ಇದು ಸರಿಯಲ್ಲ. ಈ ಕಾನೂನನ್ನು ಮಾಡಿರುವುದರಿಂದ ಹತ್ತು ಸಾವಿರ ಹಾಕರ್ಸ್‌ಗಳ ಸಂಸಾರಕ್ಕೆ ಜೀವನೋಪಾಯಕ್ಕೆ ತೊಂದರೆಯಾಗುತ್ತದೆ. ಆ ಜನರು ಸುಮ್ಮನೇ ಏನೂ ನಡೆಸುತ್ತಾ ಇಲ್ಲ, ಪೋಲೀಸರಿಗೆ, ಕಾರ್ಪೋರೇಷನ್‌ನವರಿಗೆ ಮಾಮೂಲು ಕೊಡುತ್ತಾ ಇದ್ದಾರೆ. ಸುಮಾರು ೧೦೦ ರೂಪಾಯಿಗಳನ್ನು ಪೋಲೀಸ್ ಲೈಸನ್ಸ್‌ಗೆ ಅವರು ಕೊಡುತ್ತಾ ಇದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅವರು ಬದುಕಿಕೊಂಡಿದ್ದಾರೆ. ನೀವು ಇನ್ನೂ ಜಾಸ್ತಿ ಕಂಟ್ರೋಲ್ ಮಾಡಿದರೆ, ೧೦೦ ರೂಪಾಯಿ ಇದ್ದುದನ್ನು ಇನ್ನುಮೇಲೆ ೨೦೦ ರೂಪಾಯಿಗಳಷ್ಟು ಕೊಡಬೇಕಾಗುತ್ತದೆ. ಈ ಬಗ್ಗೆ ನಾನು ವಿನಂತಿಸಿಕೊಳ್ಳುವುದೇನೆಂದರೆ, ೨೮೮–ಷಿ ಏನಿದೆ ಇದನ್ನು ಬಿಟ್ಟು ಬಿಡಬೇಕು. ನಮ್ಮದು ಬಹಳ ಬಡತನ ಇರುವ ದೇಶ. ಈ ಬಡಜನರಾದ ಹಾಕರ್ಸ್‌ಗಳಿಗೆ ತೊಂದರೆ ಮಾಡುವುದು ಬೇಡ. ಇನ್ನು ೨೮೮–ಡಿಯಲ್ಲಿ ಎಲ್ಲಾ ಪವರ್ಸ್‌ನ್ನು ಕಮಿಷನರ್‌ಗೆ ಕೊಟ್ಟಿದ್ದಾರೆ. According to 188 D, the Commissioner may without notice remove encroachment. ಇದನ್ನು ಉಪಯೋಗಿಸಿ ಕೊಂಡರೆ ಸಾವಿರಾರು ಜನರಿಗೆ ತೊಂದರೆಯಯಗುತ್ತದೆ. ಎಷ್ಟೋ ಬಡಜನರು ಈಗಾಗಲೇ ಕಷ್ಟದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅಂಗಡಿಗಳು ಇವೆ, ಇಂತಹವರನ್ನೆಲ್ಲಾ ಓಡಿಸಿದರೆ ಅವರ ಗತಿ ಏನು ? ದೊಡ್ಡ ದೊಡ್ಡ ಮನುಷ್ಯರು ಎನ್‌ಕ್ರೋಚ್ ಮಾಡಿದರೆ ಅವರ ಹತ್ತಿರ ಅಧಿಕಾರಿಗಳು ಹೋಗುವುದಿಲ್ಲ. ಇದು ನ್ಯಾಚುರಲ್ ಜಸ್ಟೀಸ್‌ಗೆ ವಿರೋಧವಾಗಿದೆ, ಇದನ್ನು ಮಾಡಬಾರದು ಎಂದು ಮಾನ್ಯ ಧರ್ಮಸಿಂಗ್‌ರವರು ಕೂಡ ಹೇಳಿದ್ದಾರೆ.

ಇನ್ನೊಂದು ಸೆಕ್ಷನ್ ಇದೆ. ಇದರ ಅಗತ್ಯ ಇತ್ತೆ ?

Amendment to Section 310 reads thus :

"(1A) Notwithstanding any thing contained in sub-section (1), where permission is granted to any person for Election of a building having more than one floor, such person shall, with in one month after completion of execution of any of the floors of such building, deliver or send or cause to be delivered or sent the Commissioner at his office, a notice in writting of such completion accompanied by a certificate in the form prescribed in the byelaws, signed and subcribed in the manner prisribed."

ಇದು ಅಗತ್ಯ ಇತ್ತೇ ಎಂದು ತಾವು ಯೋಚನೆ ಮಾಡಿ. ನೀವು ಲೈಸೆನ್ಸ್ ಕೊಡುತ್ತೀರಿ. ಅದರ ಪ್ರಕಾರ ಒಂದು ಮಾಹಿತಿಯನ್ನು ಕೊಡುತ್ತಾರೆ. ಈಗ ಅದೇ ಜನರು ಇನ್ನೊಬ್ಬ ರೆವಿನ್ಯೂ ಆಫೀಸರ್‌ಗೆ ಮಾಮೂಲು ಕೊಡುವ ಹಾಗೆ ಆಗುತ್ತದೆ. ಹಾಗೆಯೇ ಒಂದು ಮಳಿಗೆ ಕಟ್ಟಿಕೊಂಡ ಮೇಲೆ ಇನ್ನೊಂದು ನೋಟೀಸ್ ಕೊಡಬೇಕಾಗುತ್ತದೆ. ಹೀಗಾಗಿ ಬೇರೆ ಬೇರೆ ಹಂತದಲ್ಲಿ ಮನೆ ಕಟ್ಟುವವರಿಗೆ ಒಂದು ತೊಂದರೆ ಆಗುತ್ತದೆ.

"...and shall give to the Commissioner all neccssary facilities."

ಎಂದರೆ ಏನೇನು ಫೆಸಿಲಿಟೀಸ್ ಕೊಡುವುದು ? ಎಂದರೆ ಕುಡಿಯುವ ಅಧಿಕಾರಿ ಇದ್ದರೆ ಅವನಿಗೆ ಬಾಟಿಲ್ ಸಪ್ಲೈ ಮಾಡಬೇಕಾದೀತು. cantuible called an ammendment ? ಇದರಲ್ಲಿ ಹೀಗೆ ಹೇಳಿದ್ದೀರಿ ?

"...fot inspection of such floor of the building and may apply for permision to occupy srch floor of the building"

ಲೈಸೆನ್ಸ್ ತೆಗೆದು ಕೊಳ್ಳುವಾಗ ಆರು ತಿಂಗಳು ಆಗುತ್ತದೆ. ಕಟ್ಟಿದ ಮೇಲೂ ಅಕ್ಯುಪೈ ಮಾಡಿ ಕೊಳ್ಳುವುದಕ್ಕೆ ಏನಾದರೂ ಅಡೆತಡೆಗಳು ಇದ್ದರೆ ಇನ್ನೂ ತೊಂದರೆಯಾಗುತ್ತದೆ. ಮಾನ್ಯ ಮುಖ್ಯ

ಮಂತ್ರಿಯವರು ಇದ್ದಾರೆ. ನಾನು ಒಂದು ಶಬ್ದವನ್ನು ಉಪಯೋಗಿಸುತ್ತೇನೆ. ಅದು ಅನ್‌ಪಾರ್ಲಿಮೇಂಟರಿ ಶಬ್ದವೋ ಏನೋ, ಅಥವಾ ಪಾರ್ಲಿಮೆಂಟರಿ ಶಬ್ದವೋ ಏನೋ ನನಗೆ ಗೊತ್ತಿಲ್ಲ. ಈ ಕಾರ್ಪೊರೇಷನ್ ನಲ್ಲಿ ಕೆಲವಾರು ಹೆಗ್ಗಣಗಳು ಇವೆ. ಆ ಹೆಗ್ಗಣಗಳನ್ನು ಓಡಿಸಲು ಯಾವುದೇ ಪ್ರಯತ್ನವನ್ನು ಮಾಡಿದರೂ ಸಹ ಅವರು ಯಾರನ್ನಾದರೂ ಉಪಯೋಗಿಸಿ ಅಲ್ಲಿಯೇ ಉಳಿದು ಕೊಳ್ಳುತ್ತಾರೆ. ಅಂತಹವರಿಗೆ ಏನಾದರೂ ಒಂದು ಲಿಮಿಟ್ ಹಾಕಬೇಕು. ಒಬ್ಬೊಬ್ಬ ಅಧಿಕಾರಿ ಕೋಟ್ಯಾಂತರ ರೂಪಾಯಿಗಳ ಹಣವನ್ನು ಸಂಪಾದನೆ ಮಾಡಿಕೊಂಡಿದ್ದಾರೆ. ಅವರ ಹೆಸರುಗಳನ್ನು ನಾನು ಹೇಳುವುದಿಲ್ಲ. ಯಾವನೇ ಒಬ್ಬ ಲೆಂಟ್ ಆಫೀಸರ್ ಐದುವರ್ಷಕ್ಕಿಂತ ಹೆಚ್ಚಿಗೆ ಇಲ್ಲಿದ್ದರೆ, ಕೂಡಲೇಅಂತಹವರನ್ನು ಅಲ್ಲಿಂದ ವಾಪಸ್ ಕಳುಹಿಸುವುದಕ್ಕೆ ಒಂದು ಏರ್ಪಾಡು ಮಾಡಬೇಕು.ಇದೆಲ್ಲಾ ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಗೊತ್ತಿದೆ, ಗೊತ್ತಿಲ್ಲ ಎಂದೇನೂ ಇಲ್ಲ. ಅವರು ಇಂದಿಗೂ ಒಂದು ಮನೆಯನ್ನು ಕೂಡ ಮಾಡಿ ಕೊಂಡಿಲ್ಲ. ಅವರು ತಮ್ಮ ಒಂದು ಕರ್ತವ್ಯವನ್ನು ಈ ಕೆಲಸದಲ್ಲಿ ನಿರ್ಭೀತಿಯಿಂದ ಮಾಡಬೇಕು. ಇಂಥಾವರಿಗೆ ಇದೆಲ್ಲಾ ಗೊತ್ತಿದ್ದರೂ ಕೂಡ ಈ ಕೆಳದರ್ಜೆ ನೌಕರರು ಏನು ಇದ್ದಾರೆ ಅವರ ಮೇಲೆ ಏತಕ್ಕೆ ಇದನ್ನು ತಂದಿದ್ದಾರೋ ಗೊತ್ತಿಲ್ಲ. ಇದರಲ್ಲಿ ೨೮೮ ಎ, ಬಿ, ಸಿ, ಡಿಯವರೆಗೂ ಹೋಗಿದ್ದಾರೆ. ಈ ಬಗ್ಗೆ ಒಂದು ಅಮೆಂಡ್‌ಮೆಂಟ್ ಆಯಿತು. ಅದು ಈ ರೀತಿ ಇದೆ :

"If you file an application it has to be dispensed with"

ಅದರ ಪ್ರಕಾರ CPC is the law of land ಈಗಾಗಲೇ ಕಾರ್ಪೊರೇಷನ್ ಅಥಾರಿಟೀಸ್‌ಗಿಂತಲೂ ಸರ್ಕಾರಕ್ಕೆ ಹೆಚ್ಚು ಅಧಿಕಾರ ಇದೆ. ಇನ್ನು ಇದಕ್ಕಿಂತಲೂ ಹೆಚ್ಚು ಪವರ್ಸ್ ಬೇಕು ಎಂದು ನಿಮ್ಮ ಮನಸ್ಸಿನಲ್ಲಿ ಈಗ ಬಂದಿದೆ. ಅದಕ್ಕೋಸ್ಕರ ಶ್ರೀ ಲಕ್ಷ್ಮೀಸಾಗರ್‌ರವರು ಇದನ್ನು ತಂದಿದ್ದಾರೆ. Corporation Act cannot over-ride the CPC CPC is the law of the land. ಆದ್ದರಿಂದ ಇದಕ್ಕೆ ಒಂದು ಕ್ಲಾಸ್ ಹಾಕಿದ್ದಾರೆ. ಕಾರ್ಪೊರೇಷನ್ ಏನು ಮಾಡಬೇಕು? ಅವರು ನನ್ನ ಹತ್ತಿರ ಬಾ ಮಾತನಾಡು, ಇಲ್ಲದಿದ್ದರೆ ನೀವು ಕೇಸ್ ಹಾಕಿ. ನೀವು ಕೇಸ್ ಹಾಕಿದರೂ ಸಹ ನಡೆಯುವುದಿಲ್ಲ, ಪುನಃ ನನ್ನ ಹತ್ತಿರ ಬರಬೇಕು ಅಂತ ಆಗುತ್ತದೆ, ಅದನ್ನೂ ಕೂಡ ಅಮೆಂಡ್ ಮಾಡಿದ್ದಾರೆ. ಅಮೆಂಡ್‌ಮೆಂಟ್ ಆಫ್ ಸೆಕ್ಷನ್ ೪೮೨ರಲ್ಲಿ ಈ ರೀತಿ ಇದೆ, ಅದನ್ನು ತಮ್ಮ ಗಮನಕ್ಕೆ ತರುತ್ತೇನೆ, ಅದು ಈ ರೀತಿ ಇದೆ:

(1A) A suit to obtain an urgent or immediate relief against the Corporation or any municipal authority corporation officer or servant in respect of any act done or purporting to be done by such officer or servant in his official capacity, may be instituted with the leave of the court, without serving any notice as required by sub-section (1), but the court shall not grant relief in the suit, whether interim or otherwise except after giving to the corporation officer or servant as the case may be, a reasonable opportunity of showing cause in respect of the relief prayed for in the suit."

ಇದರ ಬಗ್ಗೆ ತಮ್ಮ ಗಮನಕ್ಕೆ ತರಬೇಕಾದರೆ ಸಿಪಿಸಿ ಯಲ್ಲಿ ಏನು ಇದೆಯೋ ಅದನ್ನು ಇದರಲ್ಲಿ ಅಳವಡಿಸಿಲ್ಲ. ಆದುದರಿಂದ ತಾವು ಇದರ ಬಗ್ಗೆ ಎಕ್ಸ್‌ಟ್ರಾ ಪವರ್ಸ್ ತೆಗೆದುಕೊಳ್ಳುವುದು ಸರಿಯಲ್ಲ. ಎಕ್ಸ್‌ಟ್ರಾ ಪವರ್ಸ್ ತೆಗೆದುಕೊಳ್ಳುವ ಹಾಗೆ ಇದರಲ್ಲಿ ಪ್ರಾವಿಜನ್ ಮಾಡಿ ಅಪ್ಲೈ ಮಾಡುವುದರಿಂದ ಇದರಿಂದ ಹಾಕರ್ಸ್‌ಗೆ ತೊಂದರೆಯಾಗುತ್ತದೇ ವಿನಹ ದೊಡ್ಡ ದೊಡ್ಡ ಟೈಕೂನ್ಸ್ ಅವರಿಗೆ ತೊಂದರೆ ಯಾಗುವುದಿಲ್ಲ. ದೊಡ್ಡ ದೊಡ್ಡ ಟೈಕೂನ್ಸ್ ಅವರನ್ನು ಬಲಿ ಹಾಕಬೇಕು.

ಇನ್ನು ಇದರಲ್ಲಿ ೫೦೦ ಮತ್ತು ೫೦೧ ಸೆಕ್ಷನ್ ಏನು ತಂದಿದ್ದೀರಿ ಅದು ಬೇಕಾಗಿಲ್ಲ, ಅದರ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ. I oppose the Bill except Amendment to Section 500 and 501.

† ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ತಂದಿರುವ ಈ ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಈಗಾಗಲೇ ಈ ತಿದ್ದುಪಡಿ ಮಸೂದೆಯಲ್ಲಿರತಕ್ಕಂಥ ದೌರ್ಬಲ್ಯಗಳ ಬಗ್ಗೆ ಅನೇಕ ಜನ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಮೂಲಭೂತವಾಗಿ ಯಾವುದೇ ರೀತಿಯ ಕಾಯಿದೆಯನ್ನು ಮಾಡತಕ್ಕಂಥ ಅಧಿಕಾರ ಇರುವ ಈ ಸಭೆ ಏನು ಇದೆ ಹಾಗೆಯೇ ಅದೇ ರೀತಿಯಾಗಿ ಈ ಕಾಯಿದೆಗೆ ಬೇಕಾದಂಥ ಉಪಕ್ರಮವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕಂಥ ಈ ಸರ್ಕಾರ ಕೆಲವು ವಿಷಯಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ನಾವು ಒಂದು ಕಾನೂನು ಮಾಡುತ್ತೇವೆ. ಆಮೇಲೆ ಪದೇ ಪದೇ ಯಾವಾಗ ಅಧಿವೇಶನ ಸೇರುತ್ತದೆಯೋ ಆಗ ಯಾರು ಯಾರಿಗೆ ಏನೇನು ಅದರಲ್ಲಿ ತೊಂದರೆ ಇದೆ ಎಂದು ಕಂಡುಬರುತ್ತದೆಯೋ ಅದಕ್ಕೆ ತಕ್ಕಂತೆ ೧–೨–೩–೪ ತಿದ್ದುಪಡಿಯನ್ನು ತರತಕ್ಕಂಥದ್ದನ್ನು ಮಾಡುತ್ತಾರೆ. ಆದುದರಿಂದ ಈ ಮೂಲಭೂತವಾದಂಥ ಪ್ರವೃತ್ತಿಯನ್ನು ನಾವು ಖಂಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಈ ರೀತಿಯಾಗಿ ತೇಪೆ ಹಾಕತಕ್ಕಂಥ ಕ್ರಮವನ್ನು ಯಾವ ಸರ್ಕಾರವಾಗಲಿ ಯಾರೇ ಆಗಲಿ ಅಷ್ಟು ಲಘುವಾಗಿ ತೆಗೆದುಕೊಳ್ಳಬಾರದು. ಯಾವುದಾದರೂ ಒಂದು ಕಾನೂನಿನಲ್ಲಿ ನಮ್ಮ ಉದ್ದೇಶಗಳನ್ನು ಸಫಲಗೊಳಿಸತಕ್ಕಂಥ ವಿಷಯಗಳು ಸಾಲದು ಎನ್ನುವುದಾಗಲಿ ಅಥವಾ ಇರುವ ವಿಧಿಗಳಲ್ಲಿ ಈ ತಿದ್ದುಪಡಿಗೆ ಸೂಕ್ತವಾದ ತಿದ್ದುಪಡಿಗಳು ಅದರಲ್ಲಿ ಒಳಗೊಂಡಿಲ್ಲ ಎನ್ನುವುದಾಗಲಿ ಅಥವಾ ಯಾವುದೋ ಒಂದು ದೌರ್ಬಲ್ಯವನ್ನು ಹೊಂದಿದೆ ಎಂದು ಅನಿಸಿದರೆ ಆಗ ಆ ಕಾನೂನನ್ನು ಸಮಗ್ರವಾಗಿ ಪರಿಶೀಲಿಸಿ, ಈ ಒಂದು ಅನುಭವದ ಹಿನ್ನೆಲೆಯಲ್ಲಿ ಅದಕ್ಕೆ ಏನು ತಿದ್ದುಪಡಿ ತರಬೇಕೋ ಅದನ್ನು ತರಬೇಕು. ಈ ರೀತಿಯಾಗಿ ಸಮಗ್ರವಾದ ಒಂದು ತಿದ್ದುಪಡಿಯನ್ನು ತಂದರೆ ಇದು ೪–೫ ವರ್ಷಕ್ಕೊಮ್ಮೆ ಒಂದು ಬಾರಿ ಎಂದರೆ ಅದರಲ್ಲಿ ಹೆಚ್ಚು ಅರ್ಥವಿದೆ, ಅದು ಸಾರ್ಥಕವಾಗುತ್ತದೆ. ಅದು ಬಿಟ್ಟು ದಿನ ಬೆಳಗಾದರೆ ಈ ತರಹ ತಿದ್ದುಪಡಿ ತಂದರೆ ಅದಕ್ಕೆ ಇರುವ ಒರಿಜಿನೇಷನ್‌ನ್ನು ಕಳೆದುಕೊಳ್ಳುತ್ತದೆ. ಈ ಬಗ್ಗೆ ಯಾವ ಒಂದು ಅಧಿಕಾರ ಆ ಅಧಿಕಾರಿಗೆ ಇರುತ್ತದೆಯೋ ಅವನು ಸರಿಯಾಗಿ ಕೆಲಸ ಮಾಡಬೇಕು ಅವನು ಅದಕ್ಷತೆಯಿಂದ ಇದ್ದರೆ ಅವನು ಆ ಕೆಲಸ ಮಾಡಲು ಸಾಧ್ಯವೇ ಇಲ್ಲದೇ ಇದ್ದಾಗ ತಕ್ಷಣ ಈ ತರಹ ತಿದ್ದುಪಡಿ ಮಾಡುತ್ತಾರೆ ಇಂತಹ ತಿದ್ದುಪಡಿಯನ್ನು ಶ್ರೀಮಾನ್ ವಿ.ಎಲ್. ಪಾಟೀಲರು ತಂದಿದ್ದರೆ ಒಪ್ಪಬಹುದಾಗಿತ್ತು. ಈ ತರಹ ತಿದ್ದುಪಡಿಯನ್ನು ಶ್ರೀ ಎ. ಲಕ್ಷ್ಮೀಸಾಗರ್ ತಂದಿರುವುದರಿಂದ, ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದು ಶ್ರೀ ಆರ್. ವೆಂಕಟರಾಮಯ್ಯ ಅವರು ಹೇಳಿದರು. ಈ ತಿದ್ದುಪಡಿಗೆ ವಿ. ಎಲ್. ಪಾಟೀಲರು ರುಜು ಹಾಕಿದ್ದಾರೆ, ಆದರೆ ಅವರು ಇದನ್ನು ಮಂಡಿಸುವ ತನಕ ಅವರು ಇರಲಿಲ್ಲ. ಅದೇನೇ ಇರಲಿ, ಇದು ವಿ.ಎಲ್. ಪಾಟೀಲರ ಪ್ರಶ್ನೆ ಅಲ್ಲ, ಶ್ರೀ ಎ. ಲಕ್ಷ್ಮೀಸಾಗರ್ ಅವರ ಪ್ರಶ್ನೆ ಅಲ್ಲ, ಕೆ.ಹೆಚ್. ಶ್ರೀನಿವಾಸ್ ಅವರ ಪ್ರಶ್ನೆ ಅಲ್ಲ. ಈ ತಿದ್ದುಪಡಿಯಿಂದ ನಮಗೆ ಏನು ಚಿಂತನೆಯಾಗಿದೆ ಎಂದರೆ ಈ ತಿದ್ದುಪಡಿಯನ್ನು ಯಾವ ಉದ್ದೇಶಕ್ಕೆ ತಂದಿದ್ದೀರೋ ಆ ಬಗ್ಗೆ ಅಧಿಕಾರಿಗಳು ಸರಿಯಾಗಿ ಕೆಲಸ ನಿರ್ವಹಿಸಿದರೆ ಇದು ಯಶಸ್ವಿಯಾಗುತ್ತದೆ. ಅದು ಬಿಟ್ಟು ಆ ಅಧಿಕಾರಿಗಳ ತಲೆಯಲ್ಲಿ ಏನು ಹುಟ್ಟುತ್ತದೆಯೋ ಆಯಾಯ ಸಂದರ್ಭಕ್ಕನುಸಾರವಾಗಿ ಯಾವುದೋ ಒಂದು ಸಣ್ಣ ವಿಷಯಕ್ಕೆ ಇಂತಹ ಒಂದು ದೊಡ್ಡ ತಿದ್ದುಪಡಿಯನ್ನು ತರುವುದಕ್ಕೆ ಅದು ಸರಿಯೇ ಎನ್ನುವುದನ್ನು ಯೋಚಿಸಬೇಕಾಗಿದೆ. ಒಂದು ಕಾನೂನನ್ನು ತಮಗೆ ಬೇಕಾದ ಹಾಗೆ ದೊಡ್ಡದು ಮಾಡಿ, ಉದ್ದ ಅಗಲ ಮಾಡಿ, ಅಥವಾ ವಿಸ್ತರಣೆ ಮಾಡಿಕೊಂಡು ಹೋದರೆ, ನೀವು ಯಾವ ರೀತಿಯಾಗಿ ಮಾಡುತ್ತೀರಿ ಅದೇ ರೀತಿಯಾಗಿ ಅದು ಉದ್ದ ಆಗಲಿ ದೊಡ್ಡದಾಗುತ್ತದೆಯೇ ವಿನಹ ಇದರಿಂದ ನಿಮ್ಮ ಆಡಳಿತ ಸುಧಾರಿಸುವುದಾಗಲಿ ಅಥವಾ ನಿಮ್ಮ ಸಮಸ್ಯೆ ಬಗೆಹರಿಯುವುದಾಗಲಿ ತಪ್ಪುತ್ತದೆಯೇ? ಇದನ್ನು ತಾವು ವಿಚಾರ ಮಾಡಬೇಕು. ಕಾನೂನು ಜಾಸ್ತಿ ಮಾಡಿಕೊಳ್ಳಬಹುದು. ಅದರಿಂದ ಆಡಳಿತ ಸುಧಾರಿಸುತ್ತದೆಯೇ? ನಾವು ನೋಡಿದ ಹಾಗೆ ಇವೊತ್ತಿನವರೆಗೆ ತಂದಿರತಕ್ಕಂಥ ಯಾವುದೇ ತಿದ್ದುಪಡಿಯಾಗಲಿ ಅದರಿಂದ ಯಾವ ಆಡಳಿತವನ್ನೂ ಕೂಡ ಯಶಸ್ವಿಯಾಗಿರುವುದು ನಾವು ಕಂಡಿಲ್ಲ. ಯಾವುದನ್ನೂ ಸಹ ಸುಧಾರಿಸುವುದಕ್ಕೆ ಆಗಿಲ್ಲ. ಅದಕ್ಕೆ ತದ್ವಿರುದ್ಧವಾದಂಥ ಕೆಲಸ ಆಗಿದೆ. ಅದಕ್ಕೆ ಬೇಕಾದ ಉತ್ತೇಜನವನ್ನು, ಸಲಕರಣೆಗಳನ್ನು ಮಾಡುವುದಕ್ಕೆ ಈ ತಿದ್ದುಪಡಿಯನ್ನು ತರಲಾಗುತ್ತಿದೆ ಎಂದು ತಿಳಿದುಕೊಳ್ಳಬೇಕಾಗಿದೆ. ಇದರಿಂದ ಪ್ರಯೋಜನ ಏನೂ ಆಗಿಲ್ಲ. ಈ ಕಾನೂನಿನಲ್ಲಿ ನಿಮಗೆ ತೊಂದರೆ ಇದೆ ಎಂದು ಕಂಡುಬರುವ ಹೊತ್ತಿಗೇ ಇದರಲ್ಲಿ ನೀವು ೨೮೮ ಎ, ಬಿ, ಸಿ, ಡಿ ಯವರೆಗೂ ಹಾಕಿಕೊಂಡು ಹೋಗಿದ್ದೀರಿ. ಮುಂದೆ ಇದು ಇ. ಎಫ್. ಜಿ. ಹೆಚ್. ಐ. ಜೆ. ಕೆ. ಎಲ್. ಎಂ. ಎನ್

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವರೆಗೂ ಹೋಗುತ್ತದೆ. ಈಗ ಇದರಲ್ಲಿ ರೈಲ್, ಪೋಸ್ಟ್, ಸ್ಟೆಪ್ ಬೂತ್ ಸೇರಿಸಿದ್ದೀರಿ. ಮತ್ತೆ ಇದರಲ್ಲಿ ಅದರ್‌ಸ್ಟ್ರಕ್ಚರ್ಸ್ ಅಂತ ಕೊಟ್ಟಿರುವುದರಿಂದ ಮುಂದೆ ಇದು ಜಡ್ ತನಕವೂ ಹೋಗಬಹುದು. ಒಬ್ಬೊಬ್ಬರಿಗೆ ಈ ಕಾನೂನಿನಲ್ಲಿ ಏನೇನು ತೊಂದರೆ ಬರುತ್ತದೆ, ಅದಕ್ಕೆ ಬೇಕಾದಂಥ ಕಾನೂನನ್ನು ಜೋಡಿಸಿಕೊಂಡು ಹೋಗುವ ಪ್ರವೃತ್ತಿ ಇದೆ. ಇದಕ್ಕೆಲ್ಲಾ ತಾವು ಪರ್ಮಿಷನ್ ಕೊಡುವುದಾದರೆ ಎಲ್ಲಿ ಬೇಕೋ ಅಲ್ಲಿ ಜನರು ಶಾಪ ಹಾಕುತ್ತಾರೆ. ರಸ್ತೆ ಮೇಲೆ ಅಂಗಡಿ ಹಾಕುವುದಕ್ಕೆ, ಬೇಲಿ ಮುಂತಾದವು ಹಾಕುವುದಕ್ಕೆ ಇದುವರೆವಿಗೂ ಯಾರಿಂದಲೂ ಕೂಡ ಪರ್ಮಿಷನ್ ತೆಗೆದುಕೊಂಡ ಹಾಗೆ ಕಾಣಲಿಲ್ಲ. ನೀವು ಇದಕ್ಕೆ ಪರ್ಮಿಷನ್ ತೆಗೆದುಕೊಳ್ಳಬೇಕು ಎಂದರೆ ಇದರಿಂದ ಆಡಳಿತ ಸುಧಾರಣೆಯಾಗುತ್ತದೆಯೇ ? ಇದನ್ನು ತಾವು ಯೋಚನೆ ಮಾಡಬೇಕಾಗಿದೆ. ಇದನ್ನೆಲ್ಲಾ ಆಡಳಿತಾತ್ಮಕವಾಗಿ ಅಧಿಕಾರ ನಡೆಸತಕ್ಕಂಥವರು ಎದುರಿಸಬೇಕೇ ವಿನಹ ತೇಪೆ ಹಾಕತಕ್ಕಂಥ ಕೆಲಸ ಮಾಡಬಾರದು. ತಿದ್ದುಪಡಿಯನ್ನು ಯಾವಾಗ ತರುತ್ತಾರೆಂದರೆ ನಾನು ಮೊದಲೇ ಹೇಳಿದ ಹಾಗೆ ಕಾನೂನಿನ ಪ್ರಕಾರ ಕೆಲವು ಆಡಳಿತಾತ್ಮಕವಾದ ವಿಷಯಗಳನ್ನು ಎದುರಿಸುವುದಕ್ಕೆ ಸಾಧ್ಯವಿಲ್ಲದೇ ಇದ್ದಾಗ ಈ ರೀತಿಯಾಗಿ ಕಾನೂನಿಗೆ ಜೋಡಣೆ ಮಾಡಿ ಮಾಡುತ್ತಾರೆ. ಅವರಿಗೆ ಪರ್ಮಿಷನ್ ಕೊಡಬೇಕಾದರೆ ಯಾವುದಕ್ಕೆ ಅವರಿಗೆ ಅಧಿಕಾರ ಕೊಡಬೇಕು, ಯಾವುದಕ್ಕೆ ಅಧಿಕಾರ ಕೊಡಬಾರದು ಎನ್ನುವುದನ್ನು ಯೋಚನೆ ಮಾಡಬೇಕು. ರೈಲ್, ಪೋಸ್ಟ್ ಸ್ಟೆಪ್‌ಬೂತ್ ಇತ್ಯಾದಿ ಇದಕ್ಕೆಲ್ಲಾ ಪರ್ಮಿಷನ್ ತೆಗೆದುಕೊಳ್ಳಬೇಕು ಎಂದರೆ by this amendment you are empowering the Commissioner to do patently illegal and undesirable act ಎಂದು ಹೇಳಬೇಕಾಗುತ್ತದೆ. ಈಗ ಇದರಲ್ಲಿ ತಿದ್ದುಪಡಿ ೨೫೮ ಎ, ಬಿ, ಸಿ, ಡಿ, ವರೆಗೂ ಹೋಗಿದೆ. ಆಡಳಿತಾತ್ಮಕವಾಗಿ ಎದುರಿಸಬೇಕಾದಂಥಾದ್ದನ್ನೆಲ್ಲಾ ಈ ರೀತಿಯಾಗಿ ಜೋಡಣೆ ಮಾಡಿಕೊಂಡು ಹೋಗಿದ್ದೀರಿ. ಇದನ್ನು ಒಂದು ದೊಡ್ಡ ಕಾನೂನಿನಂತೆ ಮಾಡಿ. ಒಂದು ದೊಡ್ಡ ಸಮಸ್ಯೆಯನ್ನಾಗಿ ಮಾಡಿ ಅವನಿಗೆ ಇಲ್ಲದೇ ಇರುವ ಅಧಿಕಾರ ಕೊಟ್ಟು, ಅದಕ್ಕೆ ಇಲ್ಲದೇ ಇರುವ ಕಾನೂನು ಭಾರ ಹಾಕಿದ್ದೀರಿ. ಅವನು ಈ ಎಲ್ಲಾ ಸೆಕ್ಷನ್ ಅನ್ನೂ ಹುಡುಕುವುದರೊಳಗೆ ಅವನ ಮಹುಸ್ಸು ಕಡಿಮೆಯಾಗುತ್ತದೆ, ಅವರಿಗೆ ಇರುವ ಶಕ್ತಿ ಸಾಮರ್ಥ್ಯಗಳು ಕಡಿಮೆಯಾಗುತ್ತವೆ. ಪ್ರತಿಯೊಂದಕ್ಕೂ ಅವನು ಕಾನೂನು, ರೂಲ್ಸ್ ಹುಡುಕಿಕೊಂಡು ಹೋಗಬೇಕು. ಅದಕ್ಕಾಗಿ ನಿಮ್ಮ ಆಡಳಿತ ಹದಗೆಟ್ಟಿದೆ. ಕಾನೂನು ರೂಲ್ ಹುಡುಕಿಕೊಂಡು ಆ ಅಧಿಕಾರಿ ಕೆಲಸ ಮಾಡಬೇಕು. ನಿಮ್ಮ ಆಡಳಿತ ಹೇಗೆ ಇದೆ ಎಂದರೆ ಕಾನೂನನ್ನು ದಪ್ಪವಾಗಿ ತಟ್ಟಿದರೆ ರೊಟ್ಟಿಯಾಗುತ್ತದೆ, ತೆಳ್ಳಗೆ ಹಾಕಿದರೆ ದೋಸೆಯಾಗುತ್ತದೆ. ಇದನ್ನು ಲೆಕ್ಕ ಹಾಕುವುದಕ್ಕೆ ಹೋದರೆ ನೀವು ಮಾಡತಕ್ಕಂಥ ಒಂದೊಂದು ಕಾನೂನು ತದ್ವಿರುದ್ಧವಾಗಿ ಅದರ ಪರಿಣಾಮ ಎಲ್ಲೋ ಹೋಗಿರುತ್ತದೆ. ಅದಕ್ಕೆ ನಾನು ಹೇಳುತ್ತೇನೆ. ಆಡಳಿತಾತ್ಮಕವಾಗಿ ಇರತಕ್ಕಂಥಾದ್ದನ್ನು ಎದುರಿಸುವುದಕ್ಕೆ ಕಾನೂನಿನ ಕವಚವನ್ನು ತೋರಿಸಿ ತೊಡಿಸುವುದಕ್ಕೆ ಹೋದರೆ ಅದರಿಂದ ಆಡಳಿತದಲ್ಲಿ ಹೆಚ್ಚು ಸುಧಾರಣೆಯಾಗುವುದಿಲ್ಲ. ನಾನು ಹೇಳುತ್ತೇನೆ. ಇದರಿಂದ ಈಗಿರುವ ಅದ್ವಾನಕ್ಕಿಂತ ಮುಂದೆ ಇನ್ನೂ ಹೆಚ್ಚು ಅದ್ವಾನವಾಗುತ್ತದೆ. ಆಂಗ್ಲ ಭಾಷೆಯಲ್ಲಿ Confusion much more confounded ಎಂದು ಏನು ಹೇಳುತ್ತಾರೆ ಆ ಕೆಲಸ ಇದರಿಂದ ಆಗುತ್ತದೆ. ರಸ್ತೆಯ ಮೇಲೆ ಯಾರಾದರೂ ಅಂಗಡಿ ಹಾಕುವುದಕ್ಕೆ ಇನ್ನು ಮೇಲೆ ಕಮಿಷನ್ ಪರ್ಮಿಷನ್ ತೆಗೆದುಕೊಂಡು ಹಾಕಬಹುದು. ಇದಕ್ಕೆ ಬೇಕಾದಂಥ ಅನುಮತಿ ಕೊಟ್ಟಂತೆ ಆಗುತ್ತದೆ ಇದರಿಂದ ಸಾರ್ಥಕತೆ ಆಗುವುದಿಲ್ಲ. ಮಾನ್ಯ ಸ್ನೇಹಿತರು ಹೇಳಿದಹಾಗೆ ಮುಖ್ಯವಾಗಿ ಇದು ಬಡ ಜನರ ವಿರುದ್ಧ ಪ್ರಯೋಗವಾಗುತ್ತದೆ. ಅವರು ಹೇಳಿದ ಹಾಗೆ, ಕಾನೂನಿನ ಭಾರ ಎಷ್ಟೆಷ್ಟು ಜಾಸ್ತಿಯಾಗುತ್ತದೆಯೋ ಅಷ್ಟಷ್ಟು ಮಾಮೂಲಿಯ ಪ್ರಮಾಣ ದ್ವಿಗುಣ, ತ್ರಿಗುಣವಾಗುತ್ತಾ ಹೋಗುತ್ತದೆ. ನೂರು ಕೊಡಬೇಕಾದ ಜಾಗದಲ್ಲಿ ಇನ್ನೂರು ಕೊಡಬೇಕಾಗುತ್ತದೆ. ಇವೊತ್ತಿನ ದಿವಸ ಜೀವನವನ್ನು ನಾವು ತಡೆಯುವುದಕ್ಕೆ ಸಾಧ್ಯವಿಲ್ಲ, ಮನುಷ್ಯ ಬದುಕಬೇಕು. ದೇಶದಲ್ಲಿ ತಕ್ಕ ಎಲ್ಲಾ ಜನಗಳಿಗೂ ಸುಸಂಬದ್ಧವಾದ ರೀತಿಯಲ್ಲಿ ಜೀವನ ಮಾರ್ಗವನ್ನು ಕಲ್ಪಿಸಿಲ್ಲ. ಹಲವಾರು ಜನ ಹಲವಾರು ರೀತಿಯಲ್ಲಿ ಬದುಕುವ ಪ್ರಯತ್ನ ಮಾಡುತ್ತಾರೆ. ಫುಟ್‌ಬಾತ್‌ನಲ್ಲಿ ಪದಾರ್ಥಗಳನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಿ ೧೦–೧೫ ರೂಪಾಯಿಗಳನ್ನು ದುಡಿದು ಹೆಂಡತಿ ಮಕ್ಕಳನ್ನು ಸಾಕುವ ಪ್ರಯತ್ನ ಮಾಡುತ್ತಾರೆ, ಇದನ್ನು ಹೇಗೆ ತಡೆಯುವುದು? ಮನುಷ್ಯತ್ವ ದೃಷ್ಟಿಯಿಂದ ಮಾನವೀಯತೆಯ, ದೃಷ್ಟಿಯಿಂದ ಈ ವಿಚಾರಗಳನ್ನು ನೋಡಲೇಬೇಕಾಗುತ್ತದೆ. ರಸ್ತೆ ಮೇಲೆ ಮಾರಾಟ ಮಾಡುವುದು ನ್ಯೂಸೆನ್ಸ್ ಎಂದು ನಮಗನ್ನಿಸುತ್ತದೆ. ಆದರೆ ದೇಶದಲ್ಲಿ ಬಡತನ ಇದೆ, ಬಡವರಿದ್ದಾರೆ. ಅವರನ್ನು ನಮ್ಮಂತೆ ಮನುಷ್ಯರು ಎಂದು ನಾವು ನೋಡಲೇಬೇಕಾಗುತ್ತದೆ. ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆ. ಹಾಗಾದರೆ ಅವರು ಕಳ್ಳರೋ, ಲೂಟಿಕೋರರೋ ಆಗಬೇಕೆ. ? ಫುಟ್‌ಬಾತ್‌ನಲ್ಲಿ ಸಾಮಾನುಗಳನ್ನು ತೆಗೆದು

ಕೊಂಡು ಹೋಗಿ ಮಾರಾಟ ಮಾಡಿ ಜೀವನ ಮಾಡತಕ್ಕಂಥಾವರನ್ನು ಒದ್ದು ಹೊರೆ ಹಾಕಿದರೆ ನಾಳೆ ಅವರು ಸಮಾಜ ಕಂಟಕರಾಗಿ ಬದುಕಬೇಕಾದ ಪರಿಸ್ಥಿತಿ ಬರುತ್ತದೆ. ಈಗ ಈ ರೀತಿ ಮಾಡಿದರೆ ಇದು ಇನ್ನಷ್ಟು ಜಾಸ್ತಿಯಾಗುತ್ತದೆಯೇ ಹೊರೆತು ಸಮಸ್ಯೆ ಬಗೆ ಹರಿಯುವುದಿಲ್ಲ, ಇದನ್ನು ತಾವು ಉದಾರ ವಾಗಿ ನೋಡಬೇಕಾಗುತ್ತದೆ. ಸಣ್ಣ ಪುಟ್ಟ ಜನರು ತಮ್ಮ ಜೀವನವನ್ನು ರೂಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಅದಕ್ಕೆ ಪರ್ಯಾಯವಾದಂಥ ವ್ಯವಸ್ಥೆ ಮಾಡಿಕೊಟ್ಟು ಆಮೇಲೆ ಗಧಾಪ್ರಹಾರ ಮಾಡಬೇಕೇ ಹೊರೆತು ಈ ರೀತಿ ಮಾಡಬಾರದು. ನಾನು ನೋಡಿದ್ದೇನೆ ಬಡಜನರು ರಸ್ತೆಯಲ್ಲಿ ಬಟ್ಟೆ, ಟೊಮ್ಯಾಟೊ, ತರಕಾರಿ ಇನ್ನಿತರ ಸಾಮಾನುಗಳನ್ನು ಇಟ್ಟುಕೊಂಡಿದ್ದರೆ ಅದನ್ನೆಲ್ಲಾ ಚೆಲ್ಲಿಬಿಟ್ಟು ಬೀದಿಗೆ ಎಸೆದು ಅವರಿಗೆ ತೊಂದರೆ ಮಾಡುವುದರಿಂದ ಆ ಜನರ ಸಮಸ್ಯೆ ಬಗೆ ಹರಿಯುವುದಕ್ಕೆ ಸಾಧ್ಯವಿಲ್ಲ. ಇಂತಹ ವಿಷಯಕ್ಕೆ ಸರ್ಕಾರಕ್ಕೆ ಹೇಳ ಬಯಸುತ್ತೇನೆ. ತಾವು ಇದರಲ್ಲಿ ಅನೇಕ ವಿಷಯಗಳನ್ನು ತಂದಿದ್ದೀರಿ. ಕೋರ್ಟಿಗೆ ಹೋಗಕೂಡದು, ಇಂಟರಿಂ ರಿಲೀಫ್ ಕೊಡಬಾರದು ಎಂದರೆ ಯಾವ ನ್ಯಾಯ, ಇದು ಸರಿಯಾದ ಸಂಪ್ರದಾಯ ಅಲ್ಲ. ಕಾನೂನು ಪ್ರಕಾರ ತನ್ನ ಸಂಪಾದನೆ ಮಾಡುವ ಸಂದರ್ಭ ಇದ್ದರೆ ಅದನ್ನು ಕಾನೂನು ಮೂಲಕ ಮೊಟಕು ಮಾಡತಕ್ಕ ಪ್ರಯತ್ನ ಮಾಡಬಾರದು. ವೆಸ್ಟೆಡ್ ಇಂಟರೆಸ್ಟ್ ಏನಿದೆ ಅದರ ವಿರುದ ಕಾರ್ಯ ಮಾಡಬೇಕಾದ ಸಂದರ್ಭ ಇದ್ದಾಗ ವಿಶೇಷ ವಿಧಾನಗಳನ್ನು ಬಳಸಬಹುದು, ಆದರೆ ಕೋರ್ಟಿಗೆ ಹೋಗ ಲೇಬಾರದು, ರಿಲೀಫೇ ಕೊಡಬಾರದು ಎಂದು ಹೇಳಿದರೆ ಇದು ಸಮರ್ಪಕವಾದ ವಿಚಾರದಾರೆಯಾಗು ವುದಿಲ್ಲ. ಸೆಕ್ಷನ್ ೩೧೧ರಲ್ಲಿ ಹೇಳಿದ್ದೀರಿ. ಒಂದು ಕಟ್ಟಡ ಒಂದು ಮಹಡಿಗಿಂತ ಜಾಸ್ತಿ ಇದ್ದರೆ ಕರೆದು ಇನ್ಸ್‌ಪೆಕ್ಷನ್ ಮಾಡಿಸಬೇಕು ಎಂದು ಮುಂತಾಗಿ ಇದೆ. ಏಕೆ ಸ್ವಾಮಿ ಹೀಗೆಲ್ಲಾ ಉದ್ದುದ್ದಕ್ಕೆ ಕಾನೂನು ಬರೆಯಬೇಕು. ಕಾರ್ಪೋರೇಷನ್ ಕಮೀಷನರ್ ಎಂದರೆ ಆ ಕಾನೂನು ಜಾರಿ ಮಾಡ ತಕ್ಕಂಥ ಅಧಿಕಾರ ಅವರಿಗೆ ಇದೆ. ಬರೀ ಕಾನೂನು ರೂಲ್ಸ್ ಅಷ್ಟೇ ಹೇಳದೇ ಮನುಷ್ಯತ್ವದ ದೃಷ್ಟಿ ಯಿಂದ, ಮನುಷ್ಯನನ್ನು ನಂಬಿ ಆಡಳಿತ ಮಾಡುವುದಕ್ಕೆ ಅವಕಾಶ ಮಾಡತಕ್ಕಂಥ ಹೊಸ ಸಂಪ್ರದಾ ಯವನ್ನು ತಾವು ಜಾರಿಗೆ ತರಬೇಕು. ಮಾನ್ಯ ಮುಖ್ಯ ಮಂತ್ರಿಗಳು ಆಡಳಿತ ಸುಧಾರಣೆ ಮಾಡು ತ್ತೇನೆ. ಎಂದು ಹೇಳಿದರು. ಇವೊತ್ತಿನವರೆಗೆ ಆಡಳಿತ ಸುಧಾರಣೆಗೆ ಹೋಗಬೇಕಾದಂಥ ಯಾವ ಒಂದು ಮೂಲಭೂತ ನಿಲುವನ್ನು ಸರ್ಕಾರ ತೆಗೆದುಕೊಂಡಿರುವುದನ್ನು ನಾನು ಕಾಣಲಿಲ್ಲ. ಕಮಿಷನ ರಾಗಲಿ, ಹೈಯೆಸ್ಟ್ ಅಥಾರಿಟಿಯಾಗಲಿ, ತಹಶೀಲ್ದಾರ್ ಆಗಲಿ ಯಾರೇ ಆಗಲಿ ತಮ್ಮ ಜವಾಬ್ದಾರಿ ಯನ್ನು ಇನ್ನೊಬ್ಬರ ಮೇಲೆ ಹಾಕುವುದು, ತನ್ನದು ಎಷ್ಟೋ ಅಷ್ಟು ನೋಡಿಕೊಳ್ಳುವುದು ಏನಿದೆ ಈ ವ್ಯವಸ್ಥೆಯನ್ನು ಬದಲಾಯಿಸುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಿದೆಯೇ ? ಇದಕ್ಕೆ ಬೇಕಾದಂಥ ಮೂಲಭೂತವಾದ ತಿದ್ದುಪಡಿಗಳನ್ನು ತಂದರೆ ಸ್ವಾಗತಿಸಬಹುದು. ಇರುವ ಪರಿಸ್ಥಿತಿಯನ್ನು ಅದ್ವಾನ ಮಾಡತಕ್ಕದು ಅಗತ್ಯವಿಲ್ಲ. ಇನ್ನು ಅಸೆಂಬ್ಲಿ ಮೆಂಬರ್ಸ್ ಈ ಸಂಸ್ಥೆಗಳಲ್ಲಿ ಕುಳಿತುಕೊಂಡು ಕೆಲಸಮಾಡತಕ್ಕ ಅವಕಾಶ. ಮಾನ್ಯ ಉಪಾಧ್ಯಕ್ಷರೆ, ಸಿಐಟಿಬಿ, ಇದೆ, ಪ್ಲಾನಿಂಗ್ ಅಥಾರಿಟಿ ಇದೆ, ಈ ರೀತಿ ನಾವು ಅಲ್ಲಿ ಕುಳಿತುಕೊಂಡು ಭಾಗವಹಿಸಬೇಕು ಎನ್ನುವುದರಿಂದ ಏನೂ ಪ್ರಯೋಜನವಿಲ್ಲ. ಶಿವಮೊಗ್ಗ ಮುನಿಸಿಪಾಲಿಟಿ ಇದೆ, ನಾನು ಕುಳಿತು ನೋಡಿದೆ ಅವರು ಏನು ಮಾಡುತ್ತಾರೆಂದು ನನಗೆ ಅರ್ಥವಾಗಲಿಲ್ಲ. ಅಲ್ಲಿ ಕಿತ್ತಾಟ ಆಗುವುದರಿಂದ ಎಷ್ಟೋ ತೀರ್ಮಾನಗಳು ಆಗುತ್ತಾ ಇಲ್ಲ. ಎಲ್ಲಾ ಬೇರೆ ಕಡೆ ಮಾಡಿಕೊಂಡುಬಿಟ್ಟು ಅಲ್ಲಿ ಸ್ವಲ್ಪ ಹೇಳಿ ಎದ್ದು ಹೋಗುತ್ತಾರೆ. ಎಂ.ಎಲ್.ಎ. ಹೇಳಿದರು ಅದಕ್ಕೋಸ್ಕರ ಮಾಡಿದೆ ಎಂದು ಹೇಳತಕ್ಕ ಸಂದರ್ಭ ಇದೆ. ಮಾನ್ಯ ಕೆ.ಹೆಚ್.ಪಾಟೀಲ್‌ರು ನಾವು ಅಲ್ಲಿ ಕುಳಿತುಕೊಳ್ಳುವುದು ಸರಿಯಲ್ಲ ಎಂದು ಹೇಳಿದರು ಇದರ ಬಗ್ಗೆ ನಾವು ಯೋಚನೆ ಮಾಡ ಬೇಕು, ಶಾಸಕರು ಎಲ್ಲಾ ಬಾಡಿಗಳಲ್ಲಿ ಕುಳಿತು ಬರುವುದರಿಂದ ಉದ್ದೇಶ ಸಾರ್ಥಕವಾಗುತ್ತದೆಯೇ ಎಂದು ನೋಡಿದರೆ ಏನೂ ಸಾರ್ಥಕತೆ ಇಲ್ಲ. ಇನ್ನು ನಾನು ಹೆಚ್ಚು ಈ ವಿಷಯದಲ್ಲಿ ಲಭಿಸುವುದಕ್ಕೆ ಇಷ್ಟಪಡುವುದಿಲ್ಲ. ಈ ಒಂದು ತಿದ್ದುಪಡಿ ವಿಧೇಯಕದಿಂದ ಯಾವುದೂ ಮೂರು ಕಾಸಿನ ಪ್ರಯೋಜನ ಕೂಡ ಇಲ್ಲ. ಸುಮ್ಮನೆ ತಿದ್ದುಪಡಿ ತರತಕ್ಕಂಥ ಚಟ. ಯಾರೋ ಕೆಲವು ಅಧಿಕಾರಿಗಳಿಗೆ ತಮಗೆ ಏನು ಅಧಿಕಾರ ಇದೆ ಎಂದು ಗೊತ್ತಿಲ್ಲದೆ ಈಗಿರುವ ಕಾನೂನನ್ನು ಪೂರ್ತಿ ಓದದೇ, ಮತ್ತೆ ಮಾಡ ಬೇಕು, ಇನ್ನೊಂದು ಸೆಕ್ಷನ್ ಬೇಕು, ಇನ್ನೊಂದು ತಿದ್ದುಪಡಿ ಬೇಕು ಎಂದು ಹೇಳುವುದು, ನಾವು ಅದನ್ನು ಮಕ್ಕಿಕಾಮಕ್ಕಿ ವಿಧಾನಸಭೆಯಲ್ಲಿ ತಂದು ಪಾಸ್ ಮಾಡುವುದು, ಇದರಿಂದ ಯಾವ ಪ್ರಯೋ ಜನವಿಲ್ಲ. ಅದರ ಬದಲು ವಿಧಾನಸಭೆಯಲ್ಲಿ ಎರಡು ದಿವಸ ಚರ್ಚೆಗೆ ಇಡಿ. ಕಾರ್ಪೋರೇಷನ್‌ನಲ್ಲಿ ಈಗಿರುವ ಪರಿಸ್ಥಿತಿ ಏನು ? ದೌರ್ಬಲ್ಯಗಳೇನು, ಆಡಳಿತ ಸುಧಾರಣೆ ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ಎರಡು ದಿವಸ ಇಟ್ಟು ಚರ್ಚೆಮಾಡಿ ಅದರ ಆಧಾರದ ಮೇಲೆ ತಿದ್ದುಪಡಿ ಮಾಡಿಸುವುದಾದರೆ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಸಿದ್ಧರಿದ್ದೇವೆ. ಇವೊತ್ತು ಸಮಸ್ಯೆಗಳೇನಿವೆ, ಸಮಸ್ಯೆಗಳು ಹೇಗೆ ಬೆಳೆಯುತ್ತಿವೆ, ಅವನ್ನು ಹೇಗೆಎದುರಿಸಬೇಕು, ಎದುರಿಸುವುದರಲ್ಲಿ ಏಕೆ ವಿಫಲರಾಗಿದ್ದಾರೆ ಎನ್ನುವ

ಚಿಂತನೆಯಿಲ್ಲದೆ ಬರೀ ತಿದ್ದುಪಡಿ ಮಾಡುತ್ತಾ ಹೋದರೆ ಅದರ ಸಾರ್ಥಕತೆ ಇರುವುದಿಲ್ಲ. ಆದುದರಿಂದ ಈ ತಿದ್ದುಪಡಿಯನ್ನು ವಾಪಸ್ ಪಡೆದು ಕಾರ್ಪೊರೇಷನ್, ಮುನಿಸಿಪಾಲಿಟಿಗಳಲ್ಲಿ ಆಡಳಿತ ಸುಧಾರಲ್ಲಿ ಮಾಡಬೇಕು ಎನ್ನುವ ಅಭಿಲಾಷೆ ಇದ್ದರೆ ಒಂದು ಅರ್ಥಪೂರ್ಣ ಚರ್ಚೆಯಾಗಿ ವಿಧಾನಸಭೆಯಿಂದ ಪ್ರಾರಂಭ ಮಾಡಲಿ, ಅದರಲ್ಲಿ ನಾವೆಲ್ಲಾ ನಮ್ಮ ಅನುಭವಗಳನ್ನು ಹೇಳೋಣ. ಅದರ ಹಿನ್ನೆಲೆಯಲ್ಲಿ ಸಮಗ್ರ ತಿದ್ದುಪಡಿ ಮಸೂದೆಗೆ ಎರಕ ಹೊಯ್ದರೆ ಅದನ್ನು ಖಂಡಿತವಾಗಿ ಪಾಲಿಸಬಹುದು. ಇಷ್ಟು ಮಾತನ್ನು ಹೇಳಿ ಈ ತಿದ್ದುಪಡಿ ವಿಧೇಯಕಕ್ಕೆ ಸಂಪೂರ್ಣವಾದಂಥ ವಿರೋಧವನ್ನು ವ್ಯಕ್ತಪಡಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ.ಹೆಚ್. ಮೊಹಮದ್ ಗೌಸ್ ಹಿಂಡಸಗೇರಿ (ಹುಬ್ಬಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೇ, ಇವತ್ತಿನ ದಿವಸ ತಂದಿರತಕ್ಕ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ತಿದ್ದುಪಡಿ ವಿಧೇಯಕವನ್ನು ಸಂಪೂರ್ಣವಾಗಿ ವಿರೋಧಿಸಿ ನನ್ನ ನಾಲ್ಕು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗಾಗಲೇ ನಮ್ಮ ಪಕ್ಷದಿಂದ ಅನೇಕ ಹಿರಿಯ ಸದಸ್ಯರು ಮಾತನಾಡಿದ್ದಾರೆ. ನಾನು ವಿಶೇಷವಾಗಿ ಸೆಕ್ಷನ್ ೨೮೮ ಬಿ,ಸಿ,ಡಿ ಯಲ್ಲಿ ಏನು ತಿದ್ದುಪಡಿಯನ್ನು ತಂದಿದ್ದಾರೆ ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಸುಮಾರು ೧೨೦ ಪುಟದಷ್ಟು ಈ ಆ್ಯಕ್ಟ್ ಇದೆ. ಈಗಾಗಲೇ ಮಾನ್ಯ ಶ್ರೀನಿವಾಸ್‌ರವರು ಹೇಳಿದಂತೆ ಒಂದು ವಿಧವಾದ ಚಟದ ಮೇಲೆ ಈ ತಿದ್ದುಪಡಿಯನ್ನು ತರಲಾಗಿದೆ. ಶ್ರೀಮಾನ್ ಬಿ.ಎಲ್. ಪಾಟೀಲ್‌ರವರು ಈ ಖಾತೆಯನ್ನು ವಹಿಸಿಕೊಂಡ ನಂತರ ನಾನು ಏನೂ ಕೆಲಸವನ್ನು ಮಾಡಿಲ್ಲ ಎಂಬಂತಾಗಬಾರದೆಂದು ಈ ಮಹಾ—ನಗರ ಸಭೆಯ ಒಂದು ತಿದ್ದುಪಡಿ ಬಿಲ್ ಅನ್ನು ತಂದಿದ್ದಾರೆಂದು ನಾನು ತಿಳಿದುಕೊಳ್ಳುತ್ತೇನೆ. ೨೮೮ ಬಿ ಪ್ರಕಾರ ಕಮಿಷನ್ ರವರಿಗೆ ಕೆಲವು ವಿಚಾರಗಳಲ್ಲಿ ಅಧಿಕಾರ ಕೊಟ್ಟಿದೆ, ಎಲ್ಲಿಯಾದರೂ ಎನ್‌ಕ್ರೋಚ್‌ಮೆಂಟ್ ಇದ್ದರೆ ನೋಟೀಸ್ ಕೊಡದೇ ಇದ್ದರೆ ನ್ಯಾಚುರಲ್ ಜಸ್ಟೀಸ್‌ಗೆ ವಿರುದ್ಧವಾಗುತ್ತದೆ. ಎನ್‌ಕ್ರೋಚ್‌ಮೆಂಟ್ ಹೇಗೆ ಆಗುತ್ತದೆ ಎಂಬುದು ನಮಗೆ ಗೊತ್ತಿರುವ ಸಂಗತಿ. ರೆವಿನ್ಯೂ ಸರ್‌ಪ್ಲಸ್ ಅರ್ಬನ್ ಲ್ಯಾಂಡ್ ಎಷ್ಟು ಇದೆ? ೩-೪ ವರ್ಷದಿಂದ ಸಣ್ಣ ಸಣ್ಣ ಮನೆ ಕಟ್ಟಲಿಕ್ಕೆ ಒಂದು ಪ್ಲಾಟ್ ಸಹ ಕಾರ್ಪೊರೇಷನ್‌ನಿಂದ ಅಕ್ವೈರ್ ಮಾಡಿ ಕೊಟ್ಟಿಲ್ಲ. ಜನರು ಈಗಾಗಲೇ ಎಲ್ಲೆಲ್ಲಿ ಜಾಗ ಸಿಕ್ಕುತ್ತದೆ ಅಲ್ಲಿ ಪರ್ಮಿಷನ್ ತೆಗೆದುಕೊಂಡು ಹೋಗುತ್ತಿದ್ದಾರೆ. ಅವರು ಕೋರ್ಟಿಗೆ ಸಹ ಹೋಗಬಾರದು ಅಲ್ಲೂ ಸಹ ಇಂಟೀರಿಯಂ ರಿಲೀಫ್ ಸಿಕ್ಕಬಾರದೆಂದು ಇದರಲ್ಲಿ ಮಾಡಿದ್ದಾರೆ. ಮನೆಗಳನ್ನು ಕಟ್ಟಿಸಲಿಕ್ಕೆ ಅವಕಾಶ ಕೊಟ್ಟು, ಮತ್ತೆ ನಾಲ್ಕೈದು ವರ್ಷಗಳ ನಂತರ ನೋಟೀಸ್ ಕೊಡದೇ ತೆಗೆದರೆ ಅದು ಅನ್ಯಾಯವಾಗುತ್ತದೆಂದು ತಮ್ಮ ಮುಖಾಂತರ ಮಾನ್ಯ ಲಕ್ಷ್ಮೀಸಾಗರ್‌ರವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಂತಹ ಅವಕಾಶವನ್ನು ಮಾಡಿ ಕೊಡಬಾರದು. ಈ ಎರಡು ಮೂರು ವರ್ಷದಲ್ಲಿ ನಗರಸಭೆಯ ಆರ್ಥಿಕ ಪರಿಸ್ಥಿತಿ ಮತ್ತು ಅಲ್ಲಿ ಅವರು ಏನು ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಯಲ್ಲಿ ಸಿಬ್ಬಂದಿ ವರ್ಗ ಒಂದು ರೋಡ್ ಮಾಡುವುದಕ್ಕೆ ತಯಾರಿಲ್ಲ, ಲೈಟ್ ಹಾಕುವುದಕ್ಕೆ ತಯಾರಿಲ್ಲ. ಈ ವರ್ಷವಂತೂ ನೀರಿನ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಅಂತಹ ಕೆಲಸಗಳನ್ನು ಮಾಡಲಿಕ್ಕೆ ಆದೇಶ ಕೊಡುವುದನ್ನು ಬಿಟ್ಟು ೪-೧೦ ಮನೆಗಳನ್ನು ಬಡಬಗ್ಗರು ಕಟ್ಟಿದ್ದರೆ. ಅದನ್ನು ತೆಗೆಯುವುದಕ್ಕೆ ಅಧಿಕಾರ ಶಾಹಿಗೆ ಒಂದು ರೀತಿಯ ಇನ್‌ಸ್ಟ್ರುಮೆಂಟ್ ಕೊಡುವುದು ಸರಿಯಲ್ಲವೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಈ ಲೈಸೆನ್ಸ್ ಬಗ್ಗೆ ಕಮೀಷನ್‌ರವರಿಗೆ ಅವಕಾಶ ಕೊಟ್ಟಿದ್ದು ತಪ್ಪಾಗುತ್ತದೆ. ಒಂದು ಕಡೆ ಎನ್‌ಕ್ರೋಚ್‌ಮೆಂಟ್ ತೆಗೆಯಲಿಕ್ಕೆ ಅವರಿಗೆ ಅಧಿಕಾರ ಕೊಟ್ಟಿದ್ದೀರಿ ಮತ್ತೊಂದು ಕಡೆ ಎನ್‌ಕ್ರೋಚ್‌ಮೆಂಟ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೀರಿ. ಇದು ಹೇಗೆ ? ವಿಶೇಷವಾಗಿ ಈ ಎನ್‌ಕ್ರೋಚ್‌ಮೆಂಟ್ ಬಗ್ಗೆ ತಾವು ಗಮನಕೊಡಬೇಕು. ಮನೆ ಕಟ್ಟುವ ಮೊದಲೇ ಅವರನ್ನು ಕಂಟ್ರೋಲ್ ಮಾಡಬೇಕು, ಅವರು ಎಲ್ಲಾ ಕಟ್ಟಿಸಿದ ನಂತರ ಅಧಿಕಾರಿಗಳು ಎನ್‌ಕ್ರೋಚ್‌ಮೆಂಟ್ ಮಾಡಿದರೆ ತಪ್ಪಾಗುತ್ತದೆಂದು ಹೇಳಬಯಸುತ್ತಾ ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

† BLASUS M. D'SOUZA (Mangalore).—Mr. Speaker, Sir, I am sorry to find that unnecessary amendments have been brought into the Municipal Corporation. The Hon'ble Minister while introducing the Bill said that these are all the recommendations of the Mayors' Conference. Unfortunately, the Bill is more for the powers of the Commissioner than the Elected body. We should not forget that we should give more importance to the Elected body. A Corporation in a foreign country is more powerful, the Mayor having the power not only to look after the law and order, but also to look after all other kinds of activities within that area. But unfortunately despite 39 years of independence, we have been thinking that the Mayor is only a presiding deity. Why not we give more powers to the Mayor and the Elected body? Here we find that the grant of Rs. 10,000 has been increased to Rs. 25,000 just to show that there is something being done in this Municipal Bill to the Elected Body. At the same time, powers are being given to entrust the work from Rs. 5,000 to Rs. 10,000 to the Commissioner. As you know the Karnataka Municipalities Act empowers the Municipal President to entrust the work upto Rs. 5,000 without tenders. I would request the Hon'ble Minister to see that the Mayor should be given more powers. The Speakers who have spoken here so far. have said that there is already power to the Commissioner to remove the encroachments. He need not give notice to the encroachers. He can always remove the encroachments on the Municipal land. But, here, many sections have been added to give the same powers in a different wording. Unfortunately Sri A. Lakshmisagar, who is just looking after the Municipal Administration has no interest because the Karnataka Municipalities Bill whith has come before this house twice has been kept pending. The other day the Hon'ble Chief Minister was pleased to say that in the Bangalore City Corporation, no works have been carried out, there is lot of rubbish. Instead of curbing the curruption. we are giving a long rope to the Commissioner by extending the time from 30 days to 60 days to consider applications for building license. As you know many of the licenses required by very poor and middle class people. They take loan from the employers or from any of the Banks and by the time they get the licenses Monsoon starts and they are not able to construct the houses. A lot of money has to be spent to get the license. Instead of extending the time, it should be reduced to 15 days from 30 days. But here' the amendment is to have the time limit extended to 60 days from 30 days, Istead of cutting short the period' we are extending the

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

same. We say this is electronic age of computerisation. But here we are going back to the bullock age. I would request the Hon'ble Minister not to give a long rope to the commissioners to unnecessarily haras the public. Any Corporation Act should enable a poor man to get the amenities and the facilities which which are due to him from the Corporation. As regards Section 482, the Government has taken a blank Caveat from the Courts that any case which has been filed against the Corporation or the Corporation Officers, should only be tried after giving notice which goes against Article 14 of the Constitution, i.e., equality before law. We are giving a privilege to the Corporation. Even if there is a stay, why not the Corporation fight out if they have got good stand? Why should a poor man who is innocent, who has some enemies in the Corporation be penalised by giving powers to the Commissioner. I would not go to the other Sections. But I would only say that these amendments have been brought just for the sake of bringing amendments. I am really shocked to see that the Minister has brought this Bill which goes against the very principles of democracy. And many of the Speakers said that this goes against the poor people because the rich can always get things done The poor man as you know, specially in the City Corporation of Mangalore, there are hundreds of encroachers on Government land. People have spent life savings and tomorrow if the Commissioner feels that it is a nuisance and that the construction was not as per law, he could remove it and the poor people will suffer. I request the Hon. Minister to withdraw this Bill as he has already done in the case of Karnataka Municipalities Bill and see that any amendment that is brought in future should be to give more and more powers to elected body and not to the officers. Thank you.

† SMT. MUKTHARUNNISA (Narasimharaja).—Respected Chairman, I am very thankful to you for giving me an opportunity to speak a few words in connection with this amendment Bill, particularly amendment to Secion 288D, which I oppose because people suffer in Karnataka more on account of demolition of encroachments. It is wrong to empower the Corporation Commissioner to order of demolition of encroachments without prior notice. Every now and then the Commissioners are transferred. He will not have any attachment towards any particular place, towards any particular people. People who are staying for decades their houses and, their layouts were also not regularised. On one surprise night the Commissioner bulldozed 300 houses in Janata Nagar. 2000 other houses were also demolished and people were on the street and the people approached the concerned

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

MLA and again approached the higher authorities and the concerned Minister. They said that it was the order of our Hon. Chief Minister he said he did not know at all. Any how, he visited and he had sympathy and has ordered for regularisation after dharna was staged. He is also being. He cannot see anybody's tears. After demolition of the houses, huts he has ordered to check up the areas for regularisation. One small example. Without the permission, Committee's seal, serial number etc.. the Mayor of the Mysore Corporation has issued forms in each area. I brought it to the notice of our Hon. Chief Minister yesterday. He also accepted that it wrong. You may think that I am in Opposition and so I am speaking like that you may hate me. You can also ask Janatha MLAs, they are also there. The land is belonging to revenue and not to the Corporation. There are different types of land. Some are belonging to Corporation did some are for Revenue. You have given powers to the Corporation Commissioner with regard to the encroachments.

SRI RAMAKRISHNA HEGDE.—I hate no one, least of all the Hon. member.

SMT. MUKTHARUNNISA.—Thank you very much. The Corporators are elected by 500 to 1000 votes and an MLA is elected by 25,000 people and if the Chairman and even your party MLAs are members, if they are neglected means, how you will feel? That is my grievance. Lands are of different types. Land for TBs, housing, some are of revenues, some are of Corporation, some are of wakf. If you give this power only to the Corporation Commissioner, what is the fate of the other departments. If he uses this power almost all of the people will go to the higher authorities and they will give orders to regularise. Then what is the fate of the Commissioner? What will be the position of the Commissioner? So, I oppose this. Recently in Mysore itself, I do not know why it is happening in Mysore and in Chamundi Hills, where there are about hundred petty shops selling coconut. flowers and all pooja articles. They have taken loans from the money-lenders for daily payment. Tahsildar has demolished these shops. About 30 shops have been demolished. Immediately they have approached the concerned MLA and the concerned Minister, Mr. Siddaramaiah, he was also kind enough to request the Deputy Commissioner to keep those people there itself because they are petty shops dealing with Rs. 10 or Rs. 20 a day. I felt sorry for that. They were depending on selling pooja articles to tourists coming over there. Unfortunately it was demolished and they have lost things. They have to pay Rs. 5000 to Rs. 10,000 to moneylenders. We approached the Special DC, the Divisional Commissioner and we have brought it to your notice also for rehabilitating those people in the same place

because there is no other place. Upto now, no action has been taken. We have to see that the poor people should not suffer. Government has been kind enough to help the poor people, and weaker section. Janata Nagar houses were demolished and now it is regularised. Nothing has happened. So, first please rehabilitate those people to some other place and then you take action. I request that the word 'demolition' should be removed from the History of Karnataka. If you want to take action, please first rehabilitate the poor people. They are traditional petty shops. Once Commissioner has given order overnight it was removed and the whole public approached the Mayor, Commissioner and other higher authorities. So I oppose this bill and please withdraw this amendment.

† ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಮಂತ್ರಿಯವರು ತಂದಿರತಕ್ಕ ತಿದ್ದುಪಡಿ ನೋಡಿದರೆ ಬಹುಶಃ ಲಕ್ಷ್ಮೀಸಾಗರ್‌ರವರು ಇದರ ಬಗ್ಗೆ ಯೋಚನೆ ಮಾಡಿದಂತೆ ಕಾಣುತ್ತಿಲ್ಲ. ಅವರು ಯೋಚನೆ ಮಾಡಿದ್ದರೆ ತಿದ್ದುಪಡಿ ತರುತ್ತಿರಲಿಲ್ಲ. ಹಾಲಿ ಇರತಕ್ಕ ಮುನಿಸಿಪಾಲಿಟಿ ಆಕ್ಟ್‌ನಲ್ಲಿ ಕಾರ್ಪೊರೇಷನ್ ಆಕ್ಟ್‌ನಲ್ಲಿ ಕಮಿಷನರ್‌ಗೆ ಈ ಕೆಲಸಗಳಿಗೆ ಅಧಿಕಾರ ಇಲ್ಲವೆ? ಕಳೆದ ೨೦–೨೫ವರ್ಷಗಳಿಂದ ನಾನು ಕೂಡ ವಕೀಲನಾಗಿ ಕೆಲಸ ಮಾಡಿದ್ದೇನೆ. ತಿದ್ದುಪಡಿಯ ಅವಶ್ಯಕತೆ ಇದೆಯೆಂದು ನಿಮಗೆ ಯಾರು ಹೇಳಿದರೋ ಗೊತ್ತಿಲ್ಲ. ಮುನಿಸಿಪಾಲಿಟಿ ಜಾಗದಲ್ಲಿ, ಕಾರ್ಪೊರೇಷನ್ ಜಾಗದಲ್ಲಿ ಅನ್-ಆಥರೈಸಾಗಿ ಮನೆಗಳನ್ನು ಕಟ್ಟಿದರೆ ಅವುಗಳನ್ನು ತೆಗೆಯುವಂಥ ಅಧಿಕಾರ ಈಗ ಇದೆ. ಸೆಕ್ಷನ್ ೨೮೮ರಲ್ಲಿ ಈ ವಿಚಾರ ಸ್ಪಷ್ಟವಾಗಿದೆ. ಇತ್ತೀಚೆಗೆ ಗುಬ್ಬಿಯಲ್ಲಿ ೧೦–೧೫ ಗುಡಿಸಲುಗಳನ್ನು

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಹೊಡೆದು ಹಾಕಿದ್ದಾರೆ. ಬಹುಶಃ ಜನತಾ ಪಕ್ಷದವರು ಇದನ್ನು ಸರ್ಕಾರೀ ಜಮೀನಿನಲ್ಲಿ ಮುನಿಸಿಪಾಲಿಟಿ ಜಮೀನಿನಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದು ಅವುಗಳನ್ನು ರೆಗ್ಯುಲರೈಸ್ ಮಾಡುವುದಕ್ಕೆ ತಂದಿದ್ದಾರೋ ಏನೋ ಎಂದು ಅನ್ನಿಸುತ್ತದೆ. ಬಡವರು, ಬೀದಿಯಲ್ಲಿ ೧೦–೨೦ ರೂಪಾಯಿಗಳ ಸಾಮಾನನ್ನು ಇಟ್ಟುಕೊಂಡು ಮಾರಾಟಮಾಡಿ ಜೀವನ ಮಾಡುವವರಿಗೆ ತೊಂದರೆ ಮಾಡುವುದಕ್ಕಾಗಿ ತಂದಿದ್ದಾರೋ ಏನೋ ಗೊತ್ತಿಲ್ಲ. ಲಾರ್ಡ್ ಮೆಕಾಲೆ ಇಂಡಿಯನ್ ಪೀನಲ್ ಕೋಡ್ ಮಾಡಬೇಕಾದರೆ ೧೬ ವರ್ಷ ತೆಗೆದುಕೊಂಡು ಮಾಡಿದ್ದಾನೆ. ನಮ್ಮ ದೇಶದ ಜನತೆಗೆ ಯಾವ ರೀತಿಯ ಕಾನೂನು ಇರಬೇಕು, ಅವರು ಯಾವ ರೀತಿ ಬೆಳೆಯುತ್ತಾರೆಂಬುದನ್ನು ಯೋಚನೆ ಮಾಡಿ ಕಾನೂನು ಮಾಡಿದ್ದಾನೆ. ದಿನಬೆಳಗಾದರೆ ಇಂಥ ತಿದ್ದುಪಡಿ ಕಾನೂನುಗಳನ್ನು ಏತಕ್ಕೆ ತರುತ್ತೀರೋ ನನಗಂತೂ ಅರ್ಥವಾಗುತ್ತಿಲ್ಲ. ತಿದ್ದುಪಡಿ ಮಸೂದೆಯನ್ನು ಯಾವ ಕಾರಣಕ್ಕಾಗಿ ತರಲಾಗಿದೆ ಎನ್ನುವ ಬಗ್ಗೆ ವಿವರಣೆ ಕೊಟ್ಟಿಲ್ಲ. ಬೆಂಗಳೂರಿನಲ್ಲಿರತಕ್ಕ ಕಮೀಷನರ್‌ರವರಿಗೆ ತೊಂದರೆಯಾಗಿದೆಯೆ? ಯಾವ ಕಾರಣವನ್ನೂ ಕೊಟ್ಟಿಲ್ಲ. ನಿಜವಾಗಿಯೂ ಈ ತಿದ್ದುಪಡಿ ವಾಸ್ತವಾಂಶಕ್ಕೆ ವಿರೋಧವಾಗಿದೆ. ಹಾಲಿ ಇರತಕ್ಕ ಕಾನೂನು ಜಾಸ್ತಿ ಇದೆ. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಸಾಕು. ಇದಕ್ಕಿಂಥ ಹೇಯವಾಗಿರತಕ್ಕ ತಿದ್ದುಪಡಿ ಬೇರೆ ಇಲ್ಲ ಎಂದು ಹೇಳಿ ಇದನ್ನು ಪ್ರಬಲವಾಗಿ ನಾನು ವಿರೋಧ ಮಾಡುತ್ತೇನೆ. ಇವೊತ್ತು ನಗರಸಭೆಗಳಲ್ಲಿ, ಪುರಸಭೆಗಳಲ್ಲಿ ಚುನಾಯಿತ ಸದಸ್ಯರುಗಳಿದ್ದಾರೆ. ಅವರುಗಳೇ ಇರತಕ್ಕ ಒಂದು ಸಮಿತಿ ಮಾಡಿ. ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಒಂದು ಕಡೆ ಹೇಳುತ್ತೀರಿ, ಒಂದು ಕಡೆ ಅಧಿಕಾರಿಗಳಿಗೆ ಎಲ್ಲಾ ಅಧಿಕಾರವನ್ನು ಕೊಡುತ್ತಿದ್ದೀರಿ. ಹಿಂದೆ ರಾಷ್ಟ್ರೀಯ ಹೆದ್ದಾರಿಗಳಿಗೆ ಇಷ್ಟು ಅಡಿ ಜಾಗ ಇರಬೇಕೆಂದು ರಸ್ತೆ ಬದಿಯ ಮನೆಗಳನ್ನು ಹೊಡೆದು ಹಾಕಿದ್ದು ಇನ್ನೂ ಮನಸ್ಸಿನಲ್ಲಿದೆ. ಇದು ಸಾಧುವಲ್ಲ. ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ತಂದಿರತಕ್ಕ ತಿದ್ದುಪಡಿ ಮಸೂದೆ ನಿಜವಾಗಿಯೂ ಬಡವರ ಪಾಲಿಗೆ ಮಾರಕವಾಗಿದೆಯೆಂದು ನಾನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹೇಳುತ್ತೇನೆ. ತಿದ್ದುಪಡಿ ತರುವುದು ದೊಡ್ಡ ಕೆಲಸವಲ್ಲ. ನೆರೆರಾಜ್ಯದಲ್ಲಿ ಕೃಪಾಲಿನಿಯವರು ಮಾತನಾಡುತ್ತಾ ಒಂದು ಕಡೆ ಹೇಳಿದ್ದಾರೆ. ಕಾನೂನು ತರುವುದು, ಅದಕ್ಕೆ ತಿದ್ದುಪಡಿ ತರುವುದು, ಮತ್ತೆ ಅದನ್ನು ಮುರಿಯುವುದು. ಹೀಗಿರುವಾಗ ಬರೀ ತಿದ್ದುಪಡಿ ತಂದರೆ ಏನು ಉಪಯೋಗ? ಈ ಕಾನೂನಿನಿಂದ ದೊಡ್ಡವರನ್ನು ಮಾತ್ರ ಅಲ್ಲಾಡಿಸುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಮಂಗಳೂರು ನಗರದಲ್ಲಿ ಪ್ರಕೃತಿ ಸೌಂದರ್ಯ ಹಾಳಾಗಿ ಅಲ್ಲಿನ ಗಿಡಮರಗಳು ಎಲ್ಲಾ ಹಾಳಾಗಿ, ಬರೀ ಕಾಂಕ್ರೀಟ್ ಕಟ್ಟಡಗಳೇ ಕಾಣುತ್ತಿವೆ. ಬೆಂಗಳೂರು ನಗರದಲ್ಲಿಯೂ ಅದೇ ಕಾಣುತ್ತದೆ. ಸಮಾಜದಲ್ಲಿ ಬಡವರು ಬದುಕಬೇಕಾಗಿದೆ. ಬರೀ ಶಾಸಕರು, ಅಧಿಕಾರಿಗಳು, ಶ್ರೀಮಂತರು ಮಾತ್ರ ಬದುಕಬೇಕಾಗಿಲ್ಲ ಎಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಭೂಮಿ, ಬೆಳಕು, ಗಾಳಿ ನೀರು ಎಲ್ಲರಿಗೂ ಸೇರಿದ್ದುದು. ಬಡವರಿಗೆ ಬೇರೆ, ಶ್ರೀಮಂತರಿಗೆ ಬೇರೆ ಇಲ್ಲ. ಕಮೀಷನರುಗಳಿಗೆ ಅಧಿಕಾರ ಕೊಟ್ಟರೆ, ''ಕದಳಿ ತೋಟದಲ್ಲಿ ಆನೆ ಹೊಕ್ಕಂತೆ'' ಆಗುತ್ತದೆ. ತಾವು ದಿನಬೆಳಗಾದರೆ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತೀರಿ, ಮೌಲ್ಯಗಳ ಬಗ್ಗೆ ಮಾತನಾಡುತ್ತೀರಿ, ತಿದ್ದುಪಡಿ ಮಸೂದೆಯಿಂದ ಬಡವರಿಗೆ ಅದರಲ್ಲಿಯೂ ಬೀದಿಯ ಬದಿಯಲ್ಲಿ ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು ಜೀವನ ಮಾಡುವವರಿಗೆ ತೊಂದರೆಯಾಗುವುದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ನಾನು ಇದನ್ನು ವಿರೋಧಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಬಗ್ಗೆ ಹೆಚ್ಚು ತೀವ್ರವಾದ ವಿರೋಧ ಈ ಸದನದಲ್ಲಿ ಬಂದಿದೆ. ಇಷ್ಟಿದ್ದರೂ ಕೂಡ ಸರ್ಕಾರವನ್ನು ಪ್ರತಿನಿಧಿಸುವ ನಮ್ಮ ಸಚಿವರು ಮಾತ್ರ ಬಹಳ ಸಮಾಧಾನದಿಂದ ಕುಳಿತಿದ್ದಾರೆ. ಅಂದರೆ ಮಳೆ ಬರಲಿ, ಬಿಸಿಲು ಬರಲಿ, ನೆರೆಯೇ ಬರಲಿ ಏನು ಬಂದರೂ ಬುಲ್‌ಡೋಜರ್ ಹಾಗೆ ಇದ್ದು ಇದನ್ನೆಲ್ಲಾ ತೆಗೆದುಕೊಂಡು ಮಸೂದೆ ಪಾಸ್ ಮಾಡಿಸಿಕೊಂಡು ಹೋಗುವ ಹಾಗೆ ಕಾಣುತ್ತಿದೆ. ಏಕೆಂದರೆ ಅವರಿಗೆ ಶಾಸಕರ ಕಾಳಜಿ ಕಳವಳಗಳು ಮುಖ್ಯವಲ್ಲ ಅನ್ನಿಸುತ್ತದೆ. ಆದರೆ ಇದರಲ್ಲಿ ಮೂಲಭೂತವಾಗಿ ನಮಗೆ ಏನು ಕಂಡಿದೆ ಎಂದರೆ ಈ ರೀತಿ ಒಂದು ಸ್ಥಳೀಯ ಸಂಸ್ಥೆ ಬಗ್ಗೆ ಅದು ಕಾರ್ಪೊರೇಷನ್ ಇರಬಹುದು, ಮುನಿಸಿಪಾಲಿಟಿ ಇರಬಹುದು ಅಥವಾ ಜಿಲ್ಲಾ ಪರಿಷತ್ ಅಥವಾ ಪಂಚಾಯಿತಿ ಇರಬಹುದು. ನಾವೆಲ್ಲಾ ಪ್ರಜಾಪ್ರತಿನಿಧಿಗಳು. ಈ ಸದನದಲ್ಲಿ ನಮ್ಮಿಂದ ಪಾಸಾಗಿ ಹೋಗುವ ಮಸೂದೆಗಳು ಜನರ ಸಮುದಾಯ ಶಕ್ತಿಯನ್ನು ಹೆಚ್ಚಿಸುವ ಕೆಲಸವನ್ನು ಮಾಡಬೇಕು. ಹೊರತು ಅದನ್ನು ತಡೆಯುವ ಅಥವಾ ಅದನ್ನು ಕುಂಠಿತಗೊಳಿಸುವ ಕೆಲಸವನ್ನು ನಾವು ಮಾಡಿದರೆ ಇಲ್ಲಿ ಕುಳಿತುಕೊಳ್ಳುವುದು ಸಾರ್ಥಕವಾಗುವುದಿಲ್ಲ,

ಈ ಮಸೂದೆಯ ಯಾವುದಾದರೂ ಒಂದು ವಾಕ್ಯ ಅಥವಾ ಯಾವುದಾದರೂ ಒಂದು ಕಲಮು ಇದರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಪರಮಾಧಿಕಾರ ಕೊಡುವ ಮೂಲಕ ಜನರ ಸಮುದಾಯ ಶಕ್ತಿಯನ್ನು ಹೆಚ್ಚಿಸುವ ಬಗ್ಗೆ ಹೇಳುವುದಿಲ್ಲ. ಹಾಗಾದರೆ ಪ್ರಜೆಗಳ ಕೈಗೆ ನಾವು ಅಧಿಕಾರ ಕೊಡುತ್ತೇವೆ. ವಿಕೇಂದ್ರೀಕರಣ ಮಾಡುತ್ತೇವೆ ಎಂದು ಏನು ಘೋಷಣೆ ಇದೆ ಅದು ಪೊಳ್ಳಾಗುತ್ತದೆ. ಆ ಕೆಲಸವನ್ನು ಈ ಮಸೂದೆಯ ಮೂಲಕ ಇನ್ನೂ ನಾಜೂಕಾಗಿ ಮಾಡುತ್ತಿದ್ದಾರೆ. ಪ್ರತಿ ವಿವರಗಳ ವಿಶ್ಲೇಷಣೆಗೆ ನಾನು ಹೋಗುವುದಿಲ್ಲ. ಏಕೆಂದರೆ ಬೇರೆಯವರು ಈಗಾಗಲೇ ಮಾತನಾಡಿದ್ದಾರೆ.

ಎರಡನೆಯದು ಏನೆಂದರೆ ಇದರಲ್ಲಿ ಬಡವರಿಗೆ ಏನೆಲ್ಲಾ ವಿರೋಧವಾಗಿ ಮಾಡಬಹುದು ಅದನ್ನು ಎಲ್ಲಾ ರೀತಿಯಲ್ಲಿ ವ್ಯವಸ್ಥಿತವಾಗಿ ಮಾಡಲಾಗಿದೆ. ಬಡವರಿಗೆ ಅನುಕೂಲ ಮಾಡಿಕೊಡಬೇಕು, ಅವರ ಕಷ್ಟವನ್ನು ಅನುಕಂಪದಿಂದ ನೋಡಬೇಕು ಎನ್ನುವ ವಾಕ್ಯ ಕೂಡ ಇಲ್ಲಿ ಇಲ್ಲ. ನಾನು ಇದರ ಬಗ್ಗೆ ಮಾತನಾಡಬಾರದೆಂದು ಇದ್ದೆ. ಏಕೆಂದರೆ ಕಾರ್ಪೊರೇಷನ್ ವಲಯದಲ್ಲಿ ನಮ್ಮ ಕ್ಷೇತ್ರ ಬರುವುದಿಲ್ಲ. ಮತ್ತೊಂದು ಏನು ತಿಳಿದುಕೊಂಡೆ ಎಂದರೆ ಸನ್ಮಾನ್ಯ ಲಕ್ಷ್ಮೀಸಾಗರ್ ಅಥವಾ ಮಾನ್ಯ ಮುಖ್ಯಮಂತ್ರಿಯವರು ಯಾವಾಗಲೂ ಸಿಟಿ ಬಹಳ ಕ್ಲೀನ್ ಆಗಿರಬೇಕು, ಬಹಳ ಶಿಸ್ತು ಮತ್ತು ವ್ಯವಸ್ಥೆಯಿಂದ ಪಟ್ಟಣಗಳು ಬೆಳೆಯಬೇಕೆಂದು ಹೇಳುತ್ತಿರುತ್ತಾರೆ. ಗಂಗಾರಾಂ ಕಮೀಷನ್ನಿನ ನ್ಯಾಯಾಧೀಶರಾದ ಆರ್.ಜಿ. ದೇಸಾಯಿಯವರು ಕೆಲವು ಶಿಫಾರಸ್ಸುಗಳನ್ನು ಕೊಟ್ಟಿದ್ದಾರೆ. ಅವು ಆಯೋಗದ ವರದಿಯ ೪೪ನೇ ಪುಟದಲ್ಲಿ ಬರುತ್ತದೆ. ನಿಜವಾಗಿಯೂ ಇವರಿಗೆ ಕಾರ್ಪೊರೇಷನ್ ವಲಯದಲ್ಲಿ ಕಟ್ಟಡಗಳು ಸುವ್ಯವಸ್ಥಿತವಾಗಿ ಬೆಳೆಯಬೇಕೆಂದಿದ್ದರೆ ಆ ಅಂಶಗಳನ್ನೆಲ್ಲಾ ಈ ಮಸೂದೆಯಲ್ಲಿ ಇನ್‌ಕಾರ್ಪೊರೇಟ್ ಮಾಡಬಹುದಿತ್ತು. ಏಕೆಂದರೆ ಈ ಗಂಗಾರಾಂ ವಿಚಾರಣಾ ಆಯೋಗದ ವರದಿಯಲ್ಲಿ ಕೆಲವು ಮುನ್ನೆಚ್ಚರಿಕೆ ಕ್ರಮಗಳು ಏನು ಸೂಚಿತವಾಗಿವೆಯೋ ಅವನ್ನು ಸರ್ಕಾರ ಮಸೂದೆಯ ಮೂಲಕ ತಿದ್ದುಪಡಿ ಮಾಡುವ ಮೂಲಕ ಜಾರಿಗೆ ತರಬಹುದೆಂದು ಹೇಳಲಾಗಿದೆ, ಆದರೆ ಇವರು ಆ ವರದಿಯನ್ನು ಕಸದ ಗುಪ್ಪೆಗೆ ಅಥವಾ ಕಾರ್ಪೊರೇಷನ್ ಮುನಿಸಿಪಾಲಿಟಿಗಳ

ಬುಟ್ಟಿಗೆ ಒಗೆದುಬಿಟ್ಟಿದ್ದಾರೆ. ಆ ಪ್ರಕರಣದಲ್ಲಿ ಯಾರು ತಪ್ಪಿತಸ್ಥರೋ ಅವರ ಮೇಲೆ ಇವತ್ತಿನ ವರೆಗಾದರೂ ಕ್ರಮ ತೆಗೆದುಕೊಳ್ಳುವ ಕೆಚ್ಚು ಎದೆಗಾರಿಕೆ ಈ ಸರ್ಕಾರಕ್ಕಿಲ್ಲ. ಏಕೆಂದರೆ ಶ್ರೀಮಂತರ ಬಗ್ಗೆ ನಿಷ್ಠುರ ತೋರದ ರಾಜೀ ಧೋರಣೆ ಇವರದು. ನಮ್ಮ ಹಿರಿಯ ಸದಸ್ಯೆಯರಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಜೊತೆ ಇದನ್ನೇ ನಾನು ಮಾತನಾಡುತ್ತಿದ್ದೆ. ಈ ಮಸೂದೆ ತಂದಿರುವುದರ ಉದ್ದೇಶವೆಂದರೆ ಈ ಬಡವರ ಸಣ್ಣ ಗುಡಿಸಲು, ಅಂಗಡಿ, ಗಾಡಿಗಳನ್ನು ತೆಗೆದುಬಿಡುವುದು. ಏಕೆಂದರೆ ಅವರೆಲ್ಲಾ ಶ್ರೀಮಂತರ ಜಾಗಗಳಲ್ಲಿ ಇರುತ್ತಾರೆ. ಶ್ರೀಮಂತರಿಗೆ ಜಾಗ ತೆರವು ಮಾಡಿ ಕೊಡುವುದು. ಆಮೇಲೆ ಅಲ್ಲಿ ಶ್ರೀಮಂತರ ಕಟ್ಟಡ ಏಳುತ್ತದೆ. ಒಕ್ಕಲೆಬ್ಬಿಸಲಾದ ಬಡವರಿಗೆ ಪರಿಹಾರವನ್ನು ಇವರೇನು ಶ್ರೀಮಂತರಿಂದ ಕೊಡಿಸುವುದಿಲ್ಲ. ಅದನ್ನೂ ಸರ್ಕಾರವೇ ಕೊಡುತ್ತದೆ. ಆದರೆ ಇವರು ಹೇಳುವುದು ಮಾತ್ರ ತಪ್ಪು ಮನಸ್ಸೆಲ್ಲಾ ಬಡವರ ಮೇಲಿದೆ ಎಂದೇ. ಬದಲಿಗೆ ಇವರು ಬಡವರ ಸ್ವಾಭಿಮಾನ ಉಳಿಸುವುದಕ್ಕಾಗಿ ಶ್ರೀಮಂತರಿಂದ ಜಾಗಗಳನ್ನು ಬಿಡಿಸುವ ಬಗ್ಗೆ ಬಿಲ್ ತಂದಿದ್ದರೆ ಆ ವಿಷಯ ಬೇರೆ ಇತ್ತು. ನಾವೂ ಒಪ್ಪುತ್ತಿದ್ದೆವು. ಆ ಕಾಳಜಿ ಕಾರ್ಯೋತ್ಸಾಹ ನಿಮ್ಮ ಸರ್ಕಾರದಲ್ಲಿಲ್ಲ. ದುರ್ಬೀನು ಹಾಕಿ ನೋಡಿದರೂ ಕೂಡ ಇದು ಕಾಣುತ್ತಿಲ್ಲ. ಶ್ರೀಮಂತರ ಶಕ್ತಿಯನ್ನು ಹೆಚ್ಚಿಸುವ ಪ್ರಯತ್ನವಾಗಿ ಬಡವರ ಬದುಕಿನ ಹ್ರಾಸ ಮಾಡುತ್ತಿದ್ದಾರೆ. ಇಲ್ಲದಿದ್ದರೆ ಗಂಗಾರಾಂ ಆಯೋಗದ ವರದಿಯ ಒಂದು ಅಂಶವನ್ನಾದರೂ ಇಲ್ಲಿ ಸೇರಿಸುತ್ತಿದ್ದರು, ಇವರು ಶ್ರೀಮಂತರ ಬಂಡವಾಳಶಾಹಿಗಳ ಕೈಗೊಂಬೆಗಳಾಗಿ ಕೆಲಸ ಮಾಡುತ್ತಿದ್ದಾರೆ ಎಂದು ನೇರವಾಗಿ ಆಪಾದನೆ ಮಾಡುತ್ತೇನೆ. ಗಂಗಾರಾಂ ಕಟ್ಟಡದ ಪ್ರಕರಣದಲ್ಲಿ ತಪ್ಪಿತಸ್ಥರೆಂದು ಗುರುತಿಸಲಾದ ಅಧಿಕಾರಿಗಳ ಮೇಲೆ ವ್ಯಕ್ತಿಗಳ ಮೇಲೆ ಇವತ್ತಿಗೂ ಕೂಡ ಚಾರ್ಜ್‌ಶೀಟ್ ಕೂಡ ಹಾಕಿಲ್ಲ ಏಕೆ? ಇವೊತ್ತು ಅದೇ ಜಾಗದಲ್ಲಿ ಮತ್ತೆ ಕಟ್ಟಡ ಕಟ್ಟಲು ತಯಾರಿ ನಡೆದಿದೆ ಎಂದು ಹೇಳಲಾಗುತ್ತಿದೆ. ಇದು ಎಷ್ಟರಮಟ್ಟಿಗೆ ಸತ್ಯವೋ ತಿಳಿಯದು. ಈ ಮಸೂದೆಯ ಮೂಲಕ ಯಾವುದೇ ಕರುಣೆ ಇಲ್ಲದೆ ಕಟುಕರ ಆಯುಧವನ್ನು ಕಮೀಷನರ್ ಕೈಗೆ ಕೊಡುವ ಕೆಲಸ ಮಾಡುತ್ತಿದ್ದಾರೆ. ಅಧ್ಯಕ್ಷರೇ ಇದನ್ನು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ ಕಾರ್ಪೋರೇಷನ್ ಕ್ಷೇತ್ರ ಎಲ್ಲಾದರೂ ನೋಡಿ, ಮಂಗಳೂರಿನಲ್ಲಿ ನೊ ಡಿ, ಬೆಂಗಳೂರಿನಲ್ಲಿ ನೋಡಿ. ಶ್ರೀಮಂತ ಅಥವಾ ಪ್ರಭಾವವುಳ್ಳ ವ್ಯಕ್ತಿ ರಾಜಗಸ್ತೆಯಲ್ಲೇ ರಸ್ತೆಯ ಹತ್ತಿರದವರೆಗೂ ಕಟ್ಟಡ ಕಟ್ಟಿಬಿಡಬಹುದು. ಮಂಗಳೂರಿನಲ್ಲಿ ಸಿಟಿ ಟೌನ್ ಪ್ಲಾನಿಂಗ್ ಅಥಾರಿಟಿ ಕಾರ್ಪೋರೇಷನ್ನಿಗೆ ಯಾವ ಅಧಿಕಾರ ಕೂಡ ಕೊಡುವುದಿಲ್ಲ. ಬರೀ ಮೊಸಳೆ ಕಣ್ಣೀರನ್ನು ಸುರಿಸಿದ ಕಥೆಯ ಹಾಗೆ ಇವರ ಕೆಲಸವೆಲ್ಲ ಇದರಲ್ಲಿ ಎಷ್ಟು ದ್ವಂದ್ವ ಇದೆ ನೋಡಿ, ಒಂದು ಕಡೆ ಯಾವ ನೋಟೀಸೂ ಇಲ್ಲದೆಯೇ ಬಡವರ ಮನೆಗಳನ್ನು ಕೆಡುವುವುದು. ಮತ್ತೊಂದು ಕಡೆ ಕಾರ್ಪೋರೇಷನ್ನೇ ದೊಡ್ಡವರಿಗೆಲ್ಲ ಕಟ್ಟಡ ಏಳಿಸಲು ಪರ್ಮಿಷನ್ ಕೊಡುವುದು. ಏನು ಅನ್ಯಾಯ? ಇಂಥದನ್ನು ತಡೆಯಬೇಕಾದರೆ ನೀವು ಕೂಡಲೇ ಕೋರ್ಟಿಗೆ ಹೋಗಿ ನ್ಯಾಯ ಪಡೆಯಬೇಕಾಗುತ್ತದೆ. ಕೋರ್ಟಿಗೆ ಹೋಗಬೇಕಾದರೆ ನೋಟೀಸು ಕೊಡಬೇಕು, ಆಮೇಲೆ ಆಕ್ಷನ್ ತೆಗೆದುಕೊಳ್ಳಬೇಕು, ಸರ್ಕಾರ ಇಂಥ ಮಸೂದೆಯನ್ನು ಈಗೇನೋ ತಂದಿದೆ. ಆದರೆ ಇದೇ ಲಕ್ಷ್ಮೀಸಾಗರ್ ಅವರೇ ಹಿಂದಿನ ಸರ್ಕಾರಗಳು ಮಸೂದೆ ತಂದಾಗ ಪ್ರತಿ ಸಲವೂ ಅದೊಂದು ಡ್ರಕೋನಿಯನ್ ಬಿಲ್ ಎಂದು ಪದೇ ಪದೇ ಹೇಳುತ್ತಿರುತ್ತಿದ್ದರು. ನೀವೇ ಆ ಕೆಲಸ ಏಕೆ ಮಾಡುತ್ತಿದ್ದೀರಿ? ನಿಮ್ಮ ಶಬ್ದಭಂಡಾರ ಎಲ್ಲಾ ಮುಗಿದು ಹೋಯಿತೇ? ನಿಮ್ಮ ಜನತಾ ಪಕ್ಷ ಬಂದ ಮೇಲೆ ಎಷ್ಟೋ ದು ಪುಸ್ತಕಗಳನ್ನೆಲ್ಲ ಪ್ರಕಟಿಸುತ್ತಿದ್ದೀರಿ. ಈಗ ಹೊಸ ಶಬ್ದಭಂಡಾರ ತೆರೆದಿದ್ದೀರಲ್ಲ, ಅದನ್ನೆಲ್ಲಾ ಪ್ರಿಂಟ್ ಮಾಡಿಸಿ ಜನಗಳಿಗೆ ಹಂಚಿಬಿಡಿ. ಏಕೆಂದರೆ ಬಡವರ, ಶ್ರೀಮಂತರ ಅಲ್ಪಸಂಖ್ಯಾತರ ಕೊಳಚೆ ಪ್ರದೇಶಗಳ ವಿಚಾರದಲ್ಲಿ ತಮ್ಮದು ಈಗ ವ್ಯಾಖ್ಯಾನ ಏನು ಎಂದು ಇಡೀ ರಾಜ್ಯದ ಜನತೆಗೆಲ್ಲ ತಿಳಿಯಲಿ. ಏಕೆಂದರೆ ಈಗ ಎಂಥ ಸ್ಥಿತಿ ಇದೆ ಎಂದರೆ ನಿಮ್ಮ ಆಲೋಚನೆಗಳನ್ನೆಲ್ಲ ಮಸೂದೆ ರೂಪದಲ್ಲಿ ತಂದು ಅದು ಕಾನೂನು ಆಗುವವರೆಗೆ ಜನಗಳಿಗೆ ಅದರ ಬಗ್ಗೆ ಏನೂ ತಿಳಿದಿರುವುದಿಲ್ಲ. ಆದ್ದರಿಂದ ನಿಮ್ಮ ಅಮೂಲ್ಯ ಶಬ್ದ ವಾಕ್ಯ ಭಂಡಾರವನ್ನು ಜನತೆಯ ಮುಂದಿಡಿ. ಈ ಹಿನ್ನೆಲೆಯಲ್ಲಿ ಇಷ್ಟೊಂದು ಪ್ರತಿಭಟನೆ ಇಲ್ಲಿ ಬಂದಿದ್ದರೂ ನೀವು ಮಾತ್ರ ಈ ಮಸೂದೆಯನ್ನು ಮಂಜೂರು ಮಾಡಿಸಿಕೊಂಡೇ ಹೋಗಬೇಕೆಂದು ಇದ್ದೀರಿ. ಇದೊಂದು ರೀತಿಯ ಹಠಸಾಧನೆ. ಇದನ್ನು ಮಾಡುವುದು ಎಷ್ಟು ಮಾತ್ರಕ್ಕೂ ಸರಿಯಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಇಂಥ ಧೋರಣೆಯನ್ನು ದಯವಿಟ್ಟು ಬದಲಾವಣೆ ಮಾಡಿ, ಈ ಸದನದಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳಿಗೆ ಸ್ಪಂದಿಸದಿರುವ ಸರ್ಕಾರ ನಡೆಸಿಕೊಂಡು ಹೋಗುವ ಕೆಲಸವನ್ನು ತಾವು ಮಾಡಬೇಡಿ. ಇನ್ನು ಬೇರೆ ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ನಾನು ಅವುಗಳನ್ನು ಹೇಳಲಿಕ್ಕೆ ಹೋಗುವುದಿಲ್ಲ. ಆದ್ದರಿಂದ ಮಾನ್ಯ ಲಕ್ಷ್ಮೀಸಾಗರ್‌ರವರು ಈ ಮಸೂದೆಯನ್ನು ಹಿಂದೆ ತೆಗೆದುಕೊಂಡು ಸಮರ್ಪಕವಾದಂತಹ ಮಸೂದೆಯನ್ನು ತರಬೇಕು. ವಿಚಾರಣಾ ಆಯೋಗ ಏನು

ವರದಿಯನ್ನು ಕೊಟ್ಟಿದೆ, ಅವರಲ್ಲಿರುವ ಉತ್ತಮ ಅಂಶಗಳು ಈ ಮಸೂದೆಯಲ್ಲಿ ಶಿಫಾರಸ್ಸಾಗಿ ಅದನ್ನು ಅನುಷ್ಠಾನ ಮಾಡತಕ್ಕಂಥದ್ದು ಈ ತಿದ್ದುಪಡಿ ಮಸೂದೆಯಲ್ಲಿಲ್ಲ. ಪುನಃ ಇನ್‌ಸ್ಪೆಕ್ಷನ್ ಮಾಡುವ ಶಿಫಾರಸ್ಸು ಮಾಡಿದ್ದುದು ಎಲ್ಲಿಯೂ ಇಲ್ಲ. ಇದರಲ್ಲಿ ಒಂದು ಇಲ್ಲ. ಇದನ್ನು ತಾವು ಸ್ವತಃ ಆಲೋಚನೆ ಮಾಡಿ ತಂದಿರೋ ಅಥವಾ ಯಾರದಾದರೂ ಮಾತು ಕೇಳಿ ತಂದಿರೋ ? ಇದರಿಂದ ಅನ್ಯಾಯವಾಗುತ್ತದೆ. ಆದರ್ಶ ಕಾರ್ಪೊರೇಷನ್‌ಗಳನ್ನು ರಚಿಸಬೇಕೆಂದು ಏನು ಹೊರಟಿದ್ದೀರಿ ಅದಕ್ಕೆ ಪೆಟ್ಟು ಬೀಳುತ್ತದೆ. ಇಷ್ಟು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI MOHAMED LIAQUDDIN BURANUDDIN (Bidar).—Sir, much has been discussed about this proposed amendment. In my opinion the amendments sought to the bill are quite unnecessary because these amendments are opposed to the public policy. Firstly, it is going to cause lot of hardships to the poorer sections and weaker sections of the society who are engaged in petty business *i.e.*, people doing business on two-wheeler and footpath vendors, boot-polishers-all those persons will be affected by this amendment and there is no necessity now to bring the regulation under the Corporation Act when there is already such provision. Now, Section 288 A, 288 B and C, if we carefully analyse them and compare them with the provisions contained in the old Corporation Act I am of the view these amendments are not at all necessary. May be the Hon'ble Minister might be having certain opinion about these provsions and wants to give wider powers to the Commissioner to remove encroachments in public places. You know Sir, these petty businessmen are doing their business since 15 to 20 years and if Government wants to remove them at once then it will certainly cause great hardship to those poor people who are mainly depending on the business for their livelihood. Now, the Government wants to do what is not permissible under law. By way of this amendment they want to give a licence to the officers under the new Corporation Act. They have brought in clause 288A, B, C in this proposed amendment and through this they have vested powers with the Commissioner. If a person wants to erects a strcture or fixture in a public place he must approach the Commissioner with written application. Here there is no guarantee that the Commissioner will exercise his discretion while granting the permission in a good manner because under the new provisions permission may be refused to the applicant for erecting any strcture, fixtures etc., in a public place. This amendment is not at all necessary when there is already a provision in the old Act. I will read Section 288 of the Karnataka Municipal Corporations Act, 1976.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

> "The Commissioner may grant a licence subject to such conditions and restrictions as he may think fit to the owner or occupier of any premises........."

When there is already a provision in this behalf why do you want to add another Section by way of this amendment. Then, sub-clause (3) says :

> "No licence shall be granted under sub-section (1) if the projection or construction is likely to be injurious to health or cause public inconvenience or otherwise materially interfere with the use of the road as such".

According to this sub-clause of the old Act the Commissioner can restrict the permission or can withhold such written permission, it is already there. So, when there is already a provision empowering the Commissioner to grant permission I don't know why the Government wants to bring in another amendment by inserting clause 288A, 288B and 288C. The proposed amendment will give only room for political influence and other things while according permission. Moreover the power which are being now given to the Commissioner are excessive and there is no guarantee that such powers will be exercised by the Commissioner to meet the ends of justice. Further clause 288D proposed here empowers the Commissioner to remove encroachment with out notice. So, whenever the Commiosioner wants on his own can bring the bulldozer and can demolish the structures without notice and the person so affected cannot go to the court and the powers of the court are being restricted without giving notice. The court cannot pass interim order when the Commissioner invoke clause 288D of the Act without giving opportunity to the persons affected. The point here is when the Commissioner having such a widened power *i.e.,* without notice if he starts demolishing the structures where is the time to go to the court to get the interim order from the Court. So, considering all these things I think this legislation has been brought in haste. Moreover these proposed amendments are opposed to public policy and it shall give great hardship to the people at large, therefore, I oppose the bill. With this, I thank the Hon'ble Speaker for having allowed me to speak a few words about the Bill.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ೧೫ ಜನ ಮಾನ್ಯ ಸದಸ್ಯರು ಈ ತಿದ್ದುಪಡಿ ಮಸೂದೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕಟುವಾಗಿಯೇ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇಬ್ಬರು ಮಾನ್ಯ ಸದಸ್ಯರಾದ ಶ್ರೀಮಾನ್ ಬಸವಲಿಂಗಪ್ಪನವರು ಸನ್ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಈ ತಿದ್ದುಪಡಿ ಮಸೂದೆಯ ಬಗ್ಗೆ ತಮ್ಮ ಅನುಮೋದನೆಯನ್ನು ವ್ಯಕ್ತಪಡಿಸಿದ್ದಾರೆ. ಅವರಿಗೆ ಧನ್ಯವಾದಗಳು. ಪ್ರತಿಯೊಬ್ಬ ಮಾನ್ಯ ಸದಸ್ಯರು ಹೇಳಿರತಕ್ಕ ಒಂದೊಂದು ವಿಷಯಕ್ಕೂ ಬಿಡಿ ಬಿಡಿಯಾಗಿ ಉತ್ತರ ಕೊಡುವುದಕ್ಕೆ ಬದಲಾಗಿ ಈ ತಿದ್ದುಪಡಿಯಲ್ಲಿ ನಮೂದಿಸಿರತಕ್ಕಂತಹ ವಿಷಯಗಳ ಬಗ್ಗೆ ಮಾನ್ಯ ಸದಸ್ಯರು

ಸಾಮಾನ್ಯವಾಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆಂದು ಭಾವಿಸುತ್ತೇನೆ. ಅದೇ ರೀತಿ ನಾನೂ ಕೂಡ ಈ ತಿದ್ದುಪಡಿಗಳಿಗನುಸಾರವಾಗಿ ಸನ್ಮಾನ್ಯ ಸದಸ್ಯರು ಹೇಳಿದ ಟೀಕೆ ಟಿಪ್ಪಣಿಗಳನ್ನು ಗಮನ ದಲ್ಲಿಟ್ಟುಕೊಂಡು ನನ್ನ ಉತ್ತರವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ತಿದ್ದುಪಡಿ ಯನ್ನು ಯಾರನ್ನೂ ಕೇಳಿ ನಾವು ಮಾಡಿಲ್ಲ. ನೀವೇ ಮಾಡಿದ್ದೀರಿ. ಅಧಿಕಾರಿಗಳಿಗೆ ಹೆಚ್ಚು ಅಧಿಕಾರ ವನ್ನು ಕೊಡುವುದಕ್ಕೆ ಹೊರಟಿದ್ದೀರಿ ಇವರ ಮೇಲೆ ಯಾವ ವಿಧವಾದ ನಿಯಂತ್ರಣವನ್ನು ಇಟ್ಟು ಕೊಳ್ಳುವುದು ಕಷ್ಟ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ ಶ್ರೀಮಾನ್ ಮೊಯ್ಲಿಯವರು. ನಾನು ಪ್ರಾರಂಭದಲ್ಲಿ ಸೂಚನಾತ್ಮಕವಾದ ವಿಷಯಗಳಿಗೆ ವಿವರವನ್ನು ಕೊಡುವ ಸಮಯದಲ್ಲಿ ಹೇಳಿದ್ದೇನೆ. ಮೇಯರ್‌ಗಳ ಸಮ್ಮೇಳನದಲ್ಲಿ ಏನೊಂದು ಸಲಹೆ ಸೂಚನೆಗಳು ಬಂದವು ಅವುಗಳನ್ನು ಗಮನದಲ್ಲಿಟ್ಟು ಕೊಂಡು ಈ ಒಂದು ತಿದ್ದುಪಡಿಯನ್ನು ತರುವಾಗ, ಮತ್ತು ಕಾರ್ಪೊರೇಷನ್ ಕೆಲಸ ಮಾಡತಕ್ಕಂತಹ ಹಿನ್ನಲೆಯಲ್ಲಿ ಕಂಡುಬಂದಂತಹ ಕೆಲವು ನ್ಯೂನತೆಗಳನ್ನು ಗಮನದಲ್ಲಿಟ್ಟುಕೊಂಡು, ಅಲ್ಲಿರತಕ್ಕಂತಹ ನ್ಯೂನತೆಗಳನ್ನು ಸರಿಪಡಿಸುವುದರ ಮುಖ್ಯ ಉದ್ದೇಶ ಈ ತಿದ್ದುಪಡಿಯದು. ನಾನು ಪ್ರಜಾ ಪ್ರಭುತ್ವದ ತತ್ವವನ್ನು ತಿಳಿದುಕೊಂಡ ಹಾಗೆ, ಯಾರಿಗೂ ಕೂಡ ಹದ್ದು ಮೀರಿದ ಅಧಿಕಾರ ಇರುವು ದಕ್ಕೆ ಸಾಧ್ಯ ಇಲ್ಲ. ಇದು ಪ್ರಜಾಪ್ರಭುತ್ವದ ಮೌಲ್ಯ ಇರುವಂತಹದ್ದು. ಪ್ರಜಾಪ್ರಭುತ್ವಕ್ಕೆ ಇಂತಹ ಒಂದು ಹೆಸರು ಇರುವುದರಿಂದ, ಯಾರಿಗೂ ಕೂಡ ಕಾನೂನಿನ ರೀತಿ ನಿಯಂತ್ರಣಕ್ಕೆ ಸಿಕ್ಕದೆ ಇರತಕ್ಕಂತಹ ರೀತಿಯಲ್ಲಿ ಮನಸ್ವೇಚ್ಛೆಯಾಗಿ ನಿರಂಕುಶ ಅಧಿಕಾರವನ್ನು ಚಲಾಯಿಸತಕ್ಕಂತಹ ಸನ್ನಿ ವೇಶ ಇರುವುದಿಲ್ಲ. ಇದಕ್ಕಾಗಿಯೇ ಅದರ ಮೇಲೆ ಚೆಕ್ಸ್ ಅಂಡ್ ಬ್ಯಾಲೆನ್ಸ್ ಎಂದು ಇದ್ದೇ ಇದೆ. ಅದು ಬಹಳ ಪ್ರಾಮುಖ್ಯವಾದುದು ನಾನು ತಪ್ಪು ಮಾಡಿದರೆ, ನಮ್ಮ ಪಕ್ಷದವರು ನನ್ನನ್ನು ಸರಿ ಯಿಲ್ಲ ಎಂದು ಹೇಳಬಹುದು. ಸಾರ್ವಜನಿಕರು ನನ್ನ ಬಗ್ಗೆ ಟೀಕೆ ಮಾಡಬಹುದು. ಇವನ್ನೆಲ್ಲಾ ಹೇಗಾದರೂ ಮಾಡಿ ತಪ್ಪಿಸಿಕೊಂಡು ಹೋದರೂ ಕೂಡ ಕೊನೆಗೆ ಈ ಮನೆಯ ಸಮ್ಮತಿಯನ್ನು ಪಡೆಯಬೇಕಲ್ಲ ? ಇವನ್ನೆಲ್ಲಾ ಸಹಿಸಿಕೊಂಡು ೫ ವರ್ಷ ಆದ ಮೇಲೆ ನಂತರ ಪುನಃ ಜನಗಳ ಹತ್ತಿರ ಹೋಗಿ ಮತ್ತೆ ಮತ ಪಡೆದು ಬರಬೇಕಾಗುತ್ತದೆ. ಈ ಮನೆಯಲ್ಲಿ ಈ ಸ್ಥಾನದಲ್ಲಿ ಕುಳಿತು ಕೆಲಸ ಮಾಡತಕ್ಕಂತಹ ಮಂತ್ರಿಗಳಾಗಲಿ, ಶಾಸಕರಾಗಲಿ, ಈ ಒಂದು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡ ತಕ್ಕಂತಹ ಹಿನ್ನೆಲೆಯಲ್ಲಿ ಯಾರೂ ನಿರಂಕುಶ ಅಧಿಕಾರವನ್ನು ಹೊಂದುವುದಕ್ಕೆ ಸಾಧ್ಯ ಇಲ್ಲ. ಸನ್ಮಾನ್ಯ ಮೊಯ್ಲಿಯವರು, ಸಹಜವಾಗಿ ವಿಚಾರವನ್ನು ತಿಳಿದು ಮಾತನಾಡತಕ್ಕಂತಹವರು ಅವರು ಉಪ ಯೋಗಿಸತಕ್ಕಂತಹ ಪದಗಳನ್ನು ಯೋಚಿಸಿ ಉಪಯೋಗಿಸುತ್ತಾರೆ ಎನ್ನುವುದು ನನ್ನ ನಂಬಿಕೆ. ಆದರೆ ಇಂದು ಅವರಿಂದ ಹೊರಟಂತಹ ಮಾತುಗಳು ಅವರ ಚಿಂತನೆಗೂ, ಮಾತಿಗೂ ವ್ಯತ್ಯಾಸ ಇದ್ದ ಹಾಗೆ ಕಾಣುತ್ತದೆ. ಮನಸ್ಸಿನಲ್ಲಿ ಏನಿದೆಯೋ ಅದನ್ನೇ ಹೇಳತಕ್ಕಂತಹ ಶಬ್ದಗಳನ್ನು ವ್ಯಕ್ತಿಗಳು ಸಹಜವಾಗಿ ಹೇಳತಕ್ಕಂತಹದ್ದು ಇರುತ್ತದೆ. ಪ್ರಜಾಪ್ರಭುತ್ವದಲ್ಲಿ ಹಠ ಸಾಧನೆಯನ್ನು ಮಾಡುವುದಕ್ಕೆ ಸಾಧ್ಯ ಇಲ್ಲ. ಅವರು ಈ ಕಡೆ ೨ನೇ ಸ್ಥಾನದಲ್ಲಿ ಮಂತ್ರಿಯಾಗಿದ್ದಂತಹವರು. ಆಗ ನಾನು ಆ ಕಡೆ ಎರಡನೇ ಸ್ಥಾನದಲ್ಲಿದ್ದೆ. ಇದು ಲಕ್ಷ್ಮೀಸಾಗರ್‌ರವರ ಮುಸೂದೆ ಎಂದು ಹೇಳಿದರು. ಇದು ಲಕ್ಷ್ಮೀಸಾಗರ್ ರವರ ಮುಸೂದೆಯಲ್ಲ. ನಾನು ಒಬ್ಬ ಏಕೈಕ ಸಣ್ಣ ಮನುಷ್ಯ ಜನರಿಂದ ಮತವನ್ನು ಪಡೆದು ಬಂದಿರ ತಕ್ಕಂತಹವನು.

ಶ್ರೀ ಎಂ.ಎಸ್. ಕೃಷ್ಣನ್.—ನಮ್ಮ ತತ್ವವನ್ನು ಅನುಸರಿಸಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ನಿಮ್ಮ ತತ್ವವನ್ನು ಒಪ್ಪಿಕೊಂಡರೂ ಏನು ಮಾಡುತ್ತೀರಿ ? ಎಂಬುದು ನನಗೆ ಗೊತ್ತಿದೆ. ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ಎಂ.ಎಸ್. ಕೃಷ್ಣನ್.—ಚರ್ಚೆ ಮಾಡೋಣ ಬೇಕಾದರೆ......

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ದಾರಿ ನಿಮ್ಮದು. ನಮ್ಮ ದಾರಿ ನಮ್ಮದು. ಉದ್ದೇಶ ಒಂದೇ ಆಗಿರಬಹುದು. ನಿಜವಾಗಿಯೂ ಅವರು ಇಂತಹ ಶಬ್ದಗಳನ್ನು ಏಕೆ ಉಪಯೋಗಿಸಿದ್ದಾರೋ ಎಂಬುದು ನನಗೆ ಅರ್ಥವಾಗುವುದಿಲ್ಲ. ಈ ಮುಸೂದೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಸಭೆಯಲ್ಲಿ ಬಹುಮತ ಪಡೆದೇ ಇವೊತ್ತು ನಾನು ಮಂತ್ರಿಯಾಗಿರುವುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾಗರೀಕರು ಇದನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರೂ ಹಠಮಾರಿತನ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಆರ್.ಎನ್. ನಾಯಕ್.—ಮೆಜಾರಿಟಿಯ ಮಾತುಗಳನ್ನು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆ ರೀತಿ ಹೇಳುವುದಾದರೆ, ಮೆಜಾರಿಟಿ ತಮಗೆ ಇದೆ ಎಂದ ಮೇಲೆ, ಇಲ್ಲಿಗೆ ಅದನ್ನು ತರುವಂತಹ ಅಗತ್ಯವೇನು ? ಅಲ್ಲೇ ಪಾಸುಮಾಡಿಕೊಳ್ಳಬಹುದಲ್ಲವೇ ? ಚರ್ಚೆ ಏಕೆ?

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀಮಾನ್ ಮೊಯ್ಲಿಯವರು ಹೇಳಿದ್ದುದು ಈ ವಿಷಯದ ಬಗ್ಗೆ ಏನೆಂದರೆ, ನಾನು ಹೇಳುವ ಮಾತು ಅನ್ಯಾಯದಿಂದ ಕೂಡಿದೆ ಎಂದು ಇದರಿಂದ ಪ್ರಜಾಪ್ರಭುತ್ವದಲ್ಲಿ ಯಾರೂ ಬದುಕುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೆ......

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಮಾತನಾಡುವಾಗ ನಾನು ಚಕಾರ ಶಬ್ದ ಎತ್ತದೆ ಸುಮ್ಮನೆ ಕುಳಿತಿದ್ದೆ. ನಾನು ಮಾತನಾಡುವಾಗ ಅವರೂ ಕೂಡ ಅದೇ ಕೆಲಸವನ್ನು ಮಾಡಲಿ. ನಾನು ಹೇಳುವುದನ್ನು ತಾವು ಪೂರ್ತಿ ಕೇಳಿ. ಅವರು ಹೇಳಿದಂತಹ ವಿಷಯದಲ್ಲಿ ಯಾವುದೇ ತಿರುಳು ಇಲ್ಲ ಎಂದು ಹೇಳುತ್ತೇನೆ. ದಯಮಾಡಿ, ಇದನ್ನು ಆಳವಾಗಿ ನೋಡಬೇಕೆಂದು ಸನ್ಮಾನ್ಯ ಟೀಕೆ ಮಾಡಿದಂತಹ ಸದಸ್ಯರಲ್ಲಿ ಸವಿನಯವಾಗಿ ಅರಿಕೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಸ್ಟ್ಯಾಂಡಿಂಗ್ ಕಮಿಟಿ ಬಗ್ಗೆ ಕೆಲವರು ತಮ್ಮ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಶ್ರೀಮಾನ್ ಮಲ್ಲಿಕಾರ್ಜುನ್ ಖರ್ಗೆಯವರು ಇಲ್ಲಿ ಇಲ್ಲ, ೩ ಸಮಿತಿಗಳು ಬೆಂಗಳೂರು ನಗರ ಸಭೆಯಲ್ಲಿವೆ. ಅದರ ಜೊತೆಗೆ ೬ ಸಮಿತಿಗಳನ್ನು ಏಕೆ ಮಾಡುತ್ತೀರಿ ಎಂದು ಕೇಳಿದರು. ನಾನು ವಿವರವನ್ನು ಕೊಟ್ಟಿದ್ದೇನೆ. ಬೆಂಗಳೂರು ದೊಡ್ಡ ಜನಸಂಖ್ಯೆಯಿಂದ ಕೂಡಿದಂತಹ ಒಂದು ಪಟ್ಟಣ. ಇಲ್ಲಿ ಸಮಸ್ಯೆಗಳೂ ಹೆಚ್ಚಾಗಿವೆ. ಇರತಕ್ಕಂತಹ ಮೂರು ಸ್ಥಾಯಿ ಸಮಿತಿಗಳಿಂದ ಎಲ್ಲಾ ವ್ಯವಹಾರಗಳನ್ನು ನಡೆಸುವುದು ಸಾಧ್ಯವಿಲ್ಲ. ಹಿಂದೆ ಇದ್ದ ಕಾನೂನು ಪ್ರಕಾರ ಏನು ಸ್ಟ್ಯಾಂಡಿಂಗ್ ಕಮಿಟಿ ಎಂದು ಅಲ್ಲಿದೆ, ನಾನೂ ಕೂಡ ೧೯೬೨ ರಿಂದ ೧೯೫೫ ರವರೆಗೆ ಅಲ್ಲಿಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಬೆಂಗಳೂರಿನ ನಗರ ಸಭೆಯ ಸದಸ್ಯರು ಏನಿದ್ದಾರೆ; ಈ ರೀತಿಯ ಸ್ಥಾಯಿ ಸಮಿತಿಯ ಸಂಖ್ಯೆ ಜಾಸ್ತಿಯಾಗಬೇಕೆಂಬುದನ್ನು ಅವರ ಒಂದು ಮನವಿಯಲ್ಲಿ ಹೇಳಿದ್ದಾರೆ. ನಾನು ಅದನ್ನು ಒಪ್ಪಿಕೊಂಡಿದ್ದೇನೆ. ಸೋಷಿಯಲ್ ಜಸ್ಟೀಸ್ ಕಮಿಟಿ ಎಂಬುದಾಗಿ ಮಾಡಿರುವುದು ಅದು ನನ್ನ ಸ್ವಂತ ತಿಳುವಳಿಕೆಯ ಆಧಾರದ ಮೇಲೆ ಮಾಡಿ, ಇಲ್ಲಿ ಅದನ್ನು ಕಾನೂನಿನ ಚೌಕಟ್ಟಿನಲ್ಲಿ ಇಟ್ಟಿದ್ದೇನೆ. ಆಮೇಲೆ ತಿದ್ದುಪಡಿಯಲ್ಲಿ ತಿಳಿಸಿರತಕ್ಕಂತಹ ವಿಷಯದ ಬಗ್ಗೆ ಮುಂದೆ ಹೇಳುತ್ತೇನೆ. ಆಮೇಲೆ ಕ್ಲಾಸ್–೧೦ ಬಗ್ಗೆ ಬಹಳ ತೀವ್ರವಾದ ವಿರೋಧವನ್ನು ಅವರು ವ್ಯಕ್ತಪಡಿಸಿದ್ದಾರೆ. ಏನೂ ಇಲ್ಲ ಪ್ರತಿಯೊಂದರಲ್ಲೂ ದಯಮಾಡಿ ಯೋಚನೆ ಮಾಡಬೇಕು. ಆಗ ಅರ್ಥವಾಗುತ್ತದೆ.

"288A. No person shall except with the written permission of the Commissioner......"

ಎಂದು ಹೇಳಿದೆ. ರಿಟನ್ ಪರ್ಮಿಷನ್ ಎಂದು ಎಕ್ಸೆಪ್ಟ್ ಆದರೆ, ಕನ್ಫರ್ಮ್ ಮಾಡಿಕೊಳ್ಳಬೇಕು. ಲೆಸನ್ಸ್ ಅನ್ನು ಗ್ರ್ಯಾಂಟ್ ಮಾಡಿಸಿಕೊಂಡು, ಮನೆಯನ್ನು ಕಟ್ಟುವುದನ್ನು ಬಿಟ್ಟು, ಅನಧಿಕೃತವಾಗಿ ಕಟ್ಟಡಗಳು ಅಥವಾ ಮನೆಗಳನ್ನು ಸಾರ್ವಜನಿಕರು ಉಪಯೋಗಿಸತಕ್ಕಂತಹ ಕ್ಷೇತ್ರದಲ್ಲಿ ಕಟ್ಟಿದರೆ, ಅಥವಾ ಬಂದರೆ ಅವುಗಳನ್ನು ನೋಟೀಸ್ ಇಲ್ಲದೆ ತೆಗೆಯಬಹುದು ಎಂದು ಹೇಳುವುದು ಇದರಲ್ಲಿ ಮುಖ್ಯವಾಗಿ ಇರತಕ್ಕಂತಹ ವಿಚಾರ. ಈಗ ಇರತಕ್ಕ ಕಾನೂನು ಪ್ರಕಾರ ಅನಧಿಕೃತವಾದ ಕಟ್ಟಡಗಳು ಅಥವಾ ಇತರೆ ಮನೆಗಳು ಸಾರ್ವಜನಿಕರು ಉಪಯೋಗಿಸತಕ್ಕಂತಹ ಕ್ಷೇತ್ರದಲ್ಲಿ ಹಾಕಿದರೂ ಕೂಡ, ಅದು ಅನಧಿಕೃತ ಎಂದು ಗೊತ್ತಿದ್ದರೂ ಕೂಡ ಅವರಿಗೆ ತಿಳುವಳಿಕೆ ಇಲ್ಲದೆ ಅವುಗಳನ್ನು ತೆಗೆಯುವುದಕ್ಕೆ ಅವಕಾಶ ಇಲ್ಲ ಈಗಿನ ಕಾನೂನಿನಲ್ಲಿ. ಆದ್ದರಿಂದ ಅಂತಹ ಒಂದು ಜಾಗ ಅವರಿಗೆ ಬೇಕು ಎಂದರೆ ಕಾರ್ಪೊರೇಷನ್ನಿನ ಕಮೀಷನ್‌ರವರ ಅಪ್ಪಣೆ ಪಡೆದು ಮಾಡಿಕೊಳ್ಳಬಹುದು.

"288B. No person shall except wi h the written permission of the Commissioner place or deposit......"

ಬರವಣಿಗೆ ಇಲ್ಲದೆ, ಯಾವುದೇ ವಿವರಗಳನ್ನು ನೀಡದೆ, ಸಾರ್ವಜನಿಕರು ಉಪಯೋಗಿಸತಕ್ಕಂತಹ ಜಾಗಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇಲ್ಲ. ಅಂತಹವುಗಳನ್ನು ನೋಟೀಸ್ ಇಲ್ಲದೆ ತೆಗೆಯುವಂತಹ ಅಧಿಕಾರವನ್ನು ಇಲ್ಲಿ ತೆಗೆದುಕೊಂಡಿದ್ದೇವೆ. ತತ್ವ ಹೇಳಿದ್ದಾರೆ ನೋಟೀಸ್ ಇಲ್ಲದೆ ಯಾರೂ ಮಾಡಬಾರದು ಎಂದು ತತ್ವ ಬಹಳ ಚೆನ್ನಾಗಿದೆ. ಬಹಳ ಆಕರ್ಷಣೀಯವಾಗಿದೆ. ಮನಸ್ಸಿಗೆ

ತುಂಬಾ ಸಂತೋಷವಾಗುತ್ತದೆ. ಇದನ್ನು ಕಾರ್ಯರೂಪಕ್ಕೆ ತರದೇ ಇರತಕ್ಕಂತಹ ಸನ್ನಿವೇಶದಲ್ಲಿ ಯೋಚನೆ ಮಾಡಬಹುದು. ಬೆಂಗಳೂರು ನಗರದಲ್ಲಿ ಹಲವಾರು ಕಟ್ಟಡಗಳು ಏನು ಬಂದಿದೆ ಅವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಮಾತನ್ನು ಹೇಳುತ್ತೇನೆ. ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಶನಿವಾರ–ಭಾನುವಾರ ರಜಾ ಇರುತ್ತದೆ. ಶನಿವಾರ ರಾತ್ರಿ ಕಟ್ಟಡವನ್ನು ಅನಧಿಕೃತವಾಗಿ ಪ್ರಾರಂಭ ಮಾಡಿ, ಭಾನುವಾರ ಎಲ್ಲಾ ಕಟ್ಟಿ, ಭಾನುವಾರ ಸಂಜೆ ಹೊತ್ತಿಗೆ ಅದಕ್ಕೆ ಸುಣ್ಣ–ಬಣ್ಣ ಬಳಿದು ಅದು ಹಳೇ ಕಟ್ಟಡ ಎಂದು ತೋರಿಸಿಕೊಳ್ಳುವುದಕ್ಕೆ ಏನೇನು ಬೇಕೋ ಅದನ್ನೆಲ್ಲಾ ಮಾಡುತ್ತಾರೆ. ಸೋಮವಾರ ಅಧಿಕಾರಿಗಳು ಹೋಗಿ ಇದು ಅಧಿಕೃತ ಕಟ್ಟಡ ಎಂದು ಕೇಳಿದಾಗ, ಇಲ್ಲ, ನಾವು ಈ ಕಟ್ಟಡದಲ್ಲಿ ೧೫ ವರ್ಷಗಳಿಂದಲೂ ವಾಸಮಾಡುತ್ತಿದ್ದೇವೆ ಹೇಳುತ್ತಾರೆ ಅದನ್ನು ಅಧಿಕಾರಿಗಳು ಹೋಗಿ ಕೆಡವುದಕ್ಕಾಗುವುದಿಲ್ಲ. ಇದು ಪರಿಸ್ಥಿತಿ. ಒಂದು ದಿನ ನಾನು ಹೋಟಲ್ಲಿಗೆ ಹೋದೆ. ಆ ಹೋಟೆಲ್ಲಿನ ಹೆಸರು ಹೇಳುವುದು ಬೇಡ. ಸಂಜೆ ಸಮಯ ಊಟ ಮಾಡೋಣ ಎಂದು ಹೋದೆ. ಅಲ್ಲಿ ಹೋಗಿ ಕಾರಿನಲ್ಲೇ ಇದ್ದುಕೊಂಡು ಇಡ್ಲಿಯನ್ನೋ ಒಡೆಯನ್ನೋ ತರಿಸಿಕೊಂಡು ತಿನ್ನುತ್ತಿದ್ದೆಲ್ಲಾವಲಿ ರಸ್ತೆಗೆ ಎದುರಿನಲ್ಲೇ ಕೇವಲ ಅರ್ಧ ಗಂಟೆಯಲ್ಲಿ ನಾಲ್ಕು ಗೋಡೆಗಳು ಎದ್ದು ಬಿಟ್ಟವು. ಇಂತಹವುಗಳನ್ನು ಹೇಗೆ ನಿಗ್ರಹಿಸಬೇಕೆಂಬುದರ ಬಗ್ಗೆ ಯೋಚನೆ ಮಾಡಿ, ಈ ಒಂದು ಅಧಿಕಾರವನ್ನು ಕಾರ್ಪೊರೇಷನ್ ಕಮೀಷನರ್‌ರವರಿಗೆ ಕೊಟ್ಟಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆ ರೀತಿ ಆಗುತ್ತಿರುವುದನ್ನು ನೀವು ನೋಡಿದಿರಲ್ಲ. ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು ?

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೆ ಉತ್ತರವನ್ನು ಆಮೇಲೆ ಪರ್ಸನಲ್ಲಾಗಿ ಹೇಳುತ್ತೇನೆ. ಇಂತಹ ಕಟ್ಟಡಗಳನ್ನು ಅನಧಿಕೃತವಾಗಿ ಕಟ್ಟುವುದಾಗಲಿ, ಪರವಾನಗಿ ತೆಗೆದುಕೊಳ್ಳದೆ ಕಟ್ಟಿದ್ದರೂ, ನೋಟೀಸ್ ಇಲ್ಲದೆ ಆ ಕಟ್ಟಡವನ್ನು ಕೆಡುವುದಕ್ಕೆ ಅವಕಾಶ ಇಲ್ಲ. ಅದಕ್ಕೋಸ್ಕರ ಇದನ್ನು ಮಾಡಿದ್ದೇವೆ. ಇದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಿರತಕ್ಕಂತಹದ್ದು. ಸಾರ್ವಜನಿಕರಿಗೆ, ಸಮಾಜದ ಎಲ್ಲಾ ವರ್ಗದ ಜನರಿಗೆ ಉಪಯೋಗವಾಗತಕ್ಕ ಜಾಗಗಳಲ್ಲಿ ಅನಧಿಕೃತ ಕಟ್ಟಡಗಳಾಗಲಿ, ಅನಧಿಕೃತ ವ್ಯವಹಾರಗಳಿಗೆ ಸಂಬಂಧಪಟ್ಟ ಸಾಮಾನುಗಳನ್ನು ತುಂಬುವುದಾಗಲಿ ಪರವಾನಗಿ ಇಲ್ಲದೆ ಮಾಡಿದ್ದರೆ ನೋಟೀಸ್ ಇಲ್ಲದೆ ತೆಗೆಯತಕ್ಕ ಅಧಿಕಾರ ಮಾಡಿದ್ದೇವೆ. ಇದುಕಾನೂನಿಗೆ ವಿರೋಧ ಎಂದು ಶಿವನಂಜಪ್ಪನವರು ಹೇಳಿದರು.

ಶ್ರೀ ಬಿ. ಎಸ್. ಶಿವನಂಜಪ್ಪ ಹಾಗಲ್ಲ.......

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಮಾತನಾಡುವಾಗ ನಾನು ಮಾತನಾಡಲಿಲ್ಲ. ಆದ್ದರಿಂದ ಈಗ ನಾನು ಉತ್ತರ ಕೊಡುವಾಗ ಕೇಳುವ ಸೌಜನ್ಯವನ್ನು ತಾವು ತೋರಿಸಬೇಕು. ಸುಪ್ರೀಂ ಕೋರ್ಟಿಗೆ ಇಂಥದ್ದೇ ಸನ್ನಿವೇಶದಲ್ಲಿ ಬೊಂಬಾಯಿಯಿಂದ ಮತ್ತು ಮದ್ರಾಸಿನಿಂದ ಅಪೀಲುಗಳು ಹೋದವು. ಸುಪ್ರೀಂ ಕೋರ್ಟಿನಲ್ಲಿ ಕಾನ್‌ಸ್ಟಿಟ್ಯೂಷನ್ ಬೆಂಚಿನವರು ಅದನ್ನು ತೀರ್ಮಾನ ಮಾಡಿದ್ದಾರೆ. ಅನಧಿಕೃತ ಕಟ್ಟಡಗಳನ್ನು ಸಾರ್ವಜನಿಕರು ಉಪಯೋಗಿಸತಕ್ಕ ಜಾಗದಲ್ಲಿ ಬಂದರೆ ನೋಟೀಸ್ ಇಲ್ಲದೆ ತೆಗೆಯಬಹುದೆಂಬ ಸುಪ್ರೀಂ ಕೋರ್ಟಿನ ತೀರ್ಮಾನದ ಅಡಿಯಲ್ಲಿ ನಾವು ಇದನ್ನು ತಂದಿದ್ದೇವೆ. ಇದು ಕಾನೂನು ಬದ್ಧವಾಗಿದೆ, ಸಂವಿಧಾನಬದ್ಧವಾಗಿದೆ. Law declared by the Supreme Court under Article 141 shall be binding on all High Courts in this country. It is the law. ಮಾನ್ಯ ವೆಂಕಟರಾಮಯ್ಯನವರು ಸಿವಿಲ್ ಪ್ರೊಸೀಜರ್ ಕೋಡಿನ ಸೆಕ್ಷನ್ ೮೦ನ್ನು ಹೇಳುತ್ತಿದ್ದರು. ಅಲ್ಲಿಯೂ ಕೂಡ ಇದೇ ಇದೆ. ಸಾಮಾನ್ಯವಾಗಿ ಸರ್ಕಾರದ ಮೇಲೆ ದಾವಾ ಹಾಕಬೇಕಾದರೆ ನೋಟೀಸ್ ಕೊಟ್ಟು ಹಾಕಬೇಕು. ಆ ರೀತಿ ಹಾಕದಿದ್ದರೆ ದಾವ ಊರ್ಜಿತವಾಗುವುದಿಲ್ಲವೆಂದು ವಿಶೇಷವಾಗಿ ಹೇಳಿದ್ದಾರೆ. ನಾವು ಕಾನೂನು ಬಾಹಿರವಾಗಿ, ಸಂವಿಧಾನಕ್ಕೆ ವಿರುದ್ಧವಾಗಿ ಯಾವ ಕೆಲಸವನ್ನೂ ಮಾಡಿಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕೆಲಸ ಮಾಡಿದ್ದೇವೆ. ಊರಿನ ರಕ್ಷಣೆ, ಊರಿನ ಜನರ ಸೌಖ್ಯವನ್ನು ಕಾಪಾಡುವುದಕ್ಕೆ, ಅವರ ಆರೋಗ್ಯವನ್ನು ಕಾಪಾಡುವುದಕ್ಕೆ ಎಲ್ಲರೂ ಸಾರ್ವಜನಿಕ ಸ್ವತ್ತುಗಳನ್ನು ನಿರುಪಾಧಿಕ ದೃಷ್ಟಿಯಿಂದ ಉಪಯೋಗಿಸತಕ್ಕ ಅವಕಾಶವನ್ನು ಎಲ್ಲರಿಗೂ ಉಂಟುಮಾಡುವ ದೃಷ್ಟಿಯಿಂದ ಈ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನಮಾಡಿದ್ದೇವೆ. ವೆಂಕಟರಾಮಯ್ಯನವರು ಮಾತನಾಡುತ್ತಾ, ಈ ಕಾನೂನು ಬಂದರೆ ಮಾಮೂಲು ಜಾಸ್ತಿಯಾಗುತ್ತದೆಂದರು. ಈ ಪ್ರಪಂಚದಲ್ಲಿರತಕ್ಕ ಯಾವ ದೇಶದಲ್ಲೇ ಆಗಲಿ, ಎಂತಹ ಸರ್ಕಾರವಾಗಲಿ ಕಾನೂನು ಇಲ್ಲದೆ ಯಾವುದಾದರೂ ಸರ್ಕಾರ ನಡೆಸತಕ್ಕ ಉದಾಹರಣೆಯನ್ನು

ಕೊಟ್ಟರೆ ಅದನ್ನು ಅನುಸರಿಸುವುದಕ್ಕೆ ನನ್ನ ಮಟ್ಟಿಗಾದರೂ ಪ್ರಯತ್ನ ಮಾಡುತ್ತೇನೆ. ಇನ್ನು ಜಾಸ್ತಿ ಮಾಮೂಲು ಕೊಡುವುದರ ಬಗ್ಗೆ ಹೇಳುವುದಾದರೆ ಅದರ ಬಗ್ಗೆ ಅವರಿಗೆ ಅನುಭವ ಇದೆ ಎಂದು ಕಾಣುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾಮೂಲು ಅಂದರೆ......

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಈಗ ಏನೂ ಮಾತನಾಡಬಾರದು. ಅವರಿಗೆ ಉತ್ತರ ಹೇಳುವುದಕ್ಕೆ ಹಕ್ಕಿದೆ. ನೀವು ಈ ರೀತಿ ಮಾತನಾಡಿದರೆ ಇನ್ನೂ ಅನೇಕ ಜನ ಮಾತನಾಡಲಿಕ್ಕೆ ಶುರು ಮಾಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಸೆಕ್ಷನ್ ೩೦೧ ಕ್ಕೆ ಅಮೆಂಡ್‌ಮೆಂಟ್ ಎಂದರೆ ಮಾನ್ಯ ಸದಸ್ಯರಿಗೆ ಹೇಳುವುದು ಇಷ್ಟೆ: ಮನೆ ಕಟ್ಟುವುದಕ್ಕೆ ಪರವಾನಗಿ ಕೊಡತಕ್ಕ ಕಾನೂನು ಹೀಗಿದೆ, ಒಬ್ಬ ವ್ಯಕ್ತಿ ಅರ್ಜಿ ಕೊಟ್ಟ ಒಂದು ತಿಂಗಳಲ್ಲಿ ಪರವಾನಗಿ ಕೊಡತಕ್ಕವ್ಯವಸ್ಥೆಯನ್ನು ಕಾರ್ಪೊರೇಷನ್ ಮಾಡಬೇಕು. ೩೦ದಿನ ಗಳೊಳಗೆ ಅವರು ಪರವಾನಗಿ ಕೊಡದೆ ಹೋದರೆ ಡೀಮ್ಡ್ ಟು ಹ್ಯಾವ್ ಬೀನ್ ಗ್ರಾಂಟೆಡ್ ಎಂದು ಈಗಿನ ಕಾನೂನಿನಅರ್ಥ. ಇದನ್ನು ದುರುಪಯೋಗ ಪಡಿಸಿಕೊಂಡು ಬಹು ಅಂತಸ್ತಿನ ಕಟ್ಟಡಗಳು ಬಂದವು. ಇದರ ಬಗ್ಗೆ ಹೈಕೋರ್ಟಿನಲ್ಲಿ ಸಾರ್ವಜನಿಕರು ಪ್ರಶ್ನೆಮಾಡಿದಾಗ ಆ ರೀತಿ ಕಟ್ಟಡಗಳು ಬಂದಿರುವುದು ಕಾನೂನಿಗೆ ವಿರುದ್ಧ ಎಂದು ಹೈಕೋರ್ಟಿನವರು ತೀರ್ಮಾನಿಸಿದರು. ಅದರ ಮೇಲೆ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಿರುವುದರಿಂದ ಅಲ್ಲಿಂದ ತೀರ್ಮಾನ ಬರಬೇಕಾಗಿದೆ. ಅದನ್ನು ಸರಿಪಡಿಸುವುದಕ್ಕೆ ಇದರಲ್ಲಿ ಪ್ರಯತ್ನ ಮಾಡಿದ್ದೇವೆ. ಅದೇನೆಂದರೆ, ೩೦ ದಿನಗಳೊಳಗೆ ಲೈಸೆನ್ಸ್ ಕೊಡುತ್ತೇವೆ ಅಥವಾ ಇಲ್ಲ ಎಂಬುದನ್ನು ಹೇಳಬೇಕು. ಅಷ್ಟರೊಳಗೆ ಅರ್ಜಿದಾರನಿಗೆ ಯಾವ ಒಂದು ನೋಟೀಸು ಕಾರ್ಪೊರೇಷನ್ ಕಮೀಷನರ್‌ರವರಿಂದ ಬಾರದೆ ಹೋದರೆ, ಅರ್ಜಿದಾರನೇ ನಾನು ಇಂಥ ಲೈಸೆನ್ಸ್‌ಗೆ ಅರ್ಜಿ ಹಾಕಿದ್ದೇವೆ, ಇದುವರೆಗೆ ಬಂದಿಲ್ಲವೆಂದು ಕಮೀಷನರಿಗೆ ತಿಳಿಸತಕ್ಕ ತಿಳುವಳಿಕೆ ನೋಟೀಸ್ ಕೊಡಬೇಕೆಂದು ಇದರಲ್ಲಿ ಮಾಡಿದ್ದೇವೆ. ಇದರಿಂದ ಅರ್ಜಿ ಕೊಟ್ಟೂ ಕೆಲಸ ಆಗಿಲ್ಲ, ಏನೋ ತೊಂದರೆ ಯಾಗಿದೆ ಎಂಬುದು ಕಮಿಷನರ್ ತಿಳುವಳಿಕೆಗೆ ಬಂದು ಅಂಥ ವಿಷಯಗಳನ್ನು ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಇದರಲ್ಲಿ ಅವಕಾಶವಾಗುತ್ತದೆ.

(ಕೃಷ್ಣನ್ ಮತ್ತು ನಾಯಕ್ ಅವರುಗಳು ಮಾತನಾಡಲು ನಿಂತರು)

ಅಧ್ಯಕ್ಷರು. —ಮಾನ್ಯ ಕೃಷ್ಣನ್‌ರವರೇ ನೀವು ಆಗಾಗ್ಗೆ ಮಾತನಾಡುವುದನ್ನು ಕಡಿಮೆ ಮಾಡಲಿಲ್ಲ. ನಾಯಕರೇ, ನೀವು ಮಾತನಾಡುವುದು ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಡೀಮ್ಡ್ ಪರ್ಮಿಷನ್ ಎಂದು ಏನಿದೆ ಅದನ್ನು ತಪ್ಪಿಸುವುದಕ್ಕೆ ಇದು ಉಪಯೋಗವಾಗುತ್ತದೆಂದು ತಿಳಿದುಕೊಂಡಿದ್ದೇನೆ. ಇದೇ ನನ್ನ ಮುಖ್ಯ ಉದ್ದೇಶ. ಆಮೇಲೆ ಸೆಕ್ಷನ್ ೩೧೧ನ್ನು ಓದಿದರೆ ಗೊತ್ತಾಗುತ್ತದೆ.

> "Not withstanding anything contained in sub-section (i), where permission is granted to any person for erection of a building having more than one floor, such sperson shall, with in one month after completion of execution of any of the floors of such building, deliver of send or cuase to be delivered or sent to the Commissioner at his office, a notice in writing of such completion accompanied by a certificate in the form prescribed and shall give to the Commissioner all necessary facilities for inspection of such floor of the building and may apply for permission to occupy such floor of the building".

ನಾನು ಬಿಲ್ಡಿಂಗನ್ನು ಕಂಪ್ಲೀಟ್ ಮಾಡಿದ್ದೇನೆ, ನೀವು ಕೊಟ್ಟರತಕ್ಕ ಪರವಾನಗಿ ಪ್ರಕಾರ ಕಟ್ಟಿದ್ದೇನೆ, ಪ್ಲಾನ್ ಪ್ರಕಾರ ಕಟ್ಟಿದ್ದೇನೆ, ಆದ್ದರಿಂದ ನನಗೆ ಅದನ್ನು ಆಕ್ಯುಪೈ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನೋಟೀಸ್ ಕೊಡಬೇಕೆಂದು ಇದೆ. ಗಂಗಾರಾಂ ಕಟ್ಟಡದ ಬಗ್ಗೆ ವಿಚಾರ ಮಾಡಿ

ಇದರ ಹಿನ್ನೆಲೆಯಲ್ಲಿ ಮಾಡಿದ್ದು ಎಂದು ಮೊಯಿಲಿಯವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ಏನೂ ಮಾಡಿಲ್ಲವೆಂದು ಅವರ ಮಾತಿನ ದಾಟಿಯಿಂದ ಕೇಳಿದ್ದೆನು. ಆ ಬಗ್ಗೆ ಪ್ರತ್ಯೇಕವಾಗಿ ಕೇಳಿದರೆ ಉತ್ತರಿಸುವುದಕ್ಕೆ ಸಿದ್ಧನಿದ್ದೇನೆ. ಆದರೆ ಇದಕ್ಕೆ ಸಂಬಂಧ ಪಟ್ಟ ಹಾಗೆ ಕ್ರಮ ತೆಗೆದು ಕೊಂಡಿದ್ದೇವೆ. ಅಧಿಕಾರಿಗಳ ಮೇಲೆ ಇಲಾಖೆ ಕ್ರಮ ತೆಗೆದುಕೊಳ್ಳತಕ್ಕ ಕಾರ್ಯ ಪ್ರಾರಂಭವಾಗಿದೆ. ಬಿಲ್ಡಿಂಗ್ ಲೈಸೆನ್ಸ್ ಕೊಡುವುದಕ್ಕೆ ಎರಡು ಕಮಿಟಿಗಳನ್ನು ಮಾಡಿದ್ದೇವೆ. ಅವರು ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟುವ ಬಗ್ಗೆ ಯಾವ ರೀತಿ ಇರಬೇಕೆಂದು ಶಿಫಾರಸ್ಸು ಮಾಡುತ್ತಾರೆ ಆ ಪ್ರಕಾರ ಅವರಿಂದ ಶಿಫಾರಸ್ಸು ಬಂದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೇವೆ. ಏತನ್ಮಧ್ಯೆ ಡಾ. ವಿಶ್ವನಾಥ್, ಸ್ಟ್ರಕ್ಚರಲ್ ಇಂಜಿನಿಯರ್ ಅವರು ಕೊಟ್ಟ ಇಂಟರಿಂ ರಿಪೋರ್ಟ್ ಪ್ರಕಾರ 8 ಅಂತಸ್ತು ಕಟ್ಟುವುದಕ್ಕೆ ಅವಕಾಶ ಕೊಡಬಹುದೆಂದು ಹೇಳಿದ್ದಾರೆ. ಅದರಂತೆ ಕೊಡುತ್ತಿದ್ದೇವೆ. ಅದನ್ನು ಗಮನದಲ್ಲಿಟ್ಟುಕೊಂಡು ಈ ತಿದ್ದುಪಡಿಯನ್ನು ಮಾಡಿದ್ದೇವೆ. ಅದರಿಂದ ಯಾರಿಗೂ ಏನೂ ತೊಂದರೆ ಇಲ್ಲವೆಂಬ ತಿಳುವಳಿಕೆಯ ಆಧಾರದ ಮೇಲೆ ಮಾಡಿದ್ದೇವೆ. ಇನ್ನು ಸ್ಯೂಟ್ ಬಗ್ಗೆ ಮಾತನಾಡಿದ್ದಾರೆ. ಏನು ಹೀಗೆ ಮಾತನಾಡಿದ್ದೀರೆಂದರೆ ಸ್ಯೂಟ್ ಹಾಕಬಾರದೆಂದು ಅಲ್ಲ. ಇದು ಏನಾಗುತ್ತದೆಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಾನು ಬಳ್ಳಾರಿಗೆ ಹೋಗಿದ್ದಾಗ ಅಲ್ಲಿ ಒಂದು ನೀರಾವರಿ ಚಾನಲ್ ಅನ್ನು ತೆಗೆಯುತ್ತಿದ್ದರು. ಚಾನಲ್‌ಗೂ ನೀರು ಹೋಗತಕ್ಕ ಭೂಮಿಗೂ ಒಂದು ಅಡಿ ಅಂತ ಇತ್ತು. ಅಲ್ಲಿ ಒಬ್ಬ ರೈತ ನನಗೆ ನೀರು ಬರಬೇಕೆಂದು ಪಂಪ್ ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ. ಅವನು ಇಂಜಕ್ಷನ್ ಆರ್ಡರ್ ತೆಗೆದುಕೊಂಡ. ಅದರ ಮೇಲೆ ಅಬ್‌ಜಕ್ಷನ್ ಹಾಕಿ ಸ್ಯೂಟ್ ಎಲ್ಲಾ ತೀರ್ಮಾನವಾಗಬೇಕಾದರೆ ಹತ್ತು ವರ್ಷ ಆಯಿತು. ಆಮೇಲೆ ಪಂಪ್ ತೆಗೆಯಬೇಕಾಗಿ ಬಂತು ಅವನಿಂದ ಹತ್ತು ವರ್ಷಗಳ ಕಾಲ ನೀರನ್ನು ಉಪಯೋಗಿಸಿ ಕೊಳ್ಳತಕ್ಕ ಪ್ರಯತ್ನ ನಡೆಯಿತು. ಇಂಥದ್ದನ್ನು ತಪ್ಪಿಸಬೇಕು. ಕಾರ್ಪೋರೇಷನ್‌ನವರು ಸಾರ್ವಜನಿಕ ಹಿತದೃಷ್ಟಿಯಿಂದ ಯಾವುದಾದರೂ ಕೆಲಸವನ್ನು ಕೈಗೊಂಡಾಗ ಅದನ್ನು ಪ್ರಶ್ನೆ ಮಾಡಿ ಕೋರ್ಟಿನಲ್ಲಿ ದಾವಾ ಹಾಕಿ ಇಂಜಂಕ್ಷನ್ ಆರ್ಡರ್ ಕೇಳತಕ್ಕ ಸಮಯದಲ್ಲಿ ಕಾರ್ಪೋರೇಷನ್ ಅನ್ನು ಕೇಳದೆ ಇಂಜಂಕ್ಷನ್ ಆರ್ಡರನ್ನು ಕೊಡಬಾರದೆಂದು ಮಾಡಿದ್ದೇವೆ. ಅರ್ಜಿದಾರನನ್ನು ಮತ್ತು ಪ್ರತಿವಾದಿ ಗಳನ್ನು ಕೇಳಿ ಯಾವುದಾದರೂ ತೀರ್ಮಾನ ಕೊಡಬಹುದು. ಕೋರ್ಟಿನ ಅಧಿಕಾರವನ್ನು ನಾವೇನು ತೆಗೆದುಕೊಂಡಿಲ್ಲ. ಇದು ಸಿವಿಲ್ ಪ್ರೊಸೀಜರ್ ಕೋಡ್‌ನಲ್ಲಿದೆ. ಅದರಿಂದ ಯಾರಿಗೂ ತೊಂದರೆ ಇಲ್ಲ. ಇದನ್ನು ಇನ್ನೊಂದು ಸಾರಿ ಓದುತ್ತೇನೆ ಕೇಳಿ.

> "A suit to obtain an urgent or immediate relief against the corporation or any municipal authority corporation officer or servant in respect of any act done or purporting to be done by such officer or servent in his official capacity may be instituted with the leave of the court, without serving any notice as required by sub-section (i)......"

ಆದ್ದರಿಂದ ಯಾರಿಗೂ ತೊಂದರೆ ಇಲ್ಲ. ಕಾರ್ಪೊರೇಷನ್ ವಿರುದ್ಧ ಇಂಜಕ್ಷನ್ ಆರ್ಡರ್ ಕೊಡತಕ್ಕ ಸಮಯದಲ್ಲಿ ಕಾರ್ಪೊರೇಷನ್‌ನವರನ್ನು ಕೇಳಿ ಇಂಜಕ್ಷನ್ ಆರ್ಡರ್ ಕೊಡಿ, ಅವರನ್ನು ಕೇಳದೆ ಮಾಡ ಬೇಡಿ. ಇದರಿಂದ ಸಾರ್ವಜನಿಕ ಕೆಲಸಕ್ಕೆ ತೊಂದರೆ ಬರುತ್ತದೆ, ಅಧಿಕಾರಿಗಳಿಗೆ ತೊಂದರೆ ಬರುತ್ತದೆ. ಇದರಿಂದ ಕೋರ್ಟಿಗೆ ಹೋಗತಕ್ಕಂಥ ಅರ್ಜಿದಾರನಿಗೆ ತೊಂದರೆ ಇಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡತಕ್ಕಂಥ ಲಾಯರು ಗಳಿಗೆ ಇದು ದಿನವಹಿ ನಡೆಯತಕ್ಕಂಥ ಕೆಲಸ. ಸನ್ಮಾನ್ಯ ಸದಸ್ಯರಿಗೆ ಇದು ಗೊತ್ತಿದೆ. ಇದರಲ್ಲಿ ವಿಶೇಷ ವಾದಂಥದ್ದು ಏನೂ ಇಲ್ಲ. ಆಮೇಲೆ ಅಷ್ಟೇ ಮುಖ್ಯವಾಗಿ ಪ್ರಸ್ತಾಪವಾಗಿರತಕ್ಕಂಥದ್ದು, ಟೀಕೆ ಟಿಪ್ಪಣಿ ಗಳು ಬಂದಿರುವುದು. ಇನ್ನು ಪ್ರತ್ಯೇಕವಾಗಿ ಒಬ್ಬೊಬ್ಬರಿಗೆ ಉತ್ತರ ಕೊಡತಕ್ಕಂಥ ಅವಶ್ಯಕತೆ ಏನೂ ಕಾಣುವುದಿಲ್ಲ ಎಂದು ನನಗನ್ನಿಸುತ್ತದೆ. ಬಡವರಿಗೆ ವಿರುದ್ಧವಾಗಿದೆ ಎಂದು ಹೇಳುತ್ತಿದ್ದಾರೆ. ಇದು ಬಡವರಿಗೆ ವಿರುದ್ಧವಾಗಿಲ್ಲ. ಬಡವರಾಗಲೀ, ಬಲ್ಲಿದರಾಗಲೀ ಸಾರ್ವಜನಿಕರಿಗೆ ಕಾದಿರಿಸಲ್ಪಟ್ಟಂಥ ಸಾರ್ವಜನಿಕ ಸ್ಥಳಗಳಲ್ಲಿ ರಸ್ತೆ ಆಗಲೀ, ಕನ್‌ಸರ್‌ವೆನ್ಸಿ ಆಗಲಿ, ಫುಟ್‌ಪಾತ್ ಆಗಲೀ ಇದರ ಮೇಲೆ ಅನಧಿಕೃತ ಕಟ್ಟಡಗಳು ಬರಬಾರದು. ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಬೆಂಗಳೂರಿನಲ್ಲಿ ಈಗಾಗಲೇ ರಸ್ತೆಗಳ ಅಗಲ ಕಡಿಮೆಯಾಗಿದೆ. ಊರು ಬೃಹದಾಕಾರವಾಗಿ ಬೆಳೆದಿದೆ. ನಮ್ಮ ನಗರದಲ್ಲಿ ವರ್ಷಕ್ಕೆ ನಾಲ್ಕು ಸಾವಿರ ಮೋಟಾರು ಅಪಘಾತಗಳು ನಡೆಯುತ್ತವೆ. ದಿನಕ್ಕೆ

ಕನಿಷ್ಟಪಕ್ಷ ಒಬ್ಬನಾದರೂ ಈ ಊರಿನಲ್ಲಿ ಸಾಯುತ್ತಾರೆ. ಈ ಮೋಟಾರು ಅಪಘಾತಗಳಲ್ಲಿ ರಸ್ತೆ ಇಬ್ಬದಿಯಲ್ಲಿ ಯಾವ ಪರವಾನಿಗೆ ಇಲ್ಲದೆ ಮಾರಾಟಗಾರರಾಗಲೀ, ಮತ್ತೊಬ್ಬರಾಗಲೀ ಬಂದರೆ ವಾಹನ ಸಂಚಾರ ಹೇಗೆ ಆಗುತ್ತದೆ ? ಮನುಷ್ಯ ಸಂಚಾರ ಹೇಗೆ ಆಗುತ್ತದೆ ? ಮಲ್ಲೇಶ್ವರಂ, ಗಾಂಧಿಬಜಾರ್ ನಲ್ಲಿ ಮಾರ್ಕೆಟ್ ಇದೆ. ಒಳಗೆ ಅಂಗಡಿಗಳನ್ನು ಇಟ್ಟುಕೊಂಡು ಲೈಸೆನ್ಸ್ ತೆಗೆದುಕೊಂಡಿರುವವರು, ಈ ರಸ್ತೆ ಬದಿಯಲ್ಲಿ ಫುಟ್‌ಪಾತ್ ಈ ಕಡೆಯಿಂದ ಆ ಕಡೆಯುವರೆಗೂ ಅಂಗಡಿಗಳನ್ನು ಇಟ್ಟಿರುತ್ತಾರೆ. ನಾವು ಅವರನ್ನು ಏನೂ ಮಾಡುವುದಕ್ಕಾಗುವುದಿಲ್ಲ. ಕೋರ್ಟಿಗೆ ಹೋಗುತ್ತಾರೆ, ಇಂಜಕ್ಷನ್ ಆರ್ಡರ್ ತೆಗೆದುಕೊಂಡು ಬರುತ್ತಾರೆ. ಇವರನ್ನು ಹೇಗೆ ನಿಯಂತ್ರಣಕ್ಕೆ ತೆಗೆದುಕೊಳ್ಳುವುದಕ್ಕೆ ಬರುತ್ತದೆ ? ಇದು ಬಡವರ ವಿರುದ್ಧವಾಗಿದೆ ಎಂದು ಹೇಳುತ್ತೀರಿ. ನಾನು ಪುರಂದರ ದಾಸ. ವಿವರ ಹೇಳಿದರೆ ಖರ್ಗೆಯುವರಿಗೆ ಕೋಪ ಬರುತ್ತದೆ, ಹುರಿದು ಬೀಳುತ್ತಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಏನಾದರೂ ತಪ್ಪು ಮಾಡಿದರೆ ಐ ಆ್ಯಮ್ ರೆಡಿ ಟು ಫೇಸ್............

ಅಧ್ಯಕ್ಷರು.—ಮಾನ್ಯ ಖರ್ಗೆಯುವರೇ, ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯುವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಏನೂ ವಿರುದ್ಧವಾಗಿ......

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಏನೂ ವಿರುದ್ಧವಾಗಿ ಹೇಳಲಿಲ್ಲ.

ಅಧ್ಯಕ್ಷರು.—ಅವರು ಮುಗಿಸಲಿ. ದಯುವಿಟ್ಟು ಕುಳಿತುಕೊಳ್ಳಿ. ತಾವು ಮಾತನಾಡುವಾಗ ಒಬ್ಬರು ಇಂಟರ್‌ಫಿಯರ್ ಮಾಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಏನೂ ಇಂಟರ್‌ಫಿಯರ್ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೋಯಿಲಿ.—ನಾವೆಲ್ಲಾ ಮಾತನಾಡಿದ್ದುದು ಒಪ್ಪಿಗೆಯಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಪ್ರಾರಂಭದಲ್ಲಿ ಈ ತಿದ್ದುಪಡಿ ಮಸೂದೆಯುನ್ನು ಅದರ ಒಂದು ಭಾಗವನ್ನು ಓದಿ ತಾವು ಟೀಕೆ ಮಾಡಿ ಸನ್ಮಾನ್ಯ ಧರ್ಮಸಿಂಗ್‌ರವರಲ್ಲಿ ಹೇಳುವುದಕ್ಕೆ ಹೊರಟಾಗ ಸನ್ಮಾನ್ಯ ಕೃಷ್ಣನ್‌ರವರು ನೀವು ಏತಕ್ಕೆ ಅಡ್ಡ ಬರುತ್ತೀರಿ ಎಂದು ಹೇಳಿದರು. ನಾನು ಬಾಯಿ ಮುಚ್ಚಿ ಕುಳಿತಿದ್ದೆ. ಕೊನೆಯಲ್ಲಿ ಮಾತನಾಡುವಾಗ ಏನು ಹೇಳಿದರೂ ಕೂಡಾ ಸನ್ಮಾನ್ಯ ಸಚಿವರು ಕಲ್ಲಿನ ಹಾಗೆ ಕುಳಿತುಬಿಟ್ಟಿದ್ದಾರೆ ಎಂದು ಹೇಳುತ್ತೀರಿ. ನನ್ನ ಪರಿಸ್ಥಿತಿ ನೋಡಿ. ಸುಮ್ಮನೆ ಇದ್ದರೂ ಕಷ್ಟ, ಮಾತನಾಡಿದರೂ ಕಷ್ಟ, ಸಭೆಯಲ್ಲಿ ಇದ್ದರೂ ಕಷ್ಟ, ಇಲ್ಲದಿದ್ದರೂ ಕಷ್ಟ.

ಶ್ರೀ ಬಿ. ಬಸವಲಿಂಗಪ್ಪ.—ಚೆನ್ನಾಗಿ ಮಾತನಾಡುತ್ತೀರಿ. ನಿನ್ನೆ ಮಾತನಾಡುವಾಗ ರಿಲೆವೆನ್ಸಿ ಎನ್ನುವ ಒಂದು ಪದವನ್ನು ಎತ್ತಿದ್ದೀರಿ. ಆದ್ದರಿಂದ ನಾನು ಎತ್ತಿದ್ದೇನೆ. ೩-೪ ತಿದ್ದುಪಡಿಯುನ್ನು ತಂದಿದ್ದೀರಿ. ಈ ತಿದ್ದುಪಡಿಯ ಮೇಲೆ ಉತ್ತರ ಕೊಟ್ಟು ದಯುವಿಟ್ಟು ಕುಳಿತುಕೊಂಡರೆ ಪಾಸ್ ಮಾಡಿಕೊಡುತ್ತೇವೆ; ಸುಮ್ಮನೆ ಏತಕ್ಕೆ ಹೋರಾಟ ಮಾಡುತ್ತೀರಿ ?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಇದು ಸಭೆ, ವಿಧಾನಸಭೆ. ವಿಷಯುಗಳ ಮೇಲೆ ಚರ್ಚೆ ಯಾಗುತ್ತದೆ. ಅವರೂ ಕೂಡಾ ಯಾವ ರೀತಿ ಮಾತನಾಡಬೇಕೆಂಬ ತೀರ್ಮಾನವನ್ನು ಮಾಡಿಕೊಂಡು ಬಂದು ಮಾತನಾಡುತ್ತಾರೆ. ಇದು ವಾದದಲ್ಲಿ ಪ್ರತಿವಾದದಲ್ಲಿ ನಡೆಯುತಕ್ಕದ್ದೆ. ಇದರಲ್ಲಿ ವಿಶೇಷ ಏನೂ ಇಲ್ಲ. ನಾವು ಈ ಸಭೆಯುಲ್ಲಿ ಕೈಗಳಿಂದ ಮಾತನಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವರು ನನ್ನನ್ನು ಮೂದಲಿಸಿ ಮಾತನಾಡಿದಾಗ ಪ್ರತ್ಯುತ್ತರ ಕೊಡದೇ ಹೋದರೆ ಚೆನ್ನಾಗಿ ಕಾಣುವುದಿಲ್ಲ, ನನ್ನ ಮನಸ್ಸಿಗೂ ಸಮಾಧಾನವಾಗುವುದಿಲ್ಲ, ಆದ್ದರಿಂದ ಹೇಳಬೇಕಾಗುತ್ತದೆ. ಆದ್ದರಿಂದ ನನಗೆ ಪ್ರತ್ಯೇಕ ವಾಗಿ ತ್ರಿಶಂಕು ಸ್ವರ್ಗದಲ್ಲಿ ಇರತಕ್ಕಂಥ ಒಂದು ಜಾಗವನ್ನು ಸನ್ಮಾನ್ಯ ಮೊಯಿಲಿಯುವರು ಯಕ್ಷಗಾನ ಮಹಿಮೆಯ ಹಿನ್ನೆಲೆಯುಲ್ಲಿ ಕೊಡುವುದಾದರೆ ನಾನು ಅಲ್ಲಿಗೆ ಹೋಗುವುದಕ್ಕೆ ಸಿದ್ಧನಾಗಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ಅದು ಒಂದು ತರಹ ಗಂಗಾರಾಮ್ ಬಿಲ್ಡಿಂಗ್ ಆದ ಹಾಗೆ ಆಗಬಹುದು. ಆದ್ದರಿಂದ ಅಷ್ಟು ದೂರ ತಾವು ಹೋಗಬಾರದು.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಶ್ರೀನಿವಾಸ್‌ರವರು ಒಂದು ತಾತ್ವಿಕವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ''ಕಾಲಕಾಲಕ್ಕೆ ತಿದ್ದುಪಡಿಯನ್ನು ಮಾಡುತ್ತೀರಿ, ಅಧಿಕಾರಿಗಳು ಕೇಳಿದಾಗ ಮಾಡುತ್ತೀರಿ, ನಾವು ಒಂದೊಂದು ಸಾರಿ ವಿಷಯ ಏನಾದರೂ ಪ್ರಸ್ತಾಪ ಮಾಡಬಹುದು, ಆದರೆ ಒಟ್ಟಿಗೆ ನೋಡಿದರೆ ಇದನ್ನು ತಿಳಿದುಕೊಳ್ಳುವುದೇ ಒಂದು ಕಷ್ಟ. ಕಾನೂನುಗಳನ್ನು ತಿಳಿದುಕೊಳ್ಳುವುದರಲ್ಲಿ ಕಾಲ ವ್ಯಯ ಮಾಡಬೇಕಾಗುತ್ತದೆ ಎಂದು ಹೇಳಿದರು.'' ಒಂದು ದೃಷ್ಟಿಯಲ್ಲಿ ಅವರು ಹೇಳುವ ವಾದದಲ್ಲಿ ಸ್ವಲ್ಪವಟ್ಟಿಗಾದರೂ ಸತ್ವ ಇದೆ ಎಂದು ನಾನು ಅಂದುಕೊಳ್ಳುತ್ತೇನೆ. ಆದರೆ In a developing society, in a society which is dynamic where changes are taking place rapidly beyond one's expectations, law must also fall in confirmity with such developments that are taking place in the Society. Our Constitution has been amended now for over 50 times. Why did it happen ? The fundamental law of this country has been changed and not to speak of this small amendment to the Municipalities Act. This has been necessiated by the dynamic changes that are taking place in this country and perhaps elsewhere also. ಆದ್ದರಿಂದ ಇದನ್ನು ಮಾಡಲೇ ಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡೈನಮಿಕ್ ಛೇಂಜ್ ಇದು.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಸೊಸೈಟಿಯಲ್ಲಿ ಆಗುತ್ತದೆ ಸ್ವಾಮಿ. ತಾವು ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ಏನೇನು ಕಾನೂನನ್ನು ತಂದಿದ್ದೀರಿ ಎಂಬುದು ನನಗೂ ನೆನಪಿದೆ, ನಿಮಗೂ ನೆನಪಿದೆ. ತಮಗೆ ಪೂರ್ವಾಶ್ರಮ ಜ್ಞಾಪಕಕ್ಕೆ ಬರಲಿ. ಸಮಜಾಯಿಷಿ ಹೇಳುವುದು ಇಷ್ಟೆ. ನಾವು ಸಮಾಜದಲ್ಲಿ ಆಡಳಿತ ನಡೆಸತಕ್ಕಂಥ ಸಮಯದಲ್ಲಿ ಕಂಡುಬರತಕ್ಕಂಥ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಆಯಾಯ ಕಾಲಕ್ಕೆ ತಕ್ಕಂಥ ಕಾನೂನುಗಳನ್ನು ಬದಲಾವಣೆ ಮಾಡದೇ ಹೋದರೆ ಜನರ ನಿರೀಕ್ಷೆಗೆ ಸರಿದೂಗತಕ್ಕಂಥ ರೀತಿಯಲ್ಲಿ ಕೆಲಸ ಮಾಡಿದ ಹಾಗೆ ಆಗುವುದಿಲ್ಲ. ಇದರಿಂದ ಜನರಿಗೂ ಸಮಾಧಾನ ವಾಗುವುದಿಲ್ಲ. ಈ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ. ಕೊನೆಯದಾಗಿ ಉತ್ತರ ಕೊಡ ತಕ್ಕಂಥದ್ದು ಇನ್ನೊಂದು ಉಳಿದಿದೆ. ಕಾರ್ಪೊರೇಷನ್‌ನಲ್ಲಿ ಹೆಗ್ಗಣಗಳು ಸೇರಿಕೊಂಡಿವೆ ಎಂದು ನಮ್ಮ ವೆಂಕಟರಾಮಯ್ಯನವರು ಹೇಳಿದರು. ಇದರ ಬಗ್ಗೆ ಇನ್ನು ಹಲವಾರು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಬೆಂಗಳೂರು ಪ್ರಾಧಿಕಾರದಲ್ಲಿ ಇರತಕ್ಕಂಥ ಬಹುತೇಕ ಅಧಿಕಾರಿಗಳ ವರ್ಗಾವಣೆ ಮಾಡಬೇಕೆಂಬ ದೃಷ್ಟಿಯಿಂದ ಊಳನೇ ಇಸವಿಯಲ್ಲಿ ಬಿ.ಡಿ.ಎ. ಆಕ್ಟ್ ಬದಲಾವಣೆ ಮಾಡಿ ಬದಲಾವಣೆ ಮಾಡತಕ್ಕಂಥ ಅಧಿಕಾರವನ್ನು ತೆಗೆದುಕೊಂಡಿದ್ದೇವೆ. ಅದೇ ರೀತಿಯಾಗಿ ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನ್ ಆಕ್ಟ್‌ನಲ್ಲಿ ಬದಲಾವಣೆ ಮಾಡಿ ಅವರನ್ನು ಸ್ಥಳಾಂತರ ಮಾಡತಕ್ಕಂಥ ಒಂದು ಅಧಿಕಾರವನ್ನು ತೆಗೆದುಕೊಂಡಿದ್ದೇವೆ. ಎರಡು ತಿದ್ದುಪಡಿ ವಿಧೇಯಕಗಳು ಈ ಸಭೆಯ ಅಂಗೀಕಾರ ಪಡೆದ ನಂತರ ಅದಕ್ಕೆ ಸಂಬಂಧಪಟ್ಟವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಪ್ರಯತ್ನ ಮಾಡಿದಾಗ ಎರಡೂ ಕಡೆಯಿಂದಲೂ ನಮ್ಮ ಹೈಕೋರ್ಟಿನಲ್ಲಿ ಅರ್ಜಿಗಳನ್ನು ಹಾಕಿ ತಡೆಯಾಜ್ಞೆಯನ್ನು ತಂದಿದ್ದಾರೆ. ಅವು ಸುಮಾರು ೧೫ ಇರಬಹುದು. ಬೇಗ ಇತ್ಯರ್ಥ ಮಾಡಿ ಎಂದು ಅವರಲ್ಲಿ ಮನವಿ ಮಾಡಿದ್ದೇನೆ. ಇತ್ಯರ್ಥ ಆಗಿ ಪರವಾನಿಗೆ ಸಿಕ್ಕಿದರೆ ನಾನು ಅವರನ್ನು ವರ್ಗಾವಣೆ ಮಾಡುತ್ತೇನೆ. ಹೆಗ್ಗಣಗಳು ಇಲ್ಲದೇ ಇರತಕ್ಕಂಥ ಪ್ರದೇಶವನ್ನು ಸನ್ಮಾನ್ಯ ವೆಂಕಟರಾಮಯ್ಯನವರು ತೋರಿಸಿದರೆ ನಾನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಇದು ಅವಶ್ಯಕವಾಗಿ ಬೇಕಾಗಿರತಕ್ಕಂಥ ತಿದ್ದುಪಡಿಗಳು. ಜನರಿಗೆ ಅನುಕೂಲವನ್ನು, ಸಾರ್ವಜನಿಕರಿಗೆ ಅನುಕೂಲವನ್ನು ಮಾಡಿಕೊಡುವ ತಿದ್ದುಪಡಿಗಳು. ಸಾರ್ವಜನಿಕ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ದಯಮಾಡಿ ಈ ತಿದ್ದುಪಡಿಗಳಿಗೆ ಸನ್ಮಾನ್ಯ ಸದಸ್ಯರುಗಳು ತಮ್ಮ ಬೆಂಬಲವನ್ನು ಸೂಚಿಸಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ:

"೧೯೮೬ನೇ ಇಸವಿಯ ಕರ್ನಾಟಕ ನಗರಸಭೆಗಳ ತಿದ್ದುಪಡಿ ವಿಧೇಯಕವನ್ನು ಸಭೆ ಪರ್ಯಾಲೋಚಿಸಬೇಕು."

ಪ್ರಸ್ತಾವವನ್ನು ಅನುಮೋದಿಸಲಾಯಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

೨ ರಿಂದ ೪ನೇ ಖಂಡಗಳು

ಅಧ್ಯಕ್ಷರು.—ಈಗ ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂಬ ವಿಚಾರವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"೨ರಿಂದ ೪ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ."

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ ೨ರಿಂದ ೪ನೇ ಖಂಡಗಳು ವಿಧೇಯಕದ ಅಂಗವಾದವು

ಖಂಡ ೫

ಅಧ್ಯಕ್ಷರು.—ಖಂಡ ೫ಕ್ಕೆ ಮಾನ್ಯ ಸದಸ್ಯರಾದ ಶ್ರೀ ಎಂ.ಎಸ್. ಕೃಷ್ಣನ್ ಅವರು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ......

ಅಧ್ಯಕ್ಷರು.—ಮುಗಿಸಿಬಿಡೋಣ ಇದನ್ನು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇಲ್ಲ. ನೀವು ಹೇಳಿದ ಹಾಗೆ ನಾವು ಕೋ-ಆಪರೇಟ್ ಮಾಡುತ್ತಿದ್ದೇವೆ.

ಅಧ್ಯಕ್ಷರು.—ತೆಗೆದುಕೊಂಡು ಬಿಟ್ಟಿದ್ದೇವೆ. ಅರ್ಧ ಭಾಗ ಆಗಿಹೋಗಿದೆ. ೫ ನಿಮಿಷದಲ್ಲಿ ಮುಗಿದು ಹೋಗುತ್ತದೆ. ಇಷ್ಟು ಮಂದಿ ಮಾಜಿ ಮಂತ್ರಿಗಳಿದ್ದೀರಿ. ನಿಮಗೆ ಅನುಭವ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಇನ್ನೊಂದು ಮುನಿಸಿಪಾಲಿಟಿಗೆ ಹೋದರೋ ಏನೋ ಅಂದುಕೊಂಡೆವು.

ಅಧ್ಯಕ್ಷರು.—ಮಾನ್ಯ ಕೃಷ್ಣನ್ ಅವರೇ ವಾಪಸ್ ತೆಗೆದು ಕೊಳ್ಳುತೀರಾ ?

ಶ್ರೀ ಎಂ.ಎಸ್. ಕೃಷ್ಣನ್.—ಕೊಟ್ಟಿರುವ ಅಮೆಂಡ್‌ಮೆಂಟ್ ಮೂವ್ ಮಾಡುತ್ತೇನೆ.

ಅಧ್ಯಕ್ಷರು.—ಮಂಡಿಸುತ್ತೀರಾ ?

ಶ್ರೀ ಎಂ.ಎಸ್. ಕೃಷ್ಣನ್.—ಮಂಡಿಸುತ್ತೇನೆ. ನನ್ನ ತಿದ್ದುಪಡಿ ಹೀಗಿದೆ.

For the clause 5, the following shall be substituted:

"In addition to the Standing Committees specified in Section 11, there shall be a social Justice Committee for the Corporation consisting of the Mayor and six other members elected by the Councillors from among themselves, of whom three shall be from the Sch.Castes, two women and one other member"

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ. ಮಾತನಾಡಿ.

ಶ್ರೀ ಎಂ.ಎಸ್. ಕೃಷ್ಣನ್.--ಈ ತಿದ್ದುಪಡಿಯನ್ನು ಏತಕ್ಕೋಸ್ಕರ ತಂದಿದ್ದೇನೆ ಎಂದು ಮೊದಲು ಮಾತನಾಡುವಾಗ ಹೇಳಿದ್ದೆ. ಇನ್ನೂ ಸ್ಪಷ್ಟಪಡಿಸಬೇಕು ಎಂದರೆ ಅವರು ಈಗ ತಂದಿರುವರೀತಿ ಯಲ್ಲಿ

ಬರೀ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರು ಮತ್ತು ಹೆಂಗಸರು ಇರಬಹುದು ಎಂದಿದ್ದರೆ ನನಗನ್ನಿಸುತ್ತದೆ ಸೋಷಿಯಲ್ ಜಸ್ಟೀಸ್ ಸಿಗಬೇಕಾದರೆ ಬರೀ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರಿದ್ದರೆ ಮಾತ್ರ ಎಂಬ ಅಭಿಪ್ರಾಯ ಬರುತ್ತದೆ. ಅದು ಸರಿಯಾದುದಲ್ಲ. ಬೇರೆಯವರ ವಿಚಾರವನ್ನೂ ತಿಳಿದುಕೊಂಡು ಫೈಟ್ ಮಾಡುವ ಜವಾಬ್ದಾರಿ ಇದೆ. ಬೇರೆಯವರೂ ಕೂಡ ಸೋಷಿಯಲ್ ಜಸ್ಟೀಸ್ ಕಮಿಟಿಯಲ್ಲಿ ಇರಬೇಕು. ಬರೀ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಮಾತ್ರ ಅನ್ವಯಿಸಿದರೆ ಖಂಡಿತವಾಗಿ ಅವರಿಗೆ ಕೂಡ ನ್ಯಾಯ ದೊರಕುವುದಿಲ್ಲ. ಬೇರೆಯವರು ಫೈಟ್ ಮಾಡುವ ಜನರಿಲ್ಲ ಇವರು ಮಾತ್ರ ಎಂದು ಹೇಳುವುದಕ್ಕೆ ಅವಕಾಶವಾಗುತ್ತದೆ. ಈ ರೀತಿ ಡಿಸ್ಕ್ರಿಮಿನೇಟ್ ಮಾಡುವುದು ಈಗಿನ ಸಮಾಜದಲ್ಲಿ ಸರಿಯಾದುದಲ್ಲ. ನಾನು ನಂಬರ್ ಬಗ್ಗೆ ಹೇಳುವುದಿಲ್ಲ. ಈ ತತ್ವ ಒಪ್ಪಿಕೊಂಡು ಇನ್ನೂ ಎರಡು ಸೇರಿಸಲಿ. ಬೇಡ ಎಂದು ಹೇಳುವುದಿಲ್ಲ. ಆದರೆ ತತ್ವ ಸರಿಯಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮೇಯರ್ ಅವರು ಸೋಷಿಯಲ್ ಜಸ್ಟೀಸ್ ಕಮಿಟಿಯಲ್ಲಿ ಇರಬೇಕೆಂಬುದು ಅವರ ಅಭಿಪ್ರಾಯ, ಈಗಾಗಲೇ ಅದಕ್ಕೆ ಅವಕಾಶವಿದೆ. Mayor and Deputy Mayor are the official members of the all the committees but they shall not have the right of voting. ಈಗಾಗಲೇ ಅದಕ್ಕೆ ಪ್ರಾವಿಷನ್ ಇದೆ. ಎರಡನೆಯದು ನಮ್ಮ ದೃಷ್ಟಿಯಲ್ಲಿ ಸೋಷಿಯಲ್ ಜಸ್ಟೀಸ್ ಕಮಿಟಿಯಲ್ಲಿ ಅವರೆ ಇರತಕ್ಕದ್ದು ರಕ್ಷಣೆ ಅವರಿಗೆ ಇದೆ, ಹಾಗಿ ಅವರ ಹಿತಾಸಕ್ತಿಗಳನ್ನು ಈ ತರಹ ಇದ್ದರೆ ಒಳ್ಳೆಯದು ಎಂಬುದು ನಮ್ಮ ಅಭಿಪ್ರಾಯ. ಈಗ ಏನು ಮಾಡಿದ್ದೇವೆ ಅದು ಸರಿಹೋಗದೇ ಹೋದರೆ ಮುಂದೆ ಈ ವಿಚಾರ ಯೋಚನೆ ಮಾಡೋಣ ಈಗ ಮಾಡಿರುವುದು ಒಳ್ಳೆಯದು ಎಂಬ ಸಲಹೆ ಬಂದಿದೆ. ಆದ್ದರಿಂದ ಮಾನ್ಯ ಸದಸ್ಯರ ಸಲಹೆಯನ್ನು ಒಪ್ಪಿಕೊಳ್ಳುವುದಕ್ಕೆ ನಾವು ಸಿದ್ಧರಿಲ್ಲ. ಅದನ್ನು ತಿರಸ್ಕರಿಸಬಹುದು.

ಅಧ್ಯಕ್ಷರು.—ಈಗ ಮಾನ್ಯ ಕೃಷ್ಣನ್ ಅವರು ತಂದಿರುವ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

For the clause 5, the following shall be substituted:

In addition to the Standing committee specifified in Section 11, there shall be a Social Justice Committee for the Corporation consisting of the Mayor and six other members elected by the Councillors from mong themselves, of whom three shall be from the Sch. Castes, two women and one other member.''

ತಿದ್ದುಪಡಿಯನ್ನು ತಿರಸ್ಕರಿಸಲಾಯಿತು

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ. ''೫ನೇ ಖಂಡವು ವಿಧೇಯಕದ ಅಂಗವಾಗಿರಬೇಕು''

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು ೫ನೇ ಖಂಡವು ವಿಧೇಯಕದ ಅಂಗವಾಯಿತು

ಖಂಡ ೬ ರಿಂದ ೧೦

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ. ''ಖಂಡ ೬ ರಿಂದ ೧೦ರವರೆಗೆ ವಿಧೇಯಕದ ಅಂಗವಾಗಿರಬೇಕು.''

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ಖಂಡ ೬ ರಿಂದ ೧೦ರವರೆಗೆ ಖಂಡಗಳು ವಿಧೇಯಕದ ಅಂಗವಾದವು

ಖಂಡ ೧೧

ಅಧ್ಯಕ್ಷರು.—ಮಾನ್ಯ ಶ್ರೀ ಕೃಷ್ಣನ್ ಅವರು ಈ ಬಗ್ಗೆ ತಿದ್ದುಪಡಿ ಸೂಚನೆ ಕೊಟ್ಟಿದ್ದಾರೆ. ಅವರು ತಮ್ಮ ತಿದ್ದುಪಡಿಯನ್ನು ದಯವಿಟ್ಟು ಮಂಡಿಸಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ನನ್ನ ತಿದ್ದುಪಡಿ ಹೀಗಿದೆ.

For the Clause 11, the following shall be substituted.

" If the Commissioner has not within the said period of thirty days passed any order, it shall be deemed that the permission requested by the applicant has been granted."

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ. ಮಾತನಾಡಿ.

ಶ್ರೀ ಎಂ.ಎಸ್. ಕೃಷ್ಣನ್.—ಇದರ ಬಗ್ಗೆ ಮಾನ್ಯ ಮಂತ್ರಿಗಳು ಈಗಾಗಲೇ ಒಂದು ಉತ್ತರ ವನ್ನು ಕೊಟ್ಟರು. ಕೊಡುವಾಗ ಏನು ಹೇಳಿದರು ಎಂದರೆ ಹಿಂದೆ 'ಡೀಮಿಂಗ್ ಪ್ರಾವಿಷನ್' ಇತ್ತು ಆ ರೀತಿ ಇದ್ದರೆ ತೊಂದರೆಯಾಗುತ್ತದೆ ಎಂದು ಹೇಳಿದರು. ಆದರೆ ಅದಿಲ್ಲದಿದ್ದರೆ ಈ ಕಡೆ ಜನಗಳಿಗೂ ಕೂಡ ತೊಂದರೆಯಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಕೆಲವು ಪಟ್ಟಭದ್ರಹಿತಾಸಕ್ತಿಗಳು ಮಾಡಿಕೊಂಡಿರಬಹುದು. ಆದರೆ ನೀವು ಹೇಳಿರುವ ರೀತಿಯಲ್ಲಿ ಮಾಡಿದರೆ ಬಹಳ ಜನರಿಗೆ ತೊಂದರೆ ಯಾಗುತ್ತದೆ. ೩೦ ದಿನದಿಂದ ೬೦ ದಿನ ಮಾಡಿದರೂ ತೊಂದರೆ ಇಲ್ಲ. ಆದರೆ ೬೦ ದಿನವಾದರೂ ಉತ್ತರ ಬರದೇ ಹೋದರೆ ಏನು ಮಾಡಬೇಕು ? ಆ ದೃಷ್ಟಿಯಿಂದ ನಾನು ತಂದಿರುವ ತಿದ್ದುಪಡಿ ಸರಿಯಾಗಿದೆ ಎಂದು ಕಾಣುತ್ತದೆ. ೬೦ ದಿನ ಬೇಕಾಗಿಲ್ಲ. ೩೦ದಿನವೇ ಸಾಕು ಅನ್ನಿಸುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರಲ್ಲಿ ದುರುಪಯೋಗಪಡಿಸಿಕೊಳ್ಳತಕ್ಕ ಸಂದರ್ಭಗಳು ಗಮನಕ್ಕೆ ಬಂದಿರುವುದರಿಂದ ಇದನ್ನು ತಪ್ಪಿಸತಕ್ಕ ಉದ್ದೇಶದಿಂದ ನಾವು ತಿದ್ದುಪಡಿಯನ್ನು ತಂದಿದ್ದೇವೆ. ಅವರು permission deemed to have been granted ಎಂದು ಮಾಡಿ ಎಂದು ಹೇಳುತ್ತಾರೆ. ಇದರ ಕಟು ಅನುಭವದ ಹಿನ್ನೆಲೆಯಲ್ಲಿ ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದ ಕ್ಕಾಗುವುದಿಲ್ಲ.

ಅಧ್ಯಕ್ಷರು.—ತಿದ್ದುಪಡಿಯನ್ನು ಈಗ ಮತಕ್ಕೆ ಹಾಕುತ್ತೇನೆ. ಅವರ ತಿದ್ದುಪಡಿ ಹೀಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—೩೦ ದಿವಸ ಆದನಂತರ ಎರಡನೇ ಅಪೊರ್ಚುನಿಟಿಯನ್ನು ಕೊಡುತ್ತೀರಿ, ಕಮಿಷನರ್‌ಗೆ ಲೆಟರ್ ಬರೆಯುವುದು ಎಂದು ಹೇಳಿದ್ದೀರಿ. ಎರಡನೇ ಅಪೊರ್ಚುನಿಟಿ ಕೊಟ್ಟಾಗ ಎಂದರೆ ಏನಾಗುತ್ತದೆ ? ಒಂದೇ ಅಪೊರ್ಚುನಿಟಿ ಇದ್ದಾಗ, ಸೆಕೆಂಡ್ ಅಪೊರ್ಚುನಿಟಿ ಇದ್ದಾಗ ತೊಂದರೆ ಆಗುತ್ತದೆಂದರೆ ಹೇಗೆ ? Because of your inefficiency do you want that the public should suffer ?

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಖಾರ್ಗೆ ಅವರು ಹೇಳಿದ್ದನ್ನು ಒಪ್ಪಿಕೊಳ್ಳಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ನೋಟೀಸ್ ಕೊಡತಕ್ಕ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದೇವೆ. ೩೦ ದಿನದೊಳಗೆ ಪರವಾನಗಿ ಸಿಗದೇ ಹೋದರೆ ನಾವು ಹಾಕಿದ್ದೇವೆ, ಇನ್ನೂ ಪರವಾನಗಿ ಸಿಕ್ಕಿಲ್ಲ, ವಿಚಾರ ಮಾಡಿ ಎಂದು ಗಮನಕ್ಕೆ ತರಬೇಕು. This will bring to the notice of the Commissioner the lapses that are committed below.

ಶ್ರೀ ಎಂ. ವೀರಪ್ಪ ಮೊಯಿಲಿ.—ಆರು ತಿಂಗಳಾದರೂ ಫೈಲ್ ಹಾಗೇ ಇಟ್ಟುಕೊಂಡರೆ......

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನು ತಪ್ಪಿಸುವುದಕ್ಕೆ ಇದು ಒಂದು ಉಪಾಯ......

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರಿಗೆ ರಕ್ಷಣೆ ಎಲ್ಲಿದೆ ? ೬ ತಿಂಗಳು ಒಂದು ವರ್ಷ ವಾದರೂ ಫೈಲನ್ನು ಮೂಲೆ ಗುಂಪು ಮಾಡಿದರೆ ರಕ್ಷಣೆ ಎಲ್ಲಿದೆ ಅವರಿಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇಲ್ಲ ಎಂದರೆ ನೀವೇನೋ ರಕ್ಷಣೆ ಮಾಡುತ್ತೀರಿ ಎಂದು ಹೇಳಬೇಕಾಗಿದೆ.

ಅಧ್ಯಕ್ಷರು.—ಆಗುವುದಿಲ್ಲ ಎಂದು ಹೇಳಿದ್ದಾರೆ. ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ತಿದ್ದುಪಡಿ ಹೀಗಿದೆ: For Clause 11, the following shall be substituted.

"If the Commissioner has not within the said period of thirty days passed any order, it shall be deemed that the permission requested by the applicant has been granted".

ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು ಮತ್ತು ತಿದ್ದುಪಡಿ ಬಿದ್ದು ಹೋಯಿತು

ಅಧ್ಯಕ್ಷರು.—೧೧ನೇ ಖಂಡವು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ. ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ:

"೧೧ನೇ ಖಂಡವು ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ೧೧ನೇ ಖಂಡವು ವಿಧೇಯಕದ ಅಂಗವಾಯಿತು

ಖಂಡ ೧೨ ರಿಂದ ೨೦

ಅಧ್ಯಕ್ಷರು.—ಖಂಡ ೧೨ ರಿಂದ ೨೦ರವರೆಗೆ ಖಂಡಗಳು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ. ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"೧೨ರಿಂದ ೨೦ರವರೆಗೆ ಖಂಡಗಳು ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ೧೨ರಿಂದ ೨೦ನೇ ಖಂಡಗಳು ವಿಧೇಯಕದ ಅಂಗವಾದವು

ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು.—ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ:

"ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾದವು

ಅಂಗೀಕಾರ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ಪ್ರಸ್ತಾವವನ್ನು ಮಂಡಿಸುತ್ತೇನೆ.

"೧೯೮೬ನೇ ಇಸವಿಯ ಕರ್ನಾಟಕ ನಗರಸಭೆಗಳ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಬೇಕು"

ಅಧ್ಯಕ್ಷರು.—ಪ್ರಸ್ತಾವವನ್ನು ಮಂಡಿಸಲಾಗಿದೆ. ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"೧೯೮೬ನೇ ಇಸವಿಯ ಕರ್ನಾಟಕ ನಗರಸಭೆಗಳ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಬೇಕು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ **ಅನುಮೋದನೆ ದೊರಕಿತು**

ಅಧ್ಯಕ್ಷರು.—ಇಂದಿನ ಸಭೆಯನ್ನು ನಾಳೆ ಬೆಳಿಗ್ಗೆ ೧೧ ಗಂಟೆಗೆ ಮುಂದೂಡಲಾಗಿದೆ.
(ಸಂಜೆ ೫—೧೦ಕ್ಕೆ ಸಭೆ ಮುಕ್ತಾಯವಾಗಿ ನಾಳೆ ದಿನಾಂಕ ೨೧—೮—೮೬ರಂದು ಬೆಳಿಗ್ಗೆ ೧೧ ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)

(ಕಾ. ಸ. ೩೧)